ಮಾರ್ಚ್ 22, 2026
41ನೇ ವರ್ಷದಲ್ಲಿ
http//policenews.news  Police News  police_news
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2029
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಆನೇಕಲ್‌ನಲ್ಲಿ ಕಿಡ್ನ್ಯಾಪು-ಡೆಂಕಣಿಕೋಟೆಯಲ್ಲಿ ಆಪು!

# ಜೆಡಿಎಸ್ ಲೀಡರ್ ಮೋಹನ್‌ಬಾಬು ಖಾಸಾ ದೋಸ್ತ್ ಗೋಪಿಯನ್ನು ಕೊಲ್ಲಿಸಿದ್ದು ಹೆಣ್ಣಿಗಾ ಮಣ್ಣಿಗಾ...



ಅಯೋಗ್ಯನ ದೂರವಿಡಿ ಕುಮಾರಣ್ಣ!





## ಹನಿಟ್ರ್ಯಾಪ್ ಬಲೆಗೆ ದಾವಣಗೆರೆ ಉದ್ಯಮಿ!

## ಪ್ರಿಯಕರನ ಜೊತೆಗೂಡಿ ಮಾಜಿ ಪ್ರಿಯಕರನ ಕೊಲೆ: ಕಿರುತೆರೆ ನಟಿ ಸೇರಿ ಮೂವರು ಅರೆಸ್ಟ್!





## ಜಾಮೀನು ಅರ್ಜಿ ವಜಾ ಆಗೋಯ್ತಲ್ಲ ಮುತ್ತ್ಯಾ...



## ರಶ್ಮಿಕಾ & ರಕ್ಷಿತ್ ಬ್ರೇಕಪ್ ಟ್ರೂಥ್!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

### ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರ್ತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ದೇಶದ ಮೊಟ್ಟ ಮೊದಲ ದಯಾಮರಣಕ್ಕೆ ಅಸ್ತು ಅಂತು ಸುಪ್ರೀಂ ಕೋರ್ಟ್....





ಮಗುವಿನ ಆಗಮನಕ್ಕೆ ಕಾದಿದ್ದ ಅದೇ ತಂದೆತಾಯಿ, ಈಗ ಮಗನ ನಿರ್ಗಮನಕ್ಕಾಗಿ 13 ವರ್ಷ ಹೋರಾಡಿದರು. ತಮ್ಮ ಬದುಕಿಗೆ ಜೀವ ತುಂಬಿದ್ದ ಮಗನ ಜೀವ ತೆಗೆದುಬಿಡಿ ಎಂದು ಬೇಡಿಕೊಂಡರು. ಜೀವಚ್ಛವವಾಗಿ 13 ವರ್ಷ ಹಾಸಿಗೆಯಲ್ಲಿದ್ದ ಮಗನನ್ನು ಬದುಕಿಸಿಕೊಳ್ಳಲು ಆ ಬಡ ದಂಪತಿ ಮಾಡಿದ ಹೋರಾಟ ಅಷ್ಟಿಷ್ಟಲ್ಲ. ಮಗನಂತೂ ಬದುಕುವುದಿಲ್ಲ, ನೆಮ್ಮದಿಯಾಗಿ ಉಸಿರು ಚೆಲ್ಲಲು ಅವಕಾಶ ಕೊಡಿ ಎಂದು ಕೋರ್ಟ್ ಎದುರು ಬೇಡಿದರು, ಕಾಣದ ದೇವರು ಕೊನೆಗೂ ಅಸ್ತು ಎಂದುಬಿಟ್ಟ. ಮಗನ ಸಾವಿಗೆ ಬೇಡುತ್ತಿದ್ದ ಹೆತ್ತಕರುಳು ನರಳಿಬಿಟ್ಟಿತು. ಯಾವ ತಂದೆ, ತಾಯಿಯಾದರೂ ಮಕ್ಕಳು ಸಾಯಲಿ ಎಂದು ಬಯಸುವರೇ.. ಎಂದು ಬಿಕ್ಕಿದರು ತಂದೆ ಅಶೋಕ್ ರಾಣಾ, ತಾಯಿ ನಿರ್ಮಲಾ ದೇವಿ. ಇದು ದಯಾಮರಣ ಪಡೆದ ಹರೀಶ್ ರಾಣಾ ಹೆತ್ತವರ ಕಥೆ..

ಮೂಲತಃ ಹಿಮಾಚಲ ಪ್ರದೇಶದ ಅಶೋಕ್ ರಾಣಾ, ಉದ್ಯೋಗ ನಿಮಿತ್ತ ದೆಹಲಿಗೆ ಶಿಫ್ಟ್ ಆಗಿದ್ದರು. ಎರಡು ಗಂಡು, ಒಂದು ಹೆಣ್ಣು ಮಗಳು. ಮೊದಲ ಮಗನೇ ಈಗ ಹರೀಶ್ ರಾಣಾ. ಓದಿನಲ್ಲಿ ಸದಾ ಮುಂದು,

ಪಂಜಾಬ್ ಯೂನಿವರ್ಸಿಟಿಯಲ್ಲಿ ಟಾಪರ್, ಎಂಜಿನಿಯರಿಂಗ್ ಓದುತ್ತಿದ್ದ ಹರೀಶ್, 2013ರ ಆಗಸ್ಟ್ 20ರಂದು ಪಿಜಿಯ ನಾಲ್ಕನೇ ಮಹಡಿಯಿಂದ ಬಿದ್ದು ಕೋಮಾ ಸ್ಥಿತಿಗೆ ತಲುಪಿದ್ದ. ಅಲ್ಲಿಯವರೆಗೂ ನೆಮ್ಮದಿಯ ಬದುಕು ಕಂಡಿದ್ದ ರಾಣಾ ಫ್ಯಾಮಿಲಿಗೆ ಇದು ಬರಸಿಡಿಲು. ಹರೀಶ್ ಆರೋಗ್ಯ ಸ್ಥಿತಿ ಸುಧಾರಿಸಲು ತಂದೆ ಅಶೋಕ್ ರಾಣಾ ಇನ್ನಿಲ್ಲದ ಪ್ರಯತ್ನ ಮಾಡಿದರು. ಮಧ್ಯಮ ವರ್ಗದ ಕುಟುಂಬ ಹಣಕ್ಕಾಗಿ ಪರದಾಡಿಬಿಟ್ಟಿತು. ಮಗನ ಜೀವನ ಉಳಿದರೆ ಸಾಕೆಂದು 2021ರಲ್ಲಿ ದೆಹಲಿಯಲ್ಲಿದ್ದ ಮನೆಯನ್ನೇ ಮಾರಿ ಗಾಜಿಯಾಬಾದ್‌ಗೆ ಶಿಫ್ಟ್ ಆಗಿಬಿಟ್ಟರು. ತಾಯಿಯಂತೂ ಏಮ್ಸ್ ನಲ್ಲಿ ಮಗನ ಹಾಸಿಗೆ ಪಕ್ಕದಲ್ಲೇ ಕುಳಿತುಬಿಟ್ಟರು. ವರ್ಷಗಳು ಉರುಳಿದವು.

ಕೈಯಲ್ಲಿದ್ದ ದುಡ್ಡೆಲ್ಲ ಖಾಲಿಯಾಯ್ತು. ಆದರೆ, ಹರೀಶ್ ರಾಣಾ ಆರೋಗ್ಯ ಸ್ಥಿತಿ ಮಾತ್ರ ಸುಧಾರಿಸಲಿಲ್ಲ. ಹರೀಶ್ ಶುಶ್ರೂಷೆಗಾಗಿ ಮೊದಲಿಗೆ ನರ್ಸ್ ನೇಮಿಸಿಕೊಂಡರು. ಆಕೆಗೆ ತಿಂಗಳಿಗೆ 27 ಸಾವಿರ ರೂ. ಸಂಬಳ. ಫಿಜಿಯೋಥೆರಪಿಸ್ಟ್‌ಗೆ 14 ಸಾವಿರ ರೂ. ತಂದೆ ಅಶೋಕ್ ರಾಣಾ ಸಂಬಳವನ್ನೂ ದಾಟಿ, ಖರ್ಚು ಏರತೊಡಗಿತು. ದುಡ್ಡಿಗಾಗಿ ಮನೆ ಸಮೀಪದ ಆಟದ ಮೈದಾನದಲ್ಲಿ ಸ್ಯಾಂಡ್‌ವಿಚ್ ಮಾರತೊಡಗಿದರು. ಸರಕಾರ ಕೊಡ್ತಿದ್ದ 50 ಸಾವಿರ ಯಾವುದಕ್ಕೂ ಸಾಲದಾಯ್ತು. ಮಗನ ಚಿಕಿತ್ಸೆಗೆ ತಿಂಗಳಿಗೆ 60 ಸಾವಿರ ದಾಟುತ್ತಿದ್ರೆ, ಅಪ್ಪನಿಗೆ ಸಿಗುತ್ತಿದ್ದದ್ದು 3500 ರೂ. ಪೆನ್ಷನ್. ಜೀವನ ನರಕವಾಗತೊಡಗಿತು.

ಮಗ ಮುಂಚಿನಂತಾಗುವ ಯಾವ ಲಕ್ಷಣವೂ ಕಾಣಲಿಲ್ಲ, ವೈದ್ಯರೂ ಭರವಸೆ ನೀಡಲಿಲ್ಲ. ಅಲ್ಲಿಂದ ಶುರುವಾಯ್ತು ಹರೀಶ್ ರಾಣಾ ದಯಾಮರಣದ ಹೋರಾಟ. ಮಗನ ಸುಂದರ ಭವಿಷ್ಯದ ಕನಸು ಕಂಡಿದ್ದ ಅಪ್ಪನಿಗೆ, ಜೀವರಕ್ಷಕ

☞ 3

# ಮಕ್ಕಳಲ್ಲಿ ಅತಿಯಾದ ಸ್ಕ್ರೀನ್ ಬಳಕೆಯ ಅಡಗಿದ ಅಪಾಯಗಳು



ಸಂಪಾದಕ
**ಎಂ. ರಾಹುಲ್**

ಇಂದಿನ ಡಿಜಿಟಲ್ ಯುಗದಲ್ಲಿ ಸ್ಮಾರ್ಟ್ ಫೋನ್, ಟ್ಯಾಬ್ಲೆಟ್, ಲ್ಯಾಪ್‌ಟಾಪ್ ಮತ್ತು ಟಿವಿ ಮುಂತಾದ ಪರದೆ ಸಾಧನಗಳು ಮಕ್ಕಳ ದಿನನಿತ್ಯದ ಜೀವನದ ಅವಿಭಾಜ್ಯ ಭಾಗವಾಗಿವೆ. ಶಿಕ್ಷಣ, ಮನ ರಂಜನೆ ಮತ್ತು ಮಾಹಿತಿ ಪಡೆಯಲು ಇವು ಉಪಯುಕ್ತ ವಾಗಿದ್ದರೂ, ಅವುಗಳ ಅತಿಯಾದ ಬಳಕೆ ಮಕ್ಕಳ ಆರೋಗ್ಯ, ಮಾನಸಿಕ ಬೆಳವಣಿಗೆ ಮತ್ತು ಸಾಮಾಜಿಕ ಜೀವನದ ಮೇಲೆ ಮೌನವಾಗಿ ಪರಿಣಾಮ ಬೀರು ತ್ತಿರುವುದು ಚಿಂತಾಜನಕ ವಿಷಯವಾಗಿದೆ. ಇತ್ತೀಚಿನ ಕೆಲವು ಅಧ್ಯಯನಗಳು ಭಾರತದಲ್ಲಿ ಮಕ್ಕಳು ಜಾಗತಿಕ ಸ್ಕ್ರೀನ್ ಸಮಯ ಮಾರ್ಗಸೂಚಿಗಳನ್ನು ಬಹಳ ಮಟ್ಟಿಗೆ ಮೀರಿಸುತ್ತಿದ್ದಾರೆ ಎಂಬುದನ್ನು ತೋರಿಸಿವೆ. ಇದು ಕೇವಲ ಒಂದು ಸಾಮಾನ್ಯ ಅಭ್ಯಾಸದ ಬದಲಾವಣೆ ಮಾತ್ರವಲ್ಲ; ಭವಿಷ್ಯದ ಪೀಳಿಗೆಯ ದೈಹಿಕ ಮತ್ತು ಬೌದ್ಧಿಕ ಆರೋಗ್ಯದ ಮೇಲೆ ದೀರ್ಘಕಾಲಿಕ ಪರಿಣಾಮ ಬೀರುವ ಸಾಧ್ಯತೆಯಿರುವ ಗಂಭೀರ ಸಾಮಾಜಿಕ ಪ್ರಶ್ನೆಯಾಗಿದೆ.

ಮಕ್ಕಳು ಮತ್ತು ಕಿಶೋರರಲ್ಲಿ ಸ್ಕ್ರೀನ್ ಬಳಕೆಯ ಪ್ರಮಾಣ ಕಳೆದ ಕೆಲವು ವರ್ಷಗಳಲ್ಲಿ ವೇಗವಾಗಿ ಹೆಚ್ಚಾಗಿದೆ. ವಿಶೇಷವಾಗಿ ಕೋವಿಡ್ ಮಹಾಮಾರಿ ನಂತರ ಆನ್‌ಲೈನ್ ಶಿಕ್ಷಣ, ಡಿಜಿಟಲ್ ಆಟಗಳು ಮತ್ತು ಸಾಮಾಜಿಕ ಮಾಧ್ಯಮಗಳ ಬಳಕೆ ಹೆಚ್ಚಾದ ಹಿನ್ನೆಲೆ, ಮಕ್ಕಳ ದಿನನಿತ್ಯದ ಸಮಯದ ಬಹುಪಾಲು ಪರದೆಗಳ ಮುಂದೆ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ಪ್ರಕಟವಾದ ಒಂದು ಅಧ್ಯಯನದಲ್ಲಿ ಮಕ್ಕಳ ಸರಾಸರಿ ದಿನದ ಸ್ಕ್ರೀನ್ ಸಮಯ ಸುಮಾರು 3.1 ಗಂಟೆಗಳಷ್ಟಿದೆ ಎಂದು ಕಂಡುಬಂದಿದೆ. ಅಧ್ಯಯನದಲ್ಲಿ ಭಾಗವಹಿಸಿದ ಮಕ್ಕಳಲ್ಲಿ ಸುಮಾರು ಎರಡುಮೂರಂಶ ಮಂದಿ ತಜ್ಞರು ಶಿಫಾರಸು ಮಾಡಿರುವ ಸ್ಕ್ರೀನ್ ಸಮಯ ಮಿತಿಯನ್ನು ಮೀರಿದ್ದಾರೆ ಎಂಬುದು ಆತಂಕಕಾರಿ ಸಂಗತಿಯಾಗಿದೆ. ಇದರಿಂದ ಮಕ್ಕಳಲ್ಲಿ ಅತಿಯಾದ ಸ್ಕ್ರೀನ್ ಬಳಕೆ ಒಂದು ಸಾಮಾನ್ಯ ಜೀವನಶೈಲಿಯಾಗಿ ರೂಪುಗೊಳ್ಳುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದು.

ವಿಶ್ವ ಆರೋಗ್ಯ ಸಂಸ್ಥೆ ಸೇರಿದಂತೆ ಹಲವು ಆರೋಗ್ಯ ಸಂಸ್ಥೆಗಳು ಮಕ್ಕಳ ಸ್ಕ್ರೀನ್ ಬಳಕೆಗೆ ಸಂಬಂಧಿಸಿದಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಿವೆ. ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳಿಗೆ ಸ್ಕ್ರೀನ್ ಬಳಕೆ ಶಿಫಾರಸು ಮಾಡಲಾಗುವುದಿಲ್ಲ. ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ವಿಡಿಯೋ ಕಾಲ್ ಹೊರತುಪಡಿಸಿ ಸ್ಕ್ರೀನ್ ಬಳಕೆಯನ್ನು ತಪ್ಪಿಸಬೇಕು ಎಂದು ತಜ್ಞರು ಸಲಹೆ ನೀಡುತ್ತಾರೆ. ಎರಡು ರಿಂದ ನಾಲ್ಕು ವರ್ಷದ ಮಕ್ಕಳಿಗೆ ದಿನಕ್ಕೆ ಒಂದು ಗಂಟೆಗಿಂತ ಕಡಿಮೆ ಸ್ಕ್ರೀನ್ ಸಮಯ ಮಾತ್ರ ಅನುಮತಿಸಬೇಕು. ಐದು ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಲ್ಲಿ ಕೂಡ ಸ್ಕ್ರೀನ್ ಬಳಕೆ ಎರಡು ಗಂಟೆಗಳ ಮಿತಿಯೊಳಗೇ ಇರಬೇಕು ಎಂದು ಸೂಚಿಸಲಾಗಿದೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮಾರ್ಗಸೂಚಿಗಳು ಹೆಚ್ಚಿನ ಕುಟುಂಬಗಳಲ್ಲಿ ಅನುಸರಿಸಲ್ಪಡುತ್ತಿಲ್ಲ ಎಂಬುದು ಅಧ್ಯಯನಗಳ ಮೂಲಕ ತಿಳಿದುಬಂದಿದೆ.

ಸ್ಕ್ರೀನ್ ಸಾಧನಗಳು ಮಕ್ಕಳಿಗೆ ಕಲಿಕೆಯಲ್ಲಿ ಸಹಾಯ ಮಾಡುವುದೂ ಸತ್ಯ. ಹಲವು ಶಿಕ್ಷಣ ಆ್ಯಪ್‌ಗಳು, ಆನ್‌ಲೈನ್ ಪಾಠಗಳು ಮತ್ತು ದೃಶ್ಯಾಧಾರಿತ ವಿಷಯಗಳು ಮಕ್ಕಳಿಗೆ ಹೊಸ ವಿಷಯಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಆದರೆ ಇದನ್ನು ಸರಿಯಾದ ಮಿತಿಯಲ್ಲಿ ಮತ್ತು ಮೇಲ್ವಿಚಾರಣೆಯೊಂದಿಗೆ ಬಳಸಿದಾಗ ಮಾತ್ರ ಅದರ ಪ್ರಯೋಜನ ದೊರೆಯುತ್ತದೆ. ನಿಯಂತ್ರಣವಿಲ್ಲದೆ ಮತ್ತು ಹೆಚ್ಚು ಸಮಯ ಸ್ಕ್ರೀನ್ ಮುಂದೆ ಕಳೆಯುವ ಅಭ್ಯಾಸ ಬೆಳೆದುಬಂದರೆ ಅದು ಆರೋಗ್ಯದ ಮೇಲೆ ಹಲವಾರು ರೀತಿಯ ದುಷ್ಪರಿಣಾಮ ಗಳನ್ನು ಉಂಟುಮಾಡಬಹುದು.



ಅತಿಯಾದ ಸ್ಕ್ರೀನ್ ಬಳಕೆಯ ಪರಿಣಾಮಗಳು ಬಹುಮುಖವಾಗಿವೆ. ಮೊದಲನೆಯದಾಗಿ ದೈಹಿಕ ಆರೋಗ್ಯದ ಮೇಲೆ ಅದರ ಪರಿಣಾಮಗಳು ಗೋಚರಿಸುತ್ತವೆ. ಹೆಚ್ಚು ಸಮಯ ಕುಳಿತ ಸ್ಥಿತಿಯಲ್ಲಿ ಪರದೆಗಳನ್ನು ನೋಡುವುದರಿಂದ ಮಕ್ಕಳಲ್ಲಿ ಶಾರೀರಿಕ ಚಟುವಟಿಕೆಗಳು ಕಡಿಮೆಯಾಗುತ್ತವೆ. ಇದರಿಂದ ಸ್ಥೂಲತೆ ಅಥವಾ ಒಬಿಸಿಟಿ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಜೊತೆಗೆ ದುರ್ಬಲ ಆಹಾರ ಪದ್ಧತಿ, ಕಡಿಮೆ ದೈಹಿಕ ವ್ಯಾಯಾಮ ಮತ್ತು ಅಸ್ಥಿರ ನಿದ್ರೆ ಕ್ರಮಗಳು ಮಕ್ಕಳ ಆರೋಗ್ಯವನ್ನು ಹಾನಿಗೊಳಿಸುತ್ತವೆ. ರಾತ್ರಿ ಹೊತ್ತು ಮೊಬೈಲ್ ಅಥವಾ ಟ್ಯಾಬ್ಲೆಟ್ ಬಳಸುವುದರಿಂದ ನಿದ್ರೆ ಗುಣಮಟ್ಟ ಕಡಿಮೆಯಾಗುತ್ತದೆ. ಇದು ದೈಹಿಕ ಬೆಳವಣಿಗೆಗೆ ಮಾತ್ರವಲ್ಲ, ಮನೋಸ್ಥಿತಿಗೂ ಹಾನಿಕಾರಕವಾಗಬಹುದು.

ಇದರ ಜೊತೆಗೆ ಸ್ಕ್ರೀನ್ ಬಳಕೆ ಮಕ್ಕಳ ಮೆದುಳಿನ ಅಭಿವೃದ್ಧಿಯ ಮೇಲೂ ಪರಿಣಾಮ ಬೀರುತ್ತದೆ ಎಂಬುದು ಕೆಲವು ಅಧ್ಯಯನಗಳಲ್ಲಿ ಸೂಚಿಸಲಾಗಿದೆ. ಹೆಚ್ಚು ಸಮಯ ಪರದೆಗಳ ಮುಂದೆ ಕಳೆಯುವ ಮಕ್ಕಳು ಭಾಷಾ ಅಭಿವೃದ್ಧಿ, ಗಮನ ಕೇಂದ್ರೀಕರಣ ಮತ್ತು ನಿರ್ಧಾರ ಸಾಮರ್ಥ್ಯದಲ್ಲಿ ಹಿಂದುಳಿಯುವ ಸಾಧ್ಯತೆ ಇದೆ. ಆರಂಭಿಕ ವಯಸ್ಸಿನಲ್ಲಿ ಮಕ್ಕಳ ಮೆದುಳು ವೇಗ ವಾಗಿ ಅಭಿವೃದ್ಧಿಯಾಗುವ ಕಾರಣ, ಆ ಸಮಯದಲ್ಲಿ ಅತಿಯಾದ ಡಿಜಿಟಲ್ ಉದ್ರೇಕಗಳು ಅವರ ಕಲಿಕೆ ಮತ್ತು ಚಿಂತನೆ ಪ್ರಕ್ರಿಯೆಯನ್ನು ಬದಲಾಯಿಸಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಮಾನಸಿಕ ಆರೋಗ್ಯದ ದೃಷ್ಟಿಯಿಂದಲೂ ಸ್ಕ್ರೀನ್ ಬಳಕೆಯ ಅತಿರೇಕವು ಸಮಸ್ಯೆಗಳನ್ನು ಉಂಟುಮಾಡ ಬಹುದು. ಮಕ್ಕಳಲ್ಲಿ ಸ್ಕ್ರೀನ್ ಮೀಡಿಯಾ ಅಡಿಕ್ಷನ್ ಎಂಬ ಹೊಸ ಸಮಸ್ಯೆ ಹೆಚ್ಚಾಗುತ್ತಿರುವುದು ಗಮನಾರ್ಹ ವಾಗಿದೆ. ಕೆಲವು ಅಧ್ಯಯನಗಳ ಪ್ರಕಾರ ಸುಮಾರು 22 ಶೇಕಡಾ ಮಕ್ಕಳು ಸ್ಕ್ರೀನ್ ಮೀಡಿಯಾ ಅಡಿಕ್ಷನ್ ಲಕ್ಷಣಗಳನ್ನು ತೋರಿಸುತ್ತಿದ್ದಾರೆ. ಸಾಧನವನ್ನು ಬಳಸದಿದ್ದರೆ ಅಸಹನೆ, ಕೋಪ ಅಥವಾ ಆತಂಕ ಕಾಣಿಸಿಕೊಳ್ಳುವುದು ಇದರ ಪ್ರಮುಖ ಲಕ್ಷಣಗಳಾಗಿವೆ. ಇದು ಮುಂದಿನ ದಿನಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗಬಹುದು.

ಸಾಮಾಜಿಕ ಜೀವನದಲ್ಲಿಯೂ ಈ ಬದಲಾವಣೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಸ್ಕ್ರೀನ್‌ಗೆ ಅಡಿಕ್ಟ್ ಆಗಿರುವ ಮಕ್ಕಳು ಕುಟುಂಬ ಸದಸ್ಯರೊಂದಿಗೆ ಕಳೆಯುವ ಸಮಯವನ್ನು ಕಡಿಮೆ ಮಾಡುತ್ತಿದ್ದಾರೆ. ಸ್ನೇಹಿತರೊಂದಿಗೆ ಹೊರಗೆ ಆಟವಾಡುವ ಬದಲು ಡಿಜಿಟಲ್ ಆಟಗಳಲ್ಲಿ ಸಮಯ ಕಳೆಯುವ ಪ್ರವೃತ್ತಿ ಹೆಚ್ಚುತ್ತಿದೆ. ಕೆಲವು ಸಂದರ್ಭಗಳಲ್ಲಿ ಮಕ್ಕಳು ಸಾಧನ ಬಳಸಲು ಸುಳ್ಳು ಹೇಳುವುದು ಅಥವಾ ಪೋಷಕರಿಗೆ ತಿಳಿಯದಂತೆ ಗುಪ್ತವಾಗಿ ಬಳಸುವುದು ಕೂಡ ಕಂಡುಬರುತ್ತಿದೆ. ಇದರಿಂದ ಕುಟುಂಬ ಸಂಬಂಧಗಳು ದುರ್ಬಲಗೊಳ್ಳುವ ಸಾಧ್ಯತೆ ಇದೆ.

ಇನ್ನೊಂದು ಗಂಭೀರ ಸಮಸ್ಯೆ ಎಂದರೆ ಆನ್‌ಲೈನ್ ಜಗತ್ತಿನ ಅಪಾಯಗಳು. ಮಕ್ಕಳು ಇಂಟರ್ನೆಟ್ ಬಳಸುವಾಗ ಸೈಬರ್ ಬುಲ್ಲಿಂಗ್, ಅಪಾಯಕಾರಿ ವಿಷಯಗಳು ಅಥವಾ ತಪ್ಪು ಮಾಹಿತಿಯ ಸಂಪರ್ಕಕ್ಕೆ ಬರುವ ಸಾಧ್ಯತೆ ಹೆಚ್ಚುತ್ತಿದೆ. ಈ ರೀತಿಯ ಅನುಭವಗಳು ಮಕ್ಕಳ ಮನೋಸ್ಥಿತಿಗೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ವಿಶೇಷವಾಗಿ ಕಿಶೋರರಲ್ಲಿ ಆತಂಕ, ಒತ್ತಡ ಮತ್ತು ಆತ್ಮವಿಶ್ವಾಸದ ಕೊರತೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.


ಈ ಹಿನ್ನೆಲೆ ಪೋಷಕರ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳ ಸ್ಕ್ರೀನ್ ಬಳಕೆಯನ್ನು ಸಂಪೂರ್ಣ ವಾಗಿ ನಿಷೇಧಿಸುವುದು ಸಾಧ್ಯವಿಲ್ಲದಿದ್ದರೂ, ಅದನ್ನು ನಿಯಂತ್ರಿತ ಮತ್ತು ಜಾಗೃತ ರೀತಿಯಲ್ಲಿ ಬಳಸುವಂತೆ ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಪೋಷಕರು ಮಕ್ಕಳೊಂದಿಗೆ ಸಮಯ ಕಳೆಯುವುದು, ಹೊರಾಂಗಣ ಆಟಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಸ್ಕ್ರೀನ್ ಬಳಕೆಗೆ ಸ್ಪಷ್ಟ ನಿಯಮಗಳನ್ನು ರೂಪಿಸುವುದು ಪ್ರಮುಖ ಕ್ರಮಗಳಾಗಿವೆ. ಜೊತೆಗೆ ಮಕ್ಕಳಿಗೆ ಯಾವ ರೀತಿಯ ವಿಷಯಗಳನ್ನು ನೋಡಬೇಕು ಮತ್ತು ಯಾವ ವಿಷಯಗಳನ್ನು ತಪ್ಪಿಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುವುದು ಕೂಡ ಅಗತ್ಯ ವಾಗಿದೆ.

ಶಾಲೆಗಳು ಮತ್ತು ಸಮಾಜವೂ ಈ ವಿಷಯದಲ್ಲಿ ಪ್ರಮುಖ ಪಾತ್ರವಹಿಸಬಹುದು. ಶಾಲೆಗಳು ಡಿಜಿಟಲ್ ಸಾಧನಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಬಹುದು. ಮಕ್ಕಳಲ್ಲಿ ಕ್ರೀಡೆ, ಕಲೆ, ಓದು ಮತ್ತು ಇತರ ಸೃಜನಾತ್ಮಕ ಚಟುವಟಿಕೆಗಳತ್ತ ಆಸಕ್ತಿ ಬೆಳೆಸುವುದು ಕೂಡ ಸ್ಕ್ರೀನ್ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ.

ಒಟ್ಟಾರೆ, ಡಿಜಿಟಲ್ ತಂತ್ರಜ್ಞಾನವನ್ನು ಸಂಪೂರ್ಣವಾಗಿ ದೂರವಿಡುವುದು ಸಾಧ್ಯವಿಲ್ಲ ಮತ್ತು ಅಗತ್ಯವೂ ಅಲ್ಲ. ಆದರೆ ಅದರ ಬಳಕೆ ಸಮತೋಲನ ದಲ್ಲಿರಬೇಕು. ಅತಿಯಾದ ಸ್ಕ್ರೀನ್ ಬಳಕೆ ಮಕ್ಕಳ ದೈಹಿಕ ಆರೋಗ್ಯ, ಮಾನಸಿಕ ಬೆಳವಣಿಗೆ ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಈ ವಿಷಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಮುಂದಿನ ಪೀಳಿಗೆಯ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಪೋಷಕರು, ಶಿಕ್ಷಕರು ಮತ್ತು ಸಮಾಜ ಒಟ್ಟಾಗಿ ಜಾಗೃತಿಯಿಂದ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. **-ಸಂ.**

2 ☜ ದಲ್ಲಿರುವ ಮಗ ನೆಮ್ಮದಿಯಾಗಿ ಜೀವ ಬಿಟ್ಟರೆ ಸಾಕೆನಿಸಿಬಿಟ್ಟಿತ್ತು. ಹರೀಶ್ ಗೆ 32 ವರ್ಷ ದಾಟಿದರೆ, ಅಪ್ಪ ಅಶೋಕ್‌ಗೆ 63 ವಯಸ್ಸು ಮೀರಿತ್ತು. ಮಗನಿಗೆ ಸಾವು ಕದತಟ್ಟುತ್ತಿದ್ದರೂ ಹೊಸ್ತಿಲು ದಾಟಿ ಬಾರದು. ಈ ಎಲ್ಲ ಜಂಜಾಟದ ನಡುವೆ ಮಗಳ ಮದುವೆ ಮುಗಿಸಿದರು. ಮತ್ತೊಬ್ಬ ಮಗ ಕೆಲಸಕ್ಕೆ ಹೋಗತೊಡಗಿದ. ತಮಗೆ ವಯಸ್ಸಾಗುತ್ತಿದೆ, ಮಗನಿಗೆ ಇನ್ನಾರು ಆಸರೆ ಎಂಬ ಭೀತಿ ಕಾಡತೊಡಗಿತು. ಪತ್ನಿ ಜತೆ ಚರ್ಚಿಸಿದವರೇ, ಮಗನ ದಯಾಮರಣಕ್ಕೆ ಕೋರ್ಟ್ ಮೆಟ್ಟಿಲೇರಿದರು.

ಸತತ ಕಾನೂನು ಹೋರಾಟದಲ್ಲಿ ಕೊನೆಗೂ ಜಯಸಿಕ್ಕಿತು. ಮಗನಿಗೆ ಗೌರವಯುತ ವಿದಾಯ ಹೇಳಬೇಕು ಎಂಬ ಅಪ್ಪನ ಆಸೆ ನೆರವೇರಿದೆ. ವೃದ್ಧಾಪ್ಯದಲ್ಲಿ ಹೆತ್ತ ಮಕ್ಕಳು ಆಸರೆಯಾಗುತ್ತಾರೆಂದು ಕನಸು ಕಂಡಿರ್ತಾರೆ. ಆದರೆ, ಅಶೋಕ್ ರಾಣಾ ತಮ್ಮ ವೃದ್ಧಾಪ್ಯದಲ್ಲಿ ದೇಹ ಚಲನೆಯೇ ಇಲ್ಲದ ಮಗನಿಗೆ ಆಸರೆಯಾಗಿ, ಸತತ 13 ವರ್ಷ ಆತನಿಗಾಗಿ ತಪಸ್ಸಿನಂತೆ ಸೇವೆ ಮಾಡಿದರು.



ತಾವು ಬದುಕು ಸಾಗಿಸುವುದೇ ಕಷ್ಟವಾಗಿರು ವಾಗ, ತಮ್ಮ ಮಗ ಮತ್ಯಾರಿಗೂ ಹೊರೆಯಾಗ ಬಾರದೆಂಬ ಭಯದಿಂದ ದಯಾಮರಣ ಕೊಡಿಸು ವಲ್ಲಿ ಯಶಸ್ವಿಯಾಗಿದ್ದಾರೆ. ಹರೀಶ್ ರಾಣಾ ಪಾಲಿಗೆ ದಯಾ ಮರಣವೇ ದಯೆಯಾಗಿದೆ. ಮಗನಿಗೆ ದಯಾಮರಣ ಸಿಕ್ಕಿದ್ದು ಹೆತ್ತವರಿಗೆ ನೆಮ್ಮದಿ ತಂದಿದ್ದರೂ, ಪುತ್ರ ಶೋಕಂ ನಿರಂತರಂ..... ☯

# ಪೋಕ್ಸೋ ಕೇಸ್ : ಜಾಮೀನು ಅರ್ಜಿ ವಜಾ ಆಗೋಯ್ತಲ್ಲೋ ಮುತ್ಯಾ....







**ಮೈನರ್ ಹುಡುಗಿಯ ಕೆನ್ನೆಗೆ ಮುತ್ತಿಕ್ಕಿ ಮುದ್ದಾಡಿ ಪೋಕ್ಸೋ ಕೇಸ್ ಹೆಟ್ಟಿಸಿಕೊಂಡಿರೋ ನಕಲಿ ದೇವಮಾನವ ಮಲ್ಲಿಕಾರ್ಜುನ ಮುತ್ಯಾ, ಜಾಮೀನು ಕೋರಿ ಯಾದಗಿರಿ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಕೊಂಡಿದ್ದ. ಆತ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಯಾದಗಿರಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಲಯ ನ್ಯಾಯಾಶರಾದ ಶ್ರೀ ಮರಳುಸಿದ್ದರಾಧ್ಯ ಅವರು ಕಳೆದ ಸೋಮವಾರ ಸದರಿ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.**

ಎಲ್ಲಿದ್ದೀಯೋ ಮುತ್ಯಾ... ನಿನ್ನ ಮುಖ ನೋಡಿ ಎಷ್ಟು ದಿವಸ ಅಗೋದ್ವೋ... ಅಂತ ಯಾದಗಿರಿ ಜಿಲ್ಲೆಯ ಜನ ಪರಿತಪಿಸುತ್ತಿದ್ದಾರೆ! ಅಪ್ರಾಪ್ತ ಬಾಲಕಿ ಜೊತೆ ಅನುಚಿತವಾಗಿ ವರ್ತಿಸಿದ ಆರೋಪದಡಿ ದಾಖಲಾಗಿದ್ದ ಪೋಕ್ಸೋ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮಹಲ್ ರೋಜಾ ಮಠದ ಮಲ್ಲಿಕಾರ್ಜುನ ಮುತ್ಯಾ ಸಲ್ಲಿಸಿದ್ದ ಅರ್ಜಿಯನ್ನು ಕಳೆದ ಸೋಮವಾರ ಕೋರ್ಟ್ ವಜಾಗೊಳಿಸಿದೆ.



ಮಲ್ಲಿಕಾರ್ಜುನ ಮುತ್ಯಾ ಪ್ರಕರಣ ಸಂಬಂಧ ಪೊಲೀಸ್ ವಿಚಾರಣೆಗೆ ಹಾಜರಾಗುವ ಮೊದಲೇ ಅಜ್ಞಾತ ಸ್ಥಳದಿಂದಲೇ, ತಮ್ಮ ವಿರುದ್ಧದ ಪೋಕ್ಸೋ ಪ್ರಕರಣ ರದ್ದು ಕೋರಿ ಕಲಬುರಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಬಳಿಕ ಏಕಾಏಕಿ ಹೈಕೋರ್ಟ್‌ನಿಂದ ಅರ್ಜಿ ವಾಪಸ್ ಪಡೆದುಕೊಂಡು ಬಳಿಕ ನಿರೀಕ್ಷಣಾ ಜಾಮೀನು ಕೋರಿ ಯಾದಗಿರಿ ಜಿಲ್ಲಾ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ.



ಎಸ್ಪಿ ಪೃಥ್ವಿಕ್ ಶಂಕರ್

ಇದೀಗ ಯಾದಗಿರಿ ಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡಿದ್ದು, ಮುತ್ಯಾ ಬಂಧನ ಭೀತಿ ಎದುರಿಸುತ್ತಿದ್ದಾನೆ! ಇತ್ತ ಮುತ್ಯಾ ಭಕ್ತರು ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಜಾಮೀನು ಪಡೆಯಲು ಅರ್ಜಿ ಸಲ್ಲಿಸಲು ಮುಂದಾಗಿದ್ದಾರೆ ಎಂಬ ಸುದ್ದಿ ಇದೆ. ವಾರದ ಹಿಂದೆ ತನ್ನ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗುತ್ತಿದ್ದಂತೆಯೇ ನಾಪತ್ತೆಯಾಗಿದ್ದ ಮಲ್ಲಿಕಾರ್ಜುನ ಮುತ್ಯಾ, ಮೂರ್ನಾಲ್ಕು ದಿನದ ಬಳಿಕ ಯಾದಗಿರಿ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಿದ್ದ.

ಈ ಪ್ರಕರಣದ ತನಿಖಾಧಿಕಾರಿಯಾಗಿರುವ ಶಹಪೂರ ಸಿಪಿಐ ಶರಣಗೌಡ ನಾಮಣ್ಣವರ ಅವರು ತನಿಖೆಯನ್ನು ಚುರುಕುಗೊಳಿಸಿದ್ದು, ಈಗಾಗಲೇ ಮಲ್ಲಿಕಾರ್ಜುನ ಮುತ್ಯಾನನ್ನು ಮೊದಲನೇ ಹಂತದ ವಿಚಾರಣೆ ಮುಗಿಸಿ ಅವರ ನಾಲ್ಕು ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ.

ಜಿಲ್ಲಾ ನ್ಯಾಯಾಲಯ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಿರುವುದರಿಂದ ಪೊಲೀಸ್ ಕೈಗೆ ಸಿಕ್ಕಿದರೆ ಅರೆಸ್ಟ್ ಮಾಡುತ್ತಾರೆ ಎಂಬ ಭಯದಿಂದ ಮುತ್ಯಾ ಮತ್ತೆ ಭೂಗತನಾಗಿದ್ದಾನೆ ಎನ್ನಲಾಗಿದೆ. ಕಲಬುರಗಿ ಉಚ್ಚ ನ್ಯಾಯಾಲಯದಲ್ಲಿ ರೆಗ್ಯುಲರ್ ಬೇಲ್ ಸಿಕ್ರೆ ಬಚಾವ್. ಇಲ್ಲದಿದ್ರೆ...?!

ಈ ಕೇಸ್‌ನ ಇನ್ನೊಂದು ವಿಚಿತ್ರ ಏನೆಂದರೆ, ಆ ಬಾಲಕಿಯರ ತಂದೆ ತಾಯಿ ಮುತ್ಯಾ ಕಡೆಗೇ ಇರುವುದು! ಮಲ್ಲಿಕಾರ್ಜುನ ಮುತ್ಯಾ ನಮ್ಮ ದೇವರು ಅಂತಲೇ ನಂಬಿದ್ದಾರೆ ಅವರು... ಈಗ ಅವರ ಅಂದ್ರೆ ಆ ಬಾಲಕಿಯರ ಪೋಷಕರ ಹೇಳಿಕೆಯೇ ಪ್ಲಸ್ ಆಗುವ ಚಾನ್ಸ್ ಅಧಿಕವಾಗಿದೆ...

ಕಲ್ಯಾಣ ಕರ್ನಾಟಕ ಭಾಗದಲ್ಲಿ 'ಪವಾಡ ಪುರುಷ'ನೆಂದೇ ಖ್ಯಾತರಾಗಿರುವ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ದಾಖಲಾದ ಪೋಕ್ಸೋ ಪ್ರಕರಣ ಇಡೀ ರಾಜ್ಯದಲ್ಲಿ ಸಂಚಲನ ಮೂಡಿಸಿದ್ದರಿಂದ, ಯಾರೋ ತೆಲಿಬಿಟ್ಟ ವಿಡಿಯೋ ವೈರಲ್ ಆಗಿ ಅದನ್ನು ಆಧರಿಸಿ ಮುತ್ಯಾ ಅವರ ವಿರುದ್ಧ ಸಾರ್ವಜನಿಕ ಆಕ್ರೋಶ ಭುಗಿಲೆದ್ದ ಪ್ರಕರಣ ಈಗ ಅತ್ಯಂತ ಕುತೂಹಲಕಾರಿ ತಿರುವು ಪಡೆದಿದೆ. ಮುಂದೆ

ತನಿಖಾ ಹಾದಿಯಲ್ಲಿ ಈ ಕೇಸ್ 'ತಲೆಕೆಳಗಾಗುವ' ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ! ಏಕೆಂದರೆ, ಸ್ವತಃ



ಸಂತ್ರಸ್ತ ಬಾಲಕಿಯ ಪೋಷಕರು ಮಹಾರಾಷ್ಟ್ರದ ಸೊಲ್ಲಾಪುರದಿಂದ ವಿಡಿಯೋ ಬಿಡುಗಡೆ ಮಾಡಿ, ಆರೋಪಿ ಮುತ್ಯಾ ಪರವಾಗಿ ನಿಂತಿದ್ದಾರೆ. ಈ ಪ್ರಕರಣದಲ್ಲಿ ಪೋಷಕರು ನೀಡಿರುವ ಹೇಳಿಕೆಯ ಹಿಂದಿರುವ ಮೂರು ಪ್ರಮುಖ ಆಯಾಮಗಳ ವಸ್ತುನಿಷ್ಠ ವಿಶ್ಲೇಷಣೆ ಇಲ್ಲಿದೆ:

## ಮುತ್ಯಾನ ಮಾತು ನಂಬಿ ಕೆಟ್ಟ ಮಾಜಿ ಚಿಂಚನಸೂರ!

ಪೋಕ್ಸೋ ಪ್ರಕರಣದಡಿ ಬೇಲ್ ಸಿಗದೆ ತಲೆಮರೆಸಿಕೊಂಡಿರುವ ಸೋ ಕಾಲ್ಡ್ 'ಪವಾಡ ಪುರುಷ' ಮಲ್ಲಿಕಾರ್ಜುನ ಮುತ್ಯಾನ ಹಳೆಯ ಆಡಿಯೋವೊಂದು ಇದೀಗ ವೈರಲ್ ಆಗಿದೆ. 2023ರ ಚುನಾವಣೆಯಲ್ಲಿ ಬಾಬುರಾವ್ ಚಿಂಚನಸೂರ್‌ಗೆ ಗೆಲುವಿನ ಭರವಸೆ ನೀಡಿ ವಿಫಲವಾಗಿದ್ದ ಈ ಆಡಿಯೋ, ಮುತ್ಯಾನ ದೈವಶಕ್ತಿಯ ಡೋಂಗಿತನವನ್ನು ಬಯಲು ಮಾಡಿದೆ! ಈಗ ವೈರಲ್ ಆಗಿರುವ ಈ ಆಡಿಯೋ ರೇಕಾರ್ಡಿಂಗ್ 2023ರ ಕರ್ನಾಟಕ ವಿಧಾನಸಭಾ ಚುನಾವಣಾ ಸಂದರ್ಭದ್ದಾಗಿದೆ. ಅಂದು ಗುರುಮಠಕಲ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಬಾಬುರಾವ್ ಚಿಂಚನಸೂರು ಅವರು ಗೆಲುವಿಗಾಗಿ ಮಲ್ಲಿಕಾರ್ಜುನ ಮುತ್ಯಾ ಅವರ ಮೊರೆ ಹೋಗಿದ್ದರು. ಆಡಿಯೋದಲ್ಲಿ ಚಿಂಚನಸೂರು ಅವರು ಅತ್ಯಂತ ವಿನಮ್ರವಾಗಿ 'ಮುತ್ಯಾ ಅವರೇ, ನನ್ನನ್ನು ಗೆಲ್ಲಿಸಿ ಆಶೀರ್ವಾದ ಮಾಡಿ' ಎಂದು ಬೇಡಿಕೊಳ್ಳುತ್ತಿರುವುದು ಕೇಳಿಸುತ್ತದೆ.



ಚಿಂಚನಸೂರ ಅವರ ಮನವಿಗೆ ಸ್ಪಂದಿಸಿದ್ದ ಮುತ್ಯಾ, 'ಆ ಗುರುಮಠಕಲ್ ಸೀಟು ನಿನ್ನದಲ್ಲ, ಅದು ನಂದು.. ನಂದು.. ನಂದು.....' ಎಂದು ಅಬ್ಬರಿಸಿದ್ದ! ಅಷ್ಟೇ ಅಲ್ಲದೆ, 'ನಾನು ಈ ಪೀಠದ ಮೇಲೆ ಕುಳಿತು ಹೇಳುತ್ತಿದ್ದೇನೆ, ಇದು ಭಾರತ ದೇಶವೇ ನೋಡುವಂತಹ ಆಶೀರ್ವಾದ....ನೀನು ರಾಜಕೀಯ ಮಾಡು, ನಿನ್ನ ಹಿಂದೆ ನಾನಿದ್ದೇನೆ. ಇದನ್ನು ಬೇಕಿದ್ದರೆ ರೇಕಾರ್ಡ್ ಮಾಡಿಕೋ' ಎಂದು ಸವಾಲು ಹಾಕಿದ್ದ!! ವಿಪರ್ಯಾಸವೆಂದರೆ, ಮುತ್ಯಾ ಅಷ್ಟೊಂದು ಆತ್ಮವಿಶ್ವಾಸದಿಂದ ನೀಡಿದ್ದ 'ದೈವವಾಣಿ' ಚುನಾವಣೆಯಲ್ಲಿ ಭಾರಿ ಸದ್ದು ಮಾಡಿತ್ತು.

ಅಂದು ಜೆಡಿಎಸ್ ಅಭ್ಯರ್ಥಿ ಶರಣಗೌಡ ಕಂದಕೂರ ಏನಾಗುತ್ತೋ ಅಂತ ಹೆದರಿಕೊಂಡೆ ಚುನಾವಣೆ ಎದುರಿಸಿದ್ದರು. ಮತದಾನ ಮುಗಿದು ಫಲಿತಾಂಶ ಹೊರ ಬಂದಾಗ, ಕಂದಕೂರ ಬಹುಮತದಿಂದ ಗೆದ್ದು, ಮುತ್ಯಾ ಶಿಷ್ಯ ಬಾಬುರಾವ್ ಚಿಂಚನಸೂರ ಹೀನಾಯವಾಗಿ ಸೋತಿದ್ರು!! ಪಾಪ, ಚುನಾವಣೆಗೂ ಮುನ್ನ ಬಾಬುರಾವ್ ಚಿಂಚನಸೂರ ಮುತ್ಯಾಗೆ ಭಾರಿ ಭರವಸೆಗಳನ್ನು ನೀಡಿದ್ದರು. 'ನಾನು ಗೆದ್ದ ತಕ್ಷಣ ಸಚಿವನಾಗಿ ಪ್ರಮಾಣ ವಚನ ಸ್ವೀಕರಿಸುತ್ತೇನೆ,ನಿಮ್ಮ ದರ್ಶನಕ್ಕೆ ಬರುವಾಗ ನನ್ನ ಕಾರಿನ ಮುಂದೆ 5 ಎಸ್ಕಾರ್ಟ್, ಹಿಂದೆ 5 ಎಸ್ಕಾರ್ಟ್ ಗಾಡಿಗಳು ಇರಲಿವೆ. ನಾನು ಅಷ್ಟು ದೊಡ್ಡ ಮಟ್ಟಕ್ಕೆ ಬೆಳೆಯುತ್ತೇನೆ...' ಎಂದು ಚಿಂಚನಸೂರು ಹೇಳಿಕೊಂಡಿದ್ದರು! ಗುರುಮಠಕಲ್ ಜನ ಈಗ ಅದನ್ನೆಲ್ಲ ನೆನಪಿಸಿಕೊಂಡು ನಗುತ್ತಾರೆ.

ಪೋಕ್ಸೋ ಕೇಸ್ ದಾಖಲಾಗುತ್ತಿದ್ದಂತೆ ತನ್ನನ್ನು ತಾನು ರಕ್ಷಿಸಿಕೊಳ್ಳಲಾಗದೆ ಮುತ್ಯಾ ಪರಾರಿಯಾಗಿದ್ದಾನೆ. ಇನ್ನು ಸಾಮಾನ್ಯ ಜನರಿಗೇನು ಮಾಡ್ಯಾನು?? ಬಾಲಕಿಯೊಬ್ಬಳಿಗೆ ಕಿರುಕುಳ ನೀಡಿದ ವಿಡಿಯೋ ಸಾಕ್ಷ್ಯವಾಗಿ ಸಿಕ್ಕ ನಂತರ ಮಹಿಳಾ ಮತ್ತು ಮಕ್ಕಳ ಸಂರಕ್ಷಣಾ ಸಂಘಟನೆಗಳು ಮುತ್ಯಾ ವಿರುದ್ಧ ದೂರು ದಾಖಲಿಸಿ, ಪೊಲೀಸರು ಬಂಧಿಸಲು ಮುಂದಾಗುತ್ತಿದ್ದಂತೆಯೇ 'ಪವಾಡ ಪುರುಷ' ಈಗ ಎಸ್ಕೇಪ್ ಆಗಿದ್ದಾರೆ.

ಈ ಹಳೆಯ ಆಡಿಯೋ ವೈರಲ್ ಆಗುತ್ತಿರುವುದು ಮುತ್ಯಾ ಅವರ ನಕಲಿ ಭವಿಷ್ಯ ಮತ್ತು ವ್ಯಕ್ತಿತ್ವವನ್ನು ಸಾರ್ವಜನಿಕವಾಗಿ ಬಯಲು ಮಾಡಿದೆ. ಭಕ್ತರನ್ನು ದಾರಿ ತಪ್ಪಿಸಿ ರಾಜಕೀಯ ಲಾಬಿ ನಡೆಸುತ್ತಿದ್ದ ಈತನನ್ನು ಕೂಡಲೇ ಬಂಧಿಸಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ☯

### ಅದು ಅನುಚಿತ ವರ್ತನೆಯಲ್ಲ, ಆಶೀರ್ವಾದ!...

ವೈರಲ್ ಆಗಿದ್ದ ವಿಡಿಯೋದಲ್ಲಿ ಕಂಡುಬಂದ ದೃಶ್ಯಗಳನ್ನು ಸಮಾಜವು 'ಅನುಚಿತ ವರ್ತನೆ' ಎಂದು ಬಣ್ಣಿಸಿದ್ದರೆ, ಪೋಷಕರು ಅದನ್ನು 'ದೈವಿಕ ಆಶೀರ್ವಾದ' ಎಂದು ಪ್ರತಿಪಾದಿಸುತ್ತಿದ್ದಾರೆ. ತಮ್ಮ ಮಗಳ ಹುಟ್ಟುಹಬ್ಬದ


☞10

# ಜೆಡಿಎಸ್ ಲೀಡರ್ ಮೋಹನ್ ಬಾಬು ಖಾಸಾ ದೋಸ್ತ್ ಗೋಪಿಯನ್ನು ಕೊಲ್ಲಿಸಿದ್ದು ಹೆಣ್ಣಿಗಾ... ಮಣ್ಣಿಗಾ....


ಕೊಲೆಯಾದ ಗೋಪಾಲ್

**ಇದೊಂದು ಹೃದಯ ವಿದ್ರಾವಕ ಕೊಲೆ ಕೇಸ್! ಆನೇಕಲ್‌ನಲ್ಲಿ ಕಿಡ್ನ್ಯಾಪ್ ಆಗಿದ್ದ ರಿಯಲ್ ಎಸ್ಟೇಟ್ ಏಜೆಂಟ್ ಗೋಪಾಲ್ ಶವ ತಮಿಳುನಾಡಿನ ಡೆಂಕಣಿ ಕೋಟೆಯಲ್ಲಿ ಪತ್ತೆಯಾಗಿದೆ! ಚಂದಾಪುರ ಆನೇಕಲ್ ಮೇನ್ ರೋಡ್‌ನಲ್ಲಿ ಕರ್ಪೂರು ಗೇಟ್ ಬಳಿ ಗೋಪಾಲ್ ಕಿಡ್ನಾಪ್ ಆಗಿದ್ದು, ಅವನ ಕುಟುಂಬದವರು ಸಾಕ್ಷಿ ಸಮೇತ ಪೊಲೀಸ್ ಬಳಿ ಹೋದರೂ, ಆನೇಕಲ್ ಪೊಲೀಸರು ಆತನ ರಕ್ಷಣೆ ಮಾಡಿಲ್ಲವಂತೆ!! ಹೀಗಾಗಿ, ಈ ಪ್ರಕರಣದ ತನಿಖೆ ಈಗ ಸಿಐಡಿ ಹೆಗಲೇರಿದೆ!!!**




ಪ್ರಮುಖ ಆರೋಪಿ ಮೋಹನ್‌ಬಾಬು

## ಆನೇಕಲ್‌ನಲ್ಲಿ ಕಿಡ್ನಾಪು! ಡೆಂಕಣಿಕೋಟೆಯಲ್ಲಿ ಆಪು!

ಆನೇಕಲ್ ಪಟ್ಟಣಕ್ಕೆ ಕೂಗಳತೆ ದೂರದಲ್ಲಿರೋ ಹೊನ್ನಕಳಸಾಪುರ ಗ್ರಾಮದ ನಿವಾಸಿ ಗೋಪಾಲ್. ವೃತ್ತಿಯಿಂದ ರಿಯಲ್ ಎಸ್ಟೇಟ್ ಏಜೆಂಟ್. ಗೋಪಾಲ್ ಮಾರ್ಚ್ 9 ರಂದು ಸಂಜೆ 7.30 ರ ಸುಮಾರಿನಲ್ಲಿ ಕರ್ಪೂರು ಗೇಟ್ ಬಳಿ ಕಾರಿನಲ್ಲಿ ಹೋಗುತ್ತಿದ್ದಾಗ ಅವರ ಕಾರಿಗೆ ದುಷ್ಕರ್ಮಿಗಳು ಟಾಟಾ ಏಸ್ ವಾಹನದಿಂದ ಡಿಕ್ಕಿ ಹೊಡೆದಿದ್ದಾರೆ. ನಂತರ ಗೋಪಾಲ್ ಅವರ ಮುಖಕ್ಕೆ ಪೆಪ್ಪರ್ ಸ್ಪ್ರೇ ಮಾಡಿ ಕಾರಿನಲ್ಲಿ ಅಪಹರಿಸಿಕೊಂಡು ಹೋಗಿದ್ದು, ಬಳಿಕ ತಮಿಳುನಾಡಿಗೆ ಕರೆದೊಯ್ದು ಬರ್ಬರವಾಗಿ ಕೊಲೆ ಮಾಡಿದ್ದಾರೆ.

ಪಾಪ, ಗೋಪಾಲ್ ಅಂದು ತನ್ನ ಸ್ನೇಹಿತನಿಗೆ ಹೆಣ್ಣು ನೋಡುವ ಕಾರ್ಯಕ್ರಮಕ್ಕೆ ಹೋಗಿ ತನ್ನೂರು ಹೊನ್ನಕಳಸಾಪುರಕ್ಕೆ ವಾಪಸ್ಸಾಗುತ್ತಿದ್ದ. ಈ ವೇಳೆ ಕಾರಿನಿಂದ ಇಳಿಯುತ್ತಿದ್ದಂತೆ ಗೋಪಿ ಹಾಗೂ ಸ್ನೇಹಿತ ಸತೀಶ್‌ಗೆ ಪೆಪ್ಪರ್ ಸ್ಪ್ರೇ ಹೊಡೆದ ಕಿರಾತಕರ ಗ್ಯಾಂಗ್ ಗೋಪಿಯನ್ನು ಕಿಡ್ನ್ಯಾಪ್ ಮಾಡಿಕೊಂಡು ಎಸ್ಕೇಪ್ ಆಗಿತ್ತು. ಇನ್ನು ಘಟನೆ ನಡೀತಿದ್ದಂತೆ ಗೋಪಾಲ್ ಜೊತೆಗಿದ್ದ ಸ್ನೇಹಿತ ಸತೀಶ್ ಆನೇಕಲ್ ಪೊಲೀಸರಿಗೆ ದೂರು ನೀಡಿದ್ದರು. ಜೊತೆಗೆ ಕುಟುಂಬಸ್ಥರೂ ಕೂಡಾ ಹೋಗಿದ್ದು, ಹೊನ್ನಕಳಸಾಪುರದ ಜೆಡಿಎಸ್ ಲೀಡರ್ ಮೋಹನ್ ಬಾಬು ವಿರುದ್ಧ ಅನುಮಾನ ವ್ಯಕ್ತಪಡಿಸಿದ್ದರು!




ಎಸ್ಪಿ ಚಂದ್ರಕಾಂತ್


ಡಿವೈಎಸ್ಪಿ ಮೋಹನ್‌ಕುಮಾರ್


ಸಿಪಿಐ ತಿಪ್ಪೇಸ್ವಾಮಿ

### ಒಂದು ಕಾಲದಲ್ಲಿ ಇಬ್ಬರೂ ಸ್ನೇಹಿತರೆ.....

ಮೋಹನ್ ಬಾಬು ಮತ್ತು ಗೋಪಾಲ್ ಈ ಹಿಂದೆ ಕುಚಿಕ್ಕೂ ಮಿತ್ರರೇ ಆಗಿದ್ದವರು. ಒಂದೇ ಊರಿನ ಎದುರು ಬದರು ಮನೆ ವಾಸಿಗಳು. ಜೊತೆಯಾಗಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಕೊಂಡಿದ್ದರು. ಯಾವುದೊ ವೈಮನಸ್ಸು ಶುರುವಾಗಿ ಕೆಲ ವರ್ಷದಿಂದ ಪ್ರತ್ಯೇಕವಾಗಿ ವ್ಯವಹಾರ ಮಾಡಿಕೊಂಡು, ಮುಖ ನೋಡಿದರೂ ನೋಡದಂತೆ ಎದುರು ಬದುರು ಮನೆಗಳಲ್ಲೇ ಇದ್ದರು. ಜೆಡಿಎಸ್ ಲೀಡರ್ ಹಾಗೂ ಭಾರಿ ದುಡ್ಡಿನ ಕುಳವಾಗಿದ್ದ ಮೋಹನ್ ಬಾಬು, ಸುಪಾರಿ ಕಿಲ್ಲರ್ಸ್‌ಗೆ ಹಣ ಕೊಟ್ಟು ಮಾರ್ಚ್ 09 ನೇ ತಾರೀಖು ಗೋಪಿಯನ್ನು ಕಿಡ್ನಾಪ್ ಮರಣ ಶಾಸನ ಬರೆದಿದ್ದಾನೆ!

### ಇಲ್ಲಿ ಎತ್ತಾಕ್ಸು, ಅಲ್ಲಿ ಮುಗ್ಸಾಕು!!

ಹಾಗೆ ಆನೇಕಲ್ ಕರ್ಪೂರು ಗೇಟ್ ಬಳಿ ಕಿಡ್ನಾಪ್ ಆಗಿದ್ದ ಗೋಪಾಲ್ ಅಲಿಯಾಸ್ ಗೋಪಿ ಮಾರನೇ ದಿವಸ ತಮಿಳುನಾಡಿನ ಡೆಂಕಣಿಕೋಟೆ ಬಳಿ ಹೆಣವಾಗಿ ಪತ್ತೆಯಾಗಿದ್ದಾನೆ! ಈ ಅನ್ಯಾಯಕರ ಅಮಾನುಷ ಹತ್ಯೆಯಿಂದ ಹೊನ್ನಕಳಸ ಪುರದ ಜನ ರೊಚ್ಚಿಗೆದ್ದು ಬಾಬು ಮನೆಗೆ ಕಲ್ಲು ಹೊಗೆದಿದ್ದಾರೆ! ಗೋಪಿ ಕುಟುಂಬಸ್ಥರು ಆನೇಕಲ್ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದು ಪೊಲೀಸರನ್ನು ಅಟ್ಯಾಡಿಸಿದ ಘಟನೆ ಕೂಡ ನಡೆದಿದೆ...!!


ಕುಮಾರಣ್ಣನ ಜೊತೆ ಬಾಬು

### ಸ್ವಾತಿ ಮುತ್ತು ಸಾವು ಕುತ್ತು??!


ಕೊಲೆಯಾದ ಗೋಪಾಲ್ ಹಾಗೂ ಆರೋಪಿ ಮೋಹನ್ ಬಾಬು ಮೊದಲು ಜೊತೆ ಜೊತೆಯಾಗಿಯೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಈಗ್ಗೆ ಹತ್ತು ವರ್ಷದ ಹಿಂದೆ ಗೋಪಾಲ್ ಸ್ವಾತಿ ಎಂಬ ಯುವತಿಯನ್ನ ಮದುವೆಯಾಗಿದ್ದ. ಆಕೆ ಟೀಚರ್ ಎಂಬುದು ಗಮನಾರ್ಹ ಸಂಗತಿ!

ಆಕೆಯ ಮೇಲೆ ಮೋಹನ್ ಬಾಬುವಿಗೂ ಮೋಹವಿತ್ತಂತೆ! ಹಾಗಾಗಿಯೇ ಆತ, ರಿಯಲ್ ಎಸ್ಟೇಟ್ ವ್ಯವಹಾರದ ನೆಪದಲ್ಲಿ ಗೋಪಿ ಜೊತೆಗಿನ ಸ್ನೇಹವನ್ನ ಇನ್ನಷ್ಟು ಗಟ್ಟಿ ಮಾಡಿಕೊಂಡಿದ್ದನಂತೆ! ಅಲ್ಲದೆ, ಆಗರ್ಭ ಶ್ರೀಮಂತ ಬಾಬು ಒಂದಷ್ಟು ಆಸ್ತಿಯನ್ನು ಬೇನಾಮಿಯಾಗಿ ಗೋಪಿ ಹತ್ರ ಇಟ್ಟಿದ್ದ ಎಂಬ ಗಾಳಿ ಸುದ್ದಿಯೂ ಇದೆ!! ಬಾಬು ತನ್ನ ಹೆಂಡ್ತಿ ಮೇಲೆ ಕಣ್ಣು ಇಟ್ಟಿದ್ದಾನೆ ಎಂಬ ಗುಟ್ಟು ಗೊತ್ತಾದ ಬಳಿಕ ಗೋಪಾಲ್ ಉರಿದು ಬಿದ್ದು ಬಾಬುವನ್ನು ದೂರ ಇಟ್ಟಿದ್ದನಂತೆ!! ಅಲ್ಲದೆ ಬೇನಾಮಿ ವಿಷಯದಲ್ಲಿ ಬಾಬುಗೆ ಸ್ವಲ್ಪ ಆಟ ಆಡ್ಸಿದ್ದ...ಭೂ ವ್ಯವಹಾರದಲ್ಲಿ ಬಾಬು ಕೈಯ್ಯಿಟ್ಟ ಕಡೆಯಲ್ಲೆಲ್ಲ ತಾನೂ ಕೈ ಇಟ್ಟು ಕಾಟ ಕೊಡುತ್ತಿದ್ದ ಅಂತಲೂ ಸುದ್ದಿಯಿದೆ!! ಒಟ್ಟಾರೆ, ಹೆಣ್ಣು ಹೊನ್ನು ಮಣ್ಣಿಗಾಗಿ ಕೊಲೆ ಅಂತಾರಲ್ಲ, ಹಾಗೇ ಈ ಕೊಲೆ ಆಗಿದೆಯಷ್ಟೇ ಎನ್ನಬಹುದು.

### ರಾಜಿ ಮಾಡಿಕೊಳ್ತೀನಿ ಅನ್ನುತ್ತಿದ್ದರು....

ಬಾಬು ಮತ್ತು ಗೋಪಾಲ್ ನಡುವೆ ದ್ವೇಷ ಹೊಗೆಯಾಡುತ್ತಿದ್ದ ಸಂಗತಿ ಸ್ವಾತಿಗೆ ಗೊತ್ತಾಗಿ ರಾಜಿ ಮಾಡಿಕೊಂಡು ನೆಮ್ಮದಿಯಾಗಿರಿ ಅಂತ ಗಂಡನಿಗೆ ಸಮಾಧಾನ ಹೇಳಿದ್ದಳು ಎಂಬ ಸುದ್ದಿ ಇದೆ. ಹಾಗೆ, ಮೋಹನ್ ಬಾಬುವಿಂದ ದೂರವಾಗಿ ಒಂಟಿಯಾಗಿಯೇ ಭೂ ವ್ಯವಹಾರ ಮಾಡುತ್ತಿದ್ದ ಗೋಪಾಲ್, ಅದರಲ್ಲಿ ಏಳಿಗೆ ಕಂಡಿದ್ದನಂತೆ. ಅವನ ಏಳಿಗೆ ಸಹಿಸದ ಮೋಹನ್ ಈಗ್ಗೆ

☞ 11


ಮನೋಹರ ರೆಡ್ಡಿ ಜೊತೆ


ಶಾಸಕ ಪ್ರದೀಪ್ ಈಶ್ವರ್


ಬಾಬು ಮನೆ ಮುಂದೆ ಉದ್ರಿಕ್ತ ಜನ



ಆನೇಕಲ್ ಪೊಲೀಸ್ ಠಾಣೆ ಮುಂದೆ ಗೋಪಾಲ್ ಕುಟುಂಬ ಹಾಗೂ ಮಿತ್ರರು

# ಪ್ರೇಯಸಿಯನ್ನು ಹತ್ಯೆ ಮಾಡಿದ ಸೆಕ್ಯೂರಿಟಿ ಗಾರ್ಡ್!

ರಾಯಚೂರು
ವೀರನಗೌಡ

**ಬೆಂಗಳೂರು ಸಮೀಪದ ದೇವನಹಳ್ಳಿ ಪ್ರದೇಶದಲ್ಲಿ ಪತ್ತೆಯಾಗಿದ್ದ ಸುಟ್ಟ ಮಹಿಳೆಯ ಶವ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ಅಕ್ರಮ ಸಂಬಂಧದ ಹಿನ್ನೆಲೆಯಲ್ಲೇ ಈ ಭೀಕರ ಕೊಲೆ ನಡೆದಿರುವುದು ಬೆಳಕಿಗೆ ಬಂದಿದೆ. ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮೌನೀಶ್ ಮೈತ್ರಿ ಎಂಬಾತ ತನ್ನ ಪ್ರೇಯಸಿ ನಿರ್ಮಲಾಳನ್ನು ಕುತ್ತಿಗೆ ಬಿಗಿದು ಹತ್ಯೆ ಮಾಡಿ, ನಂತರ ಶವಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ರಾಜಕಾಲುವೆಗೆ ಎಸೆದು ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾನೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಪ್ರಕರಣದ ತನಿಖೆಯನ್ನು ಜಿಲ್ಲಾ ಎಸ್ಪಿ ಅರುಣಾಂಗ್ಶು ಗಿರಿ, ಎಎಸ್ಪಿ ಕುಮಾರಸ್ವಾಮಿ ಹಾಗೂ ಡಿವೈಎಸ್ಪಿ ಶಾಂತವೀರ ಅವರ ಮಾರ್ಗದರ್ಶನದಲ್ಲಿ ನಡೆಸಲಾಗಿದ್ದು, ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.**


ಕೊಲೆಯಾದ ನಿರ್ಮಲಾ

ಬೆಂಗಳೂರು ಸಮೀಪದ ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ತಿಂಗಳು ಪತ್ತೆಯಾಗಿದ್ದ ಸುಟ್ಟ ಸ್ಥಿತಿಯಲ್ಲಿನ ಮಹಿಳೆಯ ಶವ ಪ್ರಕರಣವನ್ನು ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದಾರೆ. ಈ ಪ್ರಕರಣದಲ್ಲಿ ಮಹಿಳೆಯನ್ನು ಹತ್ಯೆ ಮಾಡಿದ ಆರೋಪದ ಮೇಲೆ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮೌನೀಶ್ ಮೈತ್ರಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ತನ್ನ ಪತ್ನಿಯಿಂದ ದೂರವಾಗುವ ಭಯ ಹಾಗೂ ಅಕ್ರಮ ಸಂಬಂಧ ಬಹಿರಂಗವಾಗುವ ಆತಂಕದಿಂದಲೇ ಆರೋಪಿ ಈ ಹತ್ಯೆ ನಡೆಸಿದ್ದಾನೆ ಎಂಬ ಸಂಗತಿ ತನಿಖೆಯಲ್ಲಿ ಬಹಿರಂಗವಾಗಿದೆ. ಪ್ರೇಯಸಿಯನ್ನು ಕೊಲೆ ಮಾಡಿದ ನಂತರ ಸಾಕ್ಷ್ಯಗಳನ್ನು ನಾಶಪಡಿಸಲು ಶವವನ್ನು ಸುಟ್ಟು ರಾಜಕಾಲುವೆಗೆ ಎಸೆದಿದ್ದ ಕ್ರೂರ ಘಟನೆ ಸ್ಥಳೀಯ ಜನರನ್ನು ಬೆಚ್ಚಿಬೀಳುವಂತೆ ಮಾಡಿದೆ.

ಫೆಬ್ರವರಿ 25ರಂದು ದೇವನಹಳ್ಳಿ ಸಮೀಪದ ರಾಜಕಾಲುವೆ ಬಳಿ ಸುಟ್ಟ ಸ್ಥಿತಿಯಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾದ ಘಟನೆ ದೊಡ್ಡ ಚರ್ಚೆಗೆ ಕಾರಣವಾಗಿತ್ತು. ಸ್ಥಳೀಯರು ದುರ್ವಾಸನೆ ಬರುತ್ತಿರುವುದನ್ನು ಗಮನಿಸಿ ರಾಜಕಾಲುವೆ ಬಳಿ ಪರಿಶೀಲನೆ ನಡೆಸಿದಾಗ ಸುಟ್ಟ ಸ್ಥಿತಿಯಲ್ಲಿ ಮಹಿಳೆಯ ಶವ ಕಂಡುಬಂದಿತ್ತು. ತಕ್ಷಣವೇ ಈ ಕುರಿತು ದೇವನಹಳ್ಳಿ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು. ಪೊಲೀಸರು ಸ್ಥಳಕ್ಕೆ ಆಗಮಿಸಿ ಶವವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದರು. ಮೊದಲ ಹಂತದ ಪರಿಶೀಲನೆಯಲ್ಲಿ ಶವವನ್ನು ಬೆಡ್‌ಶೀಟ್ ಹಾಗೂ ಪ್ಲಾಸ್ಟಿಕ್ ಟಾರ್ಪಲ್‌ನಲ್ಲಿ ಸುತ್ತಿ ಹಗ್ಗದಿಂದ ಕಟ್ಟಲಾಗಿದ್ದ ಗುರುತುಗಳು ಕಂಡುಬಂದವು. ಜೊತೆಗೆ ಶವದ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವುದು ಸ್ಪಷ್ಟವಾಗಿತ್ತು. ಇದರಿಂದಲೇ ಇದು ಸಾಮಾನ್ಯ ಸಾವು ಅಲ್ಲ, ಯೋಜಿತ ಕೊಲೆ ಪ್ರಕರಣವಾಗಿರಬಹುದು ಎಂಬ ಅನುಮಾನ ಪೊಲೀಸರಿಗೆ ಉಂಟಾಗಿತ್ತು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ದೇವನಹಳ್ಳಿ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲು ಆರಂಭಿಸಿದರು. ರಾಜಕಾಲುವೆ ಬಳಿ ಶವ ಎಸೆದಿರಬಹುದಾದ ಸಮಯದಲ್ಲಿ ಆ ಪ್ರದೇಶದಲ್ಲಿ ಸಂಚರಿಸಿದ್ದ ವಾಹನಗಳ ಮಾಹಿತಿ ಕೂಡ ಸಂಗ್ರಹಿಸಲಾಯಿತು. ಜೊತೆಗೆ ಇತ್ತೀಚಿನ ದಿನಗಳಲ್ಲಿ ಕಾಣೆಯಾಗಿದ್ದ ಮಹಿಳೆಯರ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಹಲವು ದಿನಗಳ ಪರಿಶ್ರಮದ ನಂತರ ಶವದ ಗುರುತು ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾದರು.


ಎಎಸ್ಪಿ ಕುಮಾರಸ್ವಾಮಿ

ತನಿಖೆಯ ವೇಳೆ ಮೃತ ಮಹಿಳೆ ಬಾಗೇಪಲ್ಲಿ ಮೂಲದ ನಿರ್ಮಲಾ (35) ಎಂದು ಗುರುತಿಸಲಾಯಿತು. ವೈಯಕ್ತಿಕ ಜೀವನದಲ್ಲಿ ಹಲವು ಸಂಕಷ್ಟಗಳನ್ನು ಎದುರಿಸಿದ್ದ ನಿರ್ಮಲಾ ಕೆಲವು ವರ್ಷಗಳ ಹಿಂದೆ ಎರಡನೇ ಮದುವೆಯಾಗಿದ್ದರೂ, ನಂತರ ಪತಿಯಿಂದ ದೂರವಾಗಿದ್ದಳು. ಸುಮಾರು ಒಂದು ವರ್ಷದ ಹಿಂದೆ ಪತಿಯಿಂದ ಪ್ರತ್ಯೇಕವಾಗಿ ಬದುಕಲು ಆರಂಭಿಸಿದ್ದ ಆಕೆ ತನ್ನ 12 ವರ್ಷದ ಮಗಳನ್ನು ತಂದೆಯ ಬಳಿ ಬಿಟ್ಟು ಬಂದಿದ್ದಳು. ಜೀವನ ಸಾಗಿಸಲು ಬೆಂಗಳೂರಿನ ಸಮೀಪದ ಪ್ರದೇಶದಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಾ ಜೀವನ ನಡೆಸುತ್ತಿದ್ದಳು.

ಈ ಸಂದರ್ಭದಲ್ಲಿ ನಿರ್ಮಲಾಳಿಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮೌನೀಶ್ ಮೈತ್ರಿ ಎಂಬಾತನ ಪರಿಚಯವಾಗಿತ್ತು. ಮೌನೀಶ್ ಮೂಲತಃ ರಾಯಚೂರು ಜಿಲ್ಲೆಯವನಾಗಿದ್ದು, ವಿಮಾನ ನಿಲ್ದಾಣದ ಭದ್ರತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದನು. ಕೆಲಸದ ಸಂಬಂಧದಿಂದಲೇ ನಿರ್ಮಲಾ ಮತ್ತು ಮೌನೀಶ್ ನಡುವೆ ಪರಿಚಯ ಆರಂಭವಾಗಿ ಕ್ರಮೇಣ ಅದು ಸ್ನೇಹವಾಗಿ ಬೆಳೆದಿತ್ತು. ಕೆಲ ತಿಂಗಳುಗಳ ನಂತರ ಇಬ್ಬರ ನಡುವೆ ಆತ್ಮೀಯತೆ ಹೆಚ್ಚಾಗಿ ಸ್ನೇಹವನ್ನು ಮೀರಿದ ಸಂಬಂಧ ರೂಪುಗೊಂಡಿತ್ತು. ಇಬ್ಬರೂ ಹೆಚ್ಚು ಸಮಯ ಒಟ್ಟಿಗೆ ಕಳೆಯಲು ಆರಂಭಿಸಿದ್ದರಿಂದ ಅವರ ಸಂಬಂಧ ಮತ್ತಷ್ಟು ಗಾಢವಾಗಿತ್ತು.


ಎಸ್ಪಿ ಅರುಣಾಂಗ್ಶು

ಇದಕ್ಕೂ ಮಧ್ಯೆ ಮೌನೀಶ್ ತನ್ನ ಪತ್ನಿಯನ್ನು ಹೆರಿಗೆಗಾಗಿ ಸುಮಾರು ಒಂದು ವರ್ಷದ ಹಿಂದೆ ತವರು ಮನೆಗೆ ಕಳುಹಿಸಿದ್ದನು. ಪತ್ನಿ ಇಲ್ಲದ ಅವಧಿಯಲ್ಲಿ ಅವನು ನಿರ್ಮಲಾಳೊಂದಿಗೆ ಹೆಚ್ಚು ಸಮಯ ಕಳೆಯಲು ಆರಂಭಿಸಿದ್ದನು. ಆದರೆ ಕಾಲಕ್ರಮೇಣ ಪತ್ನಿ ಬಾಣಂತನ ಮುಗಿಸಿ ಮನೆಗೆ ಮರಳುವ ಸಮಯ ಸಮೀಪಿಸುತ್ತಿದ್ದಂತೆ ಮೌನೀಶ್ ಮನಸ್ಸಿನಲ್ಲಿ ಆತಂಕ ಹೆಚ್ಚಾಗಿತ್ತು. ತನ್ನ ಪತ್ನಿಗೆ ಈ ಸಂಬಂಧದ ವಿಷಯ ತಿಳಿದರೆ ಕುಟುಂಬ ಜೀವನದಲ್ಲಿ ದೊಡ್ಡ ಸಮಸ್ಯೆ ಉಂಟಾಗಬಹುದು ಎಂಬ ಭಯ ಅವನನ್ನು ಕಾಡತೊಡಗಿತ್ತು. ಇದೇ ಕಾರಣದಿಂದಾಗಿ ನಿರ್ಮಲಾಳಿಗೆ ಈ ವಿಷಯದ ಬಗ್ಗೆ ಅವನು ಹಲವು ಬಾರಿ ತಿಳಿಸಿದ್ದನು.

ಆದರೆ ನಿರ್ಮಲಾ ಈ ಸಂಬಂಧವನ್ನು ಮುಂದುವರಿಸಲು ಬಯಸುತ್ತಿದ್ದಳು. ಮೌನೀಶ್ ತನ್ನ ಪತ್ನಿಯನ್ನು ಬಿಟ್ಟು ತನ್ನೊಂದಿಗೆ ಬದುಕಬೇಕು ಅಥವಾ ಕನಿಷ್ಠ ಪ್ರತ್ಯೇಕವಾಗಿ ಮನೆ ಮಾಡಿಕೊಡಬೇಕು ಎಂದು ಒತ್ತಾಯಿಸುತ್ತಿದ್ದಳು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಈ ವಿಚಾರದಲ್ಲಿ ಇಬ್ಬರ ನಡುವೆ ಪದೇಪದೇ ವಾಗ್ವಾದ ನಡೆಯುತ್ತಿತ್ತು. ಈ ರೀತಿಯ ಒತ್ತಡಗಳು ಹೆಚ್ಚಾಗುತ್ತಿದ್ದಂತೆ ಮೌನೀಶ್ ಕೋಪಗೊಂಡು ಆತಂಕದಲ್ಲಿದ್ದನು.

ಫೆಬ್ರವರಿ 21ರಂದು ದೇವನಹಳ್ಳಿಯಲ್ಲಿರುವ ಮೌನೀಶ್ ಮನೆಯಲ್ಲಿ ಇಬ್ಬರೂ ಮತ್ತೆ ಭೇಟಿಯಾಗಿದ್ದರು. ಈ ವೇಳೆ ಇದೇ ವಿಚಾರವಾಗಿ ಇಬ್ಬರ ನಡುವೆ ತೀವ್ರ ವಾಗ್ವಾದ ನಡೆದಿದೆ. ಮಾತಿನ ಚಕಮಕಿ ಕ್ರಮೇಣ ತೀವ್ರಗೊಂಡು ಜಗಳಕ್ಕೆ ತಿರುಗಿದೆ. ಕೋಪದ ಆವೇಶದಲ್ಲಿ ಮೌನೀಶ್ ಹಗ್ಗವನ್ನು ಬಳಸಿಕೊಂಡು ನಿರ್ಮಲಾಳ ಕುತ್ತಿಗೆ ಬಿಗಿದು ಹತ್ಯೆ ಮಾಡಿದ್ದಾನೆ ಎಂದು ತನಿಖೆಯಲ್ಲಿ ಬಹಿರಂಗವಾಗಿದೆ. ಕ್ಷಣಿಕ ಆಕ್ರೋಶದಲ್ಲಿ ನಡೆದ ಈ ಕೃತ್ಯದಿಂದ ನಿರ್ಮಲಾ ಸ್ಥಳದಲ್ಲೇ ಮೃತಪಟ್ಟಿದ್ದಳು.

## ದೇವನಹಳ್ಳಿ ರಾಜಕಾಲುವೆಯಲ್ಲಿ ಸುಟ್ಟ ಮಹಿಳೆಯ ಶವ ಪ್ರಕರಣ ಭೇದಿಸಿದ ಪೊಲೀಸರು...

ಹತ್ಯೆ ನಡೆದ ನಂತರ ಮೌನೀಶ್ ತೀವ್ರ ಆತಂಕಕ್ಕೆ ಒಳಗಾಗಿದ್ದನು. ಈ ಘಟನೆ ಹೊರಗೆ ತಿಳಿದರೆ ತಾನು ಕಾನೂನು ಸಂಕಷ್ಟಕ್ಕೆ ಸಿಲುಕುವ ಭಯ ಅವನನ್ನು ಕಾಡತೊಡಗಿತ್ತು. ಹೀಗಾಗಿ ಸಾಕ್ಷ್ಯಗಳನ್ನು ನಾಶಪಡಿಸುವ ಯೋಜನೆ ರೂಪಿಸಿದ್ದನು. ಕೊಲೆ ಮಾಡಿದ ಕೂಡಲೇ ಶವವನ್ನು ಹೊರಗೆ ಸಾಗಿಸಲು ಅವನಿಗೆ ಸಾಧ್ಯವಾಗದೆ, ಸುಮಾರು ಎರಡು ದಿನಗಳ ಕಾಲ ತನ್ನ ಮನೆಯಲ್ಲೇ ಶವವನ್ನು ಇರಿಸಿಕೊಂಡಿದ್ದಾನೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ.


ಡಿವೈಎಸ್ಪಿ ಶಾಂತವೀರ

ನಂತರ ಬೆಡ್‌ಶೀಟ್ ಹಾಗೂ ಪ್ಲಾಸ್ಟಿಕ್ ಟಾರ್ಪಲ್‌ನಲ್ಲಿ ಶವವನ್ನು ಸುತ್ತಿ ಹಗ್ಗದಿಂದ ಬಿಗಿದು, ಅದನ್ನು ದ್ವಿಚಕ್ರ ವಾಹನದಲ್ಲಿ ತೆಗೆದುಕೊಂಡು ದೇವನಹಳ್ಳಿ ಸಮೀಪದ ರಾಜಕಾಲುವೆ ಕಡೆಗೆ ಹೋಗಿದ್ದಾನೆ. ಅಲ್ಲಿ ಶವವನ್ನು ಕಾಲುವೆಗೆ ಎಸೆದು, ಅದರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಸುಟ್ಟು ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾನೆ. ಶವವನ್ನು ಸುಟ್ಟರೆ ಗುರುತು ಪತ್ತೆಯಾಗುವುದಿಲ್ಲ ಎಂಬ ಭಾವನೆ ಅವನಲ್ಲಿತ್ತು.

ಆದರೆ ಕೆಲವು ದಿನಗಳ ನಂತರ ರಾಜಕಾಲುವೆ ಬಳಿ ಸುಟ್ಟ ಶವ ಕಂಡು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ ಪರಿಣಾಮ ಪ್ರಕರಣ ಬೆಳಕಿಗೆ ಬಂದಿತು. ಪೊಲೀಸರು ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿ, ಆ ಪ್ರದೇಶದಲ್ಲಿ ಸಂಚರಿಸಿದ್ದ ವಾಹನಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಈ ವೇಳೆ ಮೌನೀಶ್ ಮೇಲೆ ಅನುಮಾನ ಮೂಡಿದ ಹಿನ್ನೆಲೆಯಲ್ಲಿ ಪೊಲೀಸರು ಅವನನ್ನು ವಿಚಾರಣೆಗೆ ಒಳಪಡಿಸಿದರು.


ಆರೋಪಿ ಮೌನೀಶ್ ಮೈತ್ರಿ

ಪೊಲೀಸರ ಕಠಿಣ ವಿಚಾರಣೆಗೆ ಒಳಪಟ್ಟ ನಂತರ ಮೌನೀಶ್ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ. ಬಳಿಕ ಅವನನ್ನು ಅಧಿಕೃತವಾಗಿ ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಈ ಪ್ರಕರಣದ ತನಿಖೆಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣಾಂಗ್ಶು ಗಿರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಹಾಗೂ ಡಿವೈಎಸ್ಪಿ ಶಾಂತವೀರ ಅವರ ಮಾರ್ಗದರ್ಶನದಲ್ಲಿ ಪೊಲೀಸರು ನಡೆಸಿದ್ದು, ಪ್ರಕರಣವನ್ನು ಭೇದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ತನಿಖಾ ತಂಡವು ಸಿಸಿಟಿವಿ ದೃಶ್ಯಗಳು, ಸ್ಥಳೀಯರ ಮಾಹಿತಿ ಹಾಗೂ ತಾಂತ್ರಿಕ ಸಾಕ್ಷ್ಯಗಳ ಆಧಾರದಲ್ಲಿ ಆರೋಪಿಯನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದೆ.

ಒಟ್ಟಾರೆ, ಅಕ್ರಮ ಸಂಬಂಧದಿಂದ ಆರಂಭವಾದ ಈ ಘಟನೆ ಭೀಕರ ಕೊಲೆಯಲ್ಲಿ ಅಂತ್ಯಗೊಂಡಿರುವುದು ಸಮಾಜದಲ್ಲಿ ಆತಂಕ ಮೂಡಿಸಿದೆ. ಕುಟುಂಬ ಸಂಬಂಧಗಳ ನಡುವೆ ಉಂಟಾಗುವ ವಿವಾದಗಳು ಮತ್ತು ವೈಯಕ್ತಿಕ ನಿರ್ಧಾರಗಳು ಕೆಲವೊಮ್ಮೆ ಎಷ್ಟು ದುರ್ಘಟನೆಗಳಿಗೆ ಕಾರಣವಾಗಬಹುದು ಎಂಬುದಕ್ಕೆ ಈ ಘಟನೆ ಮತ್ತೊಂದು ಉದಾಹರಣೆಯಾಗಿದೆ. ಪೊಲೀಸರು ಪ್ರಕರಣದ ಸಂಪೂರ್ಣ ತನಿಖೆ ನಡೆಸಿ ನ್ಯಾಯ ಒದಗಿಸುವುದಾಗಿ ತಿಳಿಸಿದ್ದಾರೆ.

# ಪ್ರಿಯಕರನೊಂದಿಗೆ ಸೇರಿ ಮಾಜಿ ಪ್ರಿಯಕರನ ಕೊಲೆ! ಕಿರುತೆರೆ ನಟಿ ಸೇರಿ ಮೂವರು ಅರೆಸ್ಟ್!!


ಕೊಲೆಯಾದ ಮೋಹನ್ ಕೃಷ್ಣರಾವ್

**ಬೆಂಗಳೂರು ನಗರದ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾದ ಮೋಹನ್ ಕೃಷ್ಣರಾವ್ ಸಾವಿನ ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದ್ದು, ಆರಂಭದಲ್ಲಿ ಅನುಮಾನಾಸ್ಪದ ಸಾವು ಎಂದು ಕಂಡುಬಂದಿದ್ದ ಘಟನೆ ಬಳಿಕ ಸಂಚು ರೂಪಿಸಿ ನಡೆಸಿದ ಕೊಲೆ ಪ್ರಕರಣವೆಂದು ಪೊಲೀಸರ ತನಿಖೆಯಲ್ಲಿ ಬಹಿರಂಗವಾಗಿದೆ. ಪ್ರಿಯಕರನೊಂದಿಗೆ ಸೇರಿ ತನ್ನ ಮಾಜಿ ಪ್ರಿಯಕರನನ್ನು ಹತ್ಯೆ ಮಾಡಿದ ಆರೋಪದಲ್ಲಿ ಕಿರುತೆರೆ ನಟಿ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರೀತಿ ತ್ರಿಕೋಣ, ವೈಯಕ್ತಿಕ ಸಂಬಂಧಗಳ ಗೊಂದಲ ಮತ್ತು ಮದುವೆ ವಿಚಾರದಲ್ಲಿ ಉಂಟಾದ ವೈಮನಸ್ಸು ಈ ದಾರುಣ ಘಟನೆಯ ಹಿನ್ನೆಲೆಯಾಗಿದೆ ಎಂದು ತನಿಖೆಯಲ್ಲಿ ತಿಳಿದುಬಂದಿದ್ದು, ಪ್ರಕರಣ ನಗರದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ.**


ಆರೋಪಿ ಬಿಂದು

ಸಿಲಿಕಾನ್ ಸಿಟಿಯಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿರುವ ಮೋಹನ್ ಕೃಷ್ಣರಾವ್ ಸಾವಿನ ಪ್ರಕರಣವು ಭಾರೀ ಸಂಚಲನ ಮೂಡಿಸಿದ್ದು, ಆರಂಭದಲ್ಲಿ ಅನುಮಾನಾಸ್ಪದ ಸಾವು ಎಂದು ಕಂಡುಬಂದಿದ್ದ ಈ ಘಟನೆ ಬಳಿಕ ಸಂಚು ರೂಪಿಸಿ ನಡೆಸಿದ ಕೊಲೆ ಪ್ರಕರಣವೆಂದು ಪೊಲೀಸರ ತನಿಖೆಯಲ್ಲಿ ಬಹಿರಂಗವಾಗಿದೆ. ಪ್ರಿಯಕರನೊಂದಿಗೆ ಸೇರಿ ತನ್ನ ಮಾಜಿ ಪ್ರಿಯಕರನನ್ನು ಕೊಲೆ ಮಾಡಿದ ಆರೋಪದಲ್ಲಿ ಕಿರುತೆರೆ ನಟಿ ಸೇರಿದಂತೆ ಮೂವರನ್ನು ಬಂಧಿಸಿರುವುದು ಪ್ರಕರಣಕ್ಕೆ ಮತ್ತಷ್ಟು ಗಂಭೀರತೆ ತಂದಿದೆ. ವೈಯಕ್ತಿಕ ಸಂಬಂಧಗಳ ಗೊಂದಲ, ಪ್ರೀತಿ ದ್ವೇಷ ಹಾಗೂ ಮದುವೆ ವಿಚಾರದಲ್ಲಿ ಉಂಟಾದ ವೈಮನಸ್ಸು ಈ ದಾರುಣ ಘಟನೆಯ ಮೂಲ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಘಟನೆ ನಗರದಲ್ಲಿ ಸಹಜೀವನ ಸಂಬಂಧಗಳು, ವೈಯಕ್ತಿಕ ದ್ವಂದ್ವಗಳು ಹಾಗೂ ಅತಿಯಾದ ಭಾವನಾತ್ಮಕ ನಿರ್ಧಾರಗಳು ಕೆಲವೊಮ್ಮೆ ಎಂತಹ ದುರಂತಗಳಿಗೆ ಕಾರಣವಾಗಬಹುದು ಎಂಬುದನ್ನು ಮತ್ತೊಮ್ಮೆ ನೆನಪಿಸಿದೆ.


ಶವವಿದ್ದ ಮನೆ

ಈ ಘಟನೆ ಬೆಂಗಳೂರು ನಗರದ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ವಿಜಯಲಕ್ಷ್ಮಿ ಬಡಾವಣೆಯಲ್ಲಿ ನಡೆದಿದ್ದು, 45 ವರ್ಷದ ಮೋಹನ್ ಕೃಷ್ಣರಾವ್ ಎಂಬ ವ್ಯಕ್ತಿಯ ಮೃತದೇಹ ಒಂದು ಮನೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಆರಂಭದಲ್ಲಿ ಇದನ್ನು ಅನುಮಾನಾಸ್ಪದ ಸಾವು ಎಂದು ಪರಿಗಣಿಸಿ ಪೊಲೀಸರು ತನಿಖೆ ಆರಂಭಿಸಿದ್ದರು. ಆದರೆ ಮನೆಯೊಳಗಿನ ಪರಿಸ್ಥಿತಿ, ಬಾಗಿಲು ಹಾಕಿಕೊಂಡು ಹೋಗಿರುವ ಸ್ಥಿತಿ ಮತ್ತು ಮೃತದೇಹದ ಸ್ಥಿತಿ ಪೊಲೀಸರಲ್ಲಿ ಅನುಮಾನ ಮೂಡಿಸಿತು. ಮುಂದಿನ ತನಿಖೆಯಲ್ಲಿ ಇದು ಸಹಜ ಸಾವು ಅಲ್ಲದೆ ಕೊಲೆ ಪ್ರಕರಣವಾಗಿರುವುದು ಸ್ಪಷ್ಟವಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ ಬಿಂದು, ಆಕೆಯ ಹೊಸ ಪ್ರಿಯಕರ ವಿನಯ್ ಹಾಗೂ ಅವರ ಸ್ನೇಹಿತ ಧನುಷ್ ಗೌಡ ಅವರನ್ನು ಬಂಧಿಸಲಾಗಿದೆ.


ಡಿಸಿಪಿ ಡಿ.ಎಲ್. ನಾಗೇಶ್

ಮೃತ ಮೋಹನ್ ಕೃಷ್ಣರಾವ್ ಸಣ್ಣ ಮಟ್ಟಿನ ಹಣಕಾಸು ವ್ಯವಹಾರ ನಡೆಸುತ್ತಿದ್ದ ವ್ಯಕ್ತಿಯಾಗಿದ್ದು, ತಮ್ಮ ಪತ್ನಿಯಿಂದ ದೂರವಾಗಿ ಒಬ್ಬರೇ ಜೀವನ ನಡೆಸುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಕುಟುಂಬದಿಂದ ಪ್ರತ್ಯೇಕವಾಗಿ ಬದುಕುತ್ತಿದ್ದ ಅವರು ಕೆಲ ವರ್ಷಗಳ ಹಿಂದೆ ಬಿಂದು ಎಂಬ ಮಹಿಳೆಯ ಪರಿಚಯಕ್ಕೆ ಬಂದಿದ್ದರು. ಬಿಂದು ಕೂಡ ಮುಂಚೆಯೇ ವಿವಾಹವಾಗಿದ್ದರೂ ಪತಿಯಿಂದ ದೂರವಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಳು. ಇದೇ ಕಾರಣದಿಂದ ಇಬ್ಬರ ನಡುವೆ ಪರಿಚಯ ಹೆಚ್ಚಾಗಿ ಸ್ನೇಹವಾಗಿ ಬೆಳೆದಿದ್ದು, ಆ ಸ್ನೇಹ ನಂತರ ಆತ್ಮೀಯ ಸಂಬಂಧವಾಗಿ ಬದಲಾಗಿತ್ತು. ಬಳಿಕ ಇಬ್ಬರೂ ಸಹಜೀವನದಲ್ಲಿ ವಾಸಿಸಲು ನಿರ್ಧರಿಸಿದ್ದರು.

ಈ ಹಿನ್ನೆಲೆ ಅವರು ಮಂಜುನಾಥನಗರದ ವಿಜಯಲಕ್ಷ್ಮಿ ಬಡಾವಣೆಯಲ್ಲಿರುವ ಒಂದು ಮನೆಯನ್ನು ಬಾಡಿಗೆಗೆ ಪಡೆದು ವಾಸಿಸುತ್ತಿದ್ದರು. ಮನೆ ಮಾಲೀಕರಿಗೆ ಅವರು ತಾವು ಗಂಡ ಹೆಂಡತಿ ಎಂದು ಹೇಳಿಕೊಂಡು ಮನೆ ಬಾಡಿಗೆಗೆ ಪಡೆದಿದ್ದರೂ, ವಾಸ್ತವದಲ್ಲಿ ಅವರು ದಂಪತಿಗಳು ಅಲ್ಲವೆಂದು ನಂತರ ತಿಳಿದುಬಂದಿದೆ. ಮನೆ ಮಾಲೀಕರಿಗೆ ಕೇವಲ ಒಂದು ತಿಂಗಳ ಕಾಲ ಮಾತ್ರ ಮನೆ ಬೇಕೆಂದು ಹೇಳಿದ್ದರಿಂದ ಯಾವುದೇ ಬರವಸೆ ಅಥವಾ ಅಧಿಕೃತ ಒಪ್ಪಂದ ಮಾಡಲಾಗಿರಲಿಲ್ಲ. ಈ ಕಾರಣದಿಂದ ಆ ಮನೆಯಲ್ಲಿ ಯಾರು ವಾಸಿಸುತ್ತಿದ್ದಾರೆ ಎಂಬುದು ಅಕ್ಕಪಕ್ಕದ ನಿವಾಸಿಗಳಿಗೆ ಹೆಚ್ಚಿನ ಮಾಹಿತಿ ಇರಲಿಲ್ಲ.

ಅವರು ಅಕ್ಕಪಕ್ಕದವರೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿರಲಿಲ್ಲ. ಮನೆಗೆ ಬರುವಹೋಗುವವರ ಸಂಚಾರವೂ ಕಡಿಮೆ ಇದ್ದ ಕಾರಣ ಆ ಮನೆ ಯಾವಾಗಲೂ ಶಾಂತವಾಗಿಯೇ ಕಾಣಿಸುತ್ತಿತ್ತು. ಹಲವಾರು ದಿನಗಳ ಕಾಲ ಮನೆಯ ಬಾಗಿಲು ಮುಚ್ಚಿರುವುದು ಸಹಜವಾಗಿಯೇ ಕಂಡುಬರುತ್ತಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

## ಪೊಲೀಸರ ತನಿಖೆಯಲ್ಲಿ ಬಹಿರಂಗವಾದ ಸಂಚು

ಈ ಕಾರಣದಿಂದ ಮನೆಯೊಳಗೆ ನಡೆದಿರುವ ಘಟನೆ ಬಗ್ಗೆ ಯಾರಿಗೂ ಮೊದಲಿನಿಂದಲೇ ಅನುಮಾನ ಮೂಡಲಿಲ್ಲ.

ಮಾರ್ಚ್ 1ರಂದು ಮನೆಯೊಳಗಿಂದ ತೀವ್ರ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿದ ಸ್ಥಳೀಯರು ಮೊದಲಿಗೆ ಅನುಮಾನಗೊಂಡರು. ನಂತರ ಪರಿಶೀಲನೆ ನಡೆಸಿದಾಗ ಮನೆಯೊಳಗೆ ಮೋಹನ್ ಕೃಷ್ಣರಾವ್ ಅವರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಯಿತು. ಈ ವಿಷಯವನ್ನು ತಕ್ಷಣವೇ ಬಾಗಲಗುಂಟೆ ಪೊಲೀಸ್ ಠಾಣೆಗೆ ತಿಳಿಸಲಾಯಿತು. ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದಾಗ ಮೃತದೇಹವು ಹಲವು ದಿನಗಳ ಹಿಂದೆಯೇ ಸಾವನ್ನಪ್ಪಿರುವುದು ಸ್ಪಷ್ಟವಾಯಿತು.

ಪ್ರಾರಂಭದಲ್ಲಿ ಪ್ರಕರಣವನ್ನು ಅನುಮಾನಾಸ್ಪದ ಸಾವು ಎಂದು ದಾಖಲಿಸಿದ ಪೊಲೀಸರು, ನಂತರ ಆಳವಾದ ತನಿಖೆ ಆರಂಭಿಸಿದರು. ಮೃತನ ಪರಿಚಯ ವಲಯ, ಸ್ನೇಹಿತರು ಹಾಗೂ ಇತ್ತೀಚಿನ ದಿನಗಳಲ್ಲಿ ಸಂಪರ್ಕದಲ್ಲಿದ್ದವರ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಈ ವೇಳೆ ಮೋಹನ್ ಕೃಷ್ಣರಾವ್ ಜೊತೆ ವಾಸಿಸುತ್ತಿದ್ದ ಬಿಂದು ಎಂಬ ಮಹಿಳೆಯ ಬಗ್ಗೆ ಮಾಹಿತಿ ದೊರಕಿತು. ಆದರೆ ಘಟನೆ ನಡೆದ ನಂತರದಿಂದ ಬಿಂದು ಕಾಣೆಯಾಗಿದ್ದಳು. ಇದರಿಂದಲೇ ಪೊಲೀಸರಿಗೆ ಹೆಚ್ಚಿನ ಅನುಮಾನ ಹುಟ್ಟಿತು.

ಪೊಲೀಸರು ಬಿಂದು ಅವರ ಮೊಬೈಲ್ ಸಂಖ್ಯೆಯನ್ನು ಪತ್ತೆಹಚ್ಚಿ ಅದರ ಲೊಕೇಶನ್ ಪರಿಶೀಲನೆ ನಡೆಸಿದರು. ಈ ವೇಳೆ ಆಕೆ ವಿನಯ್ ಎಂಬ ವ್ಯಕ್ತಿಯೊಂದಿಗೆ ನಿರಂತರ ಸಂಪರ್ಕದಲ್ಲಿರುವುದು ಗೊತ್ತಾಯಿತು. ಮುಂದಿನ ತನಿಖೆಯಲ್ಲಿ ಬಿಂದು ಮತ್ತು ವಿನಯ್ ನಡುವೆ ಪ್ರೀತಿಯ ಸಂಬಂಧವಿದ್ದು, ಇಬ್ಬರೂ ಮದುವೆಯಾಗಲು ನಿರ್ಧರಿಸಿದ್ದರು ಎಂಬುದು ತಿಳಿದುಬಂದಿದೆ. ಆದರೆ ಬಿಂದು ಮತ್ತು ಮೋಹನ್ ಕೃಷ್ಣರಾವ್ ನಡುವಿನ ಸಹಜೀವನ ಸಂಬಂಧ ಈ ಹೊಸ ಸಂಬಂಧಕ್ಕೆ ಅಡ್ಡಿಯಾಗುತ್ತಿದ್ದುದಾಗಿ ಪೊಲೀಸರಿಗೆ ತಿಳಿದುಬಂದಿದೆ.


ಆರೋಪಿಗಳಾದ ಧನುಷ್ ಹಾಗೂ ವಿನಯ್

ಈ ಹಿನ್ನೆಲೆಯಲ್ಲಿ ಮೋಹನ್ ಕೃಷ್ಣರಾವ್ ಅವರನ್ನು ದಾರಿಯಿಂದ ತೆಗೆಯಲು ಸಂಚು ರೂಪಿಸಲಾಗಿತ್ತು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಈ ಸಂಚಿನಲ್ಲಿ ವಿನಯ್ ಸ್ನೇಹಿತ ಧನುಷ್ ಗೌಡ ಕೂಡ ಭಾಗಿಯಾಗಿದ್ದನು. ಫೆಬ್ರವರಿ 18ರಂದು ರಾತ್ರಿ ಈ ನಾಲ್ವರೂ ಮನೆಯಲ್ಲಿ ಸೇರಿ ಮದ್ಯಪಾನ ಮಾಡಿದ್ದರು. ಮದ್ಯಪಾನ ಮಾಡಿದ ಬಳಿಕ ಅವರ ನಡುವೆ ಮಾತಿನ ಚಕಮುಕಿ ಆರಂಭಗೊಂಡಿದ್ದು, ಪರಿಸ್ಥಿತಿ

☞ 14

**ಮಾವನನ್ನೇ ಮದುವೆಯಾಗಿ ಮಹಿಳೆ ಮಕ್ಕಳಿದ್ದರೂ ಟಿಪ್ಪರ್ ಡ್ರೈವರ್‌ನ ಸಹವಾಸ ಮಾಡಿ ಆತನೊಂದಿಗೆ ಪಲ್ಲಂಗದಲ್ಲಿರುವಾಗಲೇ ಗಂಡನಿಗೆ ಸಿಕ್ಕಿಬಿದ್ದು ಬದುಕನ್ನೇ ನರಕ ಮಾಡಿಕೊಂಡ ಮಹಿಳೆ ಕೊನೆಗೆ ಗಂಡನನ್ನು ಗೆಣೆಕಾರನ ಮೂಲಕ ಶಿವನಪಾದಕ್ಕೆ ಕಳುಹಿಸಿ ತಾನು ಜಾಲಿಯಾಗಿರಬೇಕೆಂದು ಕೊಳ್ಳುವಾಗಲೇ ಇದೀಗ ಜೈಲ್ ಸೇರಿ ಮುದ್ದೆ ಮುರಿಯುತ್ತಿದ್ದಾಳೆ.**


# ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಅರ್ಚಕನ ಕೊಂದವರು ಅರೆಸ್ಟ್

ಮಂಡ್ಯ
ಬಿ.ಎಂ. ಲವಕುಮಾರ್


ಕೊಲೆಯಾದ ಸಿದ್ದಲಿಂಗಪ್ಪ

ಇಷ್ಟಕ್ಕೂ ಅಕ್ರಮ ಸಂಬಂಧಗಳು ಯಾರನ್ನೂ ಯಾವತ್ತೂ ಸುಖವಾಗಿಟ್ಟ ಉದಾಹರಣೆಗಳಿಲ್ಲ ಇದನ್ನರಿಯದೆ ಬಹಳಷ್ಟು ಜನರು ಗಂಡ, ಇದ್ದರೂ ಪರಪುರುಷನನ್ನು, ಹೆಂಡತಿ ಇದ್ದರೂ ಪರಮಹಿಳೆಯೊಂದಿಗೆ ಅಕ್ರಮ ಸಂಬಂಧವನ್ನಿಟ್ಟುಕೊಂಡು ಕಳ್ಳಾಟವಾಡುತ್ತಾ ದಿನಕಳೆಯುತ್ತಾರೆ. ಯಾವತ್ತಾದರೂ ಒಂದು ದಿನ ಸಿಕ್ಕಿ ಬಿದ್ದಾಗ ತಮ್ಮ ಬದುಕನ್ನೇ ನರಕ ಮಾಡಿಕೊಳ್ಳುತ್ತಾರೆ.

ಪರಪುರುಷನ ತೆಕ್ಕೆಗೆ ಬೀಳುವ ಹೆಂಗಸರು ತಾನು ತನ್ನ ಪ್ರಿಯಕರನೊಂದಿಗೆ ಹೇಗೆ ಬೇಕೋ ಹಾಗಿರಲು ಗಂಡನೇ ಅಡ್ಡಿಯಾಗಿದ್ದು, ಆತನನ್ನು ಮುಗಿಸಿಬಿಟ್ಟರೆ ತಾವು ನೆಮ್ಮದಿಯಾಗಿ, ಖುಷಿಯಾಗಿರಬಹುದು ಎಂದು


ಅ|| ಎಸ್ಪಿ ಎಸ್.ಇ. ಗಂಗಾಧರಸ್ವಾಮಿ


ಅ|| ಎಸ್ಪಿ ಸಿ.ಇ. ತಿಮ್ಮಯ್ಯ


ಡಿವೈಎಸ್ಪಿ ಯು.ಡಿ. ಕೃಷ್ಣಕುಮಾರ್

ಕೊಳ್ಳುತ್ತಾರೆ. ಆದರೆ ಆಗುವುದೇ ಬೇರೆ. ಒಂದೋ ಪ್ರಾಣ ಕಳೆದುಕೊಳ್ಳುತ್ತಾರೆ ಇಲ್ಲಾಂದ್ರೆ ಜೈಲ್ ಸೇರುತ್ತಾರೆ ಇವತ್ತು ಹೇಳಲು ಹೊರಟಿರುವ ಸ್ಟೋರಿಯೂ ಅದೇ ರೀತಿಯದ್ದಾಗಿದೆ.

ಅರ್ಚಕ ವೃತ್ತಿ ಮಾಡಿಕೊಂಡು ಸಂಸಾರ ನಡೆಸುತ್ತಿದ್ದ ಗಂಡನನ್ನು ಕೊಲ್ಲಿಸಿ ಮಕ್ಕಳನ್ನು ತಬ್ಬಲಿ ಮಾಡಿ ಜೈಲ್ ಸೇರಿ ಮುದ್ದೆ ಮುರಿಯುತ್ತಿರುವ ಹೆಂಗಸಿನ ಹೆಸರು ಶಾಲಿನಿ(32) ಈಕೆ ತನ್ನ ಸ್ವಂತ ಮಾವನಾದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಾರಳಗಾಲ ಗ್ರಾಮದ ಅರ್ಚಕ ಸಿದ್ದಲಿಂಗಪ್ಪ ಎಂಬಾತನನ್ನು ಕೆಲವು ವರ್ಷಗಳ ಹಿಂದೆ ಮದುವೆಯಾಗಿದ್ದು, ಇವರ ದಾಂಪತ್ಯದ ಫಲವಾಗಿ ಎರಡು ಮಕ್ಕಳಿದ್ದರು. ಅರ್ಚಕ ವೃತ್ತಿ ಮಾಡಿಕೊಂಡು ಸಿದ್ದಲಿಂಗಪ್ಪ ಸಂಸಾರ ನಡೆಸಿಕೊಂಡು ಹೋಗುತ್ತಿದ್ದನು. ಎಲ್ಲವೂ ಚೆನ್ನಾಗಿಯೇ ನಡೆದಿತ್ತು. ಒಂದು ವೇಳೆ ಶಾಲಿನಿ, ಮಕ್ಕಳು, ಗಂಡ ಎಂದು ನೆಟ್ಟಗೆ ಸಂಸಾರ ನಡೆಸಿಕೊಂಡು ಹೋಗಿದ್ದರೆ ಬಹುಶಃ ಇವತ್ತು ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲವೇನೋ? ಆದರೆ ಆಗಿದ್ದೇ ಬೇರೆ.


ಎಸ್ಪಿ ಡಾ. ವಿ.ಜೆ. ಶೋಭಾರಾಣಿ

ಶಾಲಿಗೆ ತನ್ನದೇ ಗ್ರಾಮದ ಮಾರಳಗಾಲದ ನಿವಾಸಿ ಚಂದ್ರಶೇಖರ್ ಎಂಬುವರ ಪುತ್ರ ಹರೀಶನ ಪರಿಚಯವಾಗಿತ್ತು. 32 ವರ್ಷದ ಹರೀಶ ಟಿಪ್ಪರ್ ಚಾಲಕನಾಗಿದ್ದನು. ಮದುವೆಯಾಗಿರಲಿಲ್ಲ. ಹೀಗಾಗಿ ಹೆಂಗಸರನ್ನು ನೋಡಿದಾಗ ಜೊಳ್ಳು ಸುರಿಸುವುದು ಸಾಮಾನ್ಯವಾಗಿತ್ತು. ಅರ್ಚಕನ ಸುಂದರ ಪತ್ನಿಯಾಗಿದ್ದ ಶಾಲಿನಿಯನ್ನು ಆತ ಆಸೆಗಣ್ಣಿನಿಂದ ನೋಡುತ್ತಿದ್ದನು. ಇದು ಶಾಲಿನಿಗೂ ಗೊತ್ತಾಗಿತ್ತು. ಅವನ ಮುಖಕ್ಕೆ ಕ್ಯಾಕರಿಸಿ ಮುಂದೆ ಹೋಗಿದ್ದರೆ ಅವಳ ಸಂಸಾರ ನೆಟ್ಟಗಿರುತ್ತಿತ್ತೇನೋ? ಆದರೆ ಅವಳು ಹಾಗೆ ಮಾಡಲಿಲ್ಲ. ಅವಳಿಗೂ ತನ್ನದೇ ವಯಸ್ಸಿನ ಕಟ್ಟುಮಸ್ತಾದ ಹುಡುಗ ಕಣ್ಣು ಹಾಕುತ್ತಿದ್ದಾನೆ ಎಂದಾಗ ದೇಹದಲ್ಲಿ ಕಾಮವೇರ ತೊಡಗಿತ್ತು. ಹೀಗಾಗಿ ಅವನಿಗೆ ಇವಳು ಗ್ರೀನ್ ಸಿಗ್ನಲ್ ಕೊಟ್ಟು ಬಿಟ್ಟಳು ಅಲ್ಲಿಂದ ಕದ್ದುಮುಚ್ಚಿ ಇವರ ಪ್ರಣಯದಾಟ ಆರಂಭವಾಗಿತ್ತು.

ಎಲ್ಲವೂ ಚೆನ್ನಾಗಿಯೇ ನಡೆಯುತ್ತಿತ್ತು. ಆದರೆ ಅವತ್ತು ಶಾಲಿನಿ ಮತ್ತು ಪ್ರಿಯಕರ ಹರೀಶನ ನಸೀಬು ಕೆಟ್ಟಿತ್ತು. ಅವರಿಬ್ಬರೂ ಸರಸದಲ್ಲಿ ಮೈಮರೆತಿರುವಾಗಲೇ ಗಂಡ ಸಿದ್ದಲಿಂಗಪ್ಪನ ಕೈಗೆ ಸಿಕ್ಕಿಬಿದ್ದಿದ್ದರು. ತನ್ನ ಹೆಂಡತಿ ಪರಪುರುಷನ ತೆಕ್ಕೆಯಲ್ಲಿರುವುದನ್ನು ನೋಡಿದ ಅವನು ರುದ್ರಾವತಾರ ತಾಳಿ ಬಿಟ್ಟಿದ್ದನು. ಅಷ್ಟೇ ಅಲ್ಲದೆ ಅಂದಿನಿಂದ ಶಾಲಿಯನ್ನು ದೂರವಿಟ್ಟ ಆತ ಆಕೆಗೆ ಹಿಂಸೆ ನೀಡಲು ಆರಂಭಿಸಿದ್ದನು. ಮೇಲ್ನೋಟಕ್ಕೆ ಒಂದೇ ಮನೆಯಲ್ಲಿ ಗಂಡ-ಹೆಂಡತಿಯರಂತೆ ಇದ್ದರೂ ಅವರ ನಡುವೆ ಜಗಳಗಳು ನಡೆಯುತ್ತಲೇ ಇದ್ದವು. ಶಾಲಿನಿಗೆ ಗಂಡ ಸಿದ್ದಲಿಂಗಪ್ಪನೊಂದಿಗೆ ಬದುಕುವುದು ಕಷ್ಟವಾಗ ತೊಡಗಿತ್ತು. ಹಾಗೆಂದು ಆಕೆ ಪ್ರಿಯಕರ ಹರೀಶನ ಸಹವಾಸವನ್ನು ಬಿಟ್ಟಿರಲಿಲ್ಲ. ಈ ನಡುವೆ ಗಂಡ ಸಿದ್ದಲಿಂಗಪ್ಪನನ್ನು ಮುಗಿಸಿದರೆ ತಾನು ಸುಖವಾಗಿ ಇರಬಹುದು ಎಂಬ ಆಲೋಚನೆ ಶಾಲಿನಿಗೆ ಬಂದಿತ್ತು.

ಗಂಡ ಸಿದ್ದಲಿಂಗಪ್ಪನನ್ನು ಹೇಗಾದರು ಮುಗಿಸು ಆಮೇಲೆ ನಾನು ನೀನು ಯಾರ ಭಯವಿಲ್ಲದೆ ನೆಮ್ಮದಿಯಾಗಿ ಬದುಕಬಹುದು ಎಂದು ಗೆಣೆಕಾರ ಹರೀಶನಿಗೆ ಶಾಲಿನಿ ಹೇಳಿದ್ದಳು. ಅಲ್ಲದೆ ಗಂಡ ನೀಡುತ್ತಿರುವ ಹಿಂಸೆಯನ್ನು ಕೂಡ ಅವನೊಂದಿಗೆ ಹೇಳಿಕೊಂಡಿದ್ದಳು. ತನ್ನ ಲವ್ವರ್ ಗೆ ತೊಂದರೆಯಾಗುತ್ತಿರುವುದನ್ನು ಕೇಳಿದ ಹರೀಶ ಮೈ ಉರಿದು ಹೋಗಿತ್ತು. ಹೀಗಾಗಿ ಅರ್ಚಕ ಸಿದ್ದಲಿಂಗಪ್ಪನಿಗೆ ಮೂಹೂರ್ತ ಫಿಕ್ಸ್ ಮಾಡಲು ತಯಾರಿ ಮಾಡಿಕೊಂಡು ಅದಕ್ಕಾಗಿ ತನ್ನ ಜತೆಗೆ ಸ್ನೇಹಿತರಾದ ಮರಳಗಾಲದ ನಿವಾಸಿಗಳು ಮತ್ತು ಟಿಪ್ಪರ್ ಡ್ರೈವರ್‌ಗಳಾದ ಸಂತೋಷ್ ಕುಮಾರ್(29) ಮತ್ತು ಗಣೇಶ ಬಿ.ಆರ್.(29) ಅವರುಗಳನ್ನು ಸೇರಿಸಿಕೊಂಡು ಎಲ್ಲರೂ ಸೇರಿ ಸಿದ್ದಲಿಂಗಪ್ಪನನ್ನು ಮುಗಿಸಲು ತಯಾರಿ ಮಾಡಿಕೊಂಡಿದ್ದನು.

ಅವತ್ತು ಮಾರ್ಚ್ 6, ಶುಕ್ರವಾರ ಸಂಜೆ 4 ಗಂಟೆ ವೇಳೆಗೆ ಎಂದಿನಂತೆ ಕೆ.ಶೆಟ್ಟಹಳ್ಳಿಗೆ ತೆರಳಿ ಅಲ್ಲಿನ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡಿದ್ದಾನೆ. ಆ ನಂತರ ರಾತ್ರಿ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿರುವ ತನ್ನ ಮನೆಗೆ ಹಿಂತಿರುಗಲು ಗಾಡಿಯನ್ನೇರಿದ್ದಾನೆ. ಆದರೆ ಇತ್ತ ಮನೆಯಲ್ಲಿದ್ದ ಶಾಲಿನಿ ಗಂಡ ದೇವಸ್ಥಾನಕ್ಕೆ ಹೋಗುವ ಮತ್ತು ಅಲ್ಲಿಂದ ಹೊರಡುವ ಸಮಯ ಸೇರಿದಂತೆ ಎಲ್ಲ ವಿಷಯವನ್ನು ಗೆಣೆಕಾರ ಹರೀಶನಿಗೆ ಮೇಸೇಜ್ ಗಳ ಮೂಲಕ ಮಾಹಿತಿ ನೀಡಿದ್ದಳು ಅದರಂತೆ ಅತ್ತ ಹರೀಶ್ ಅಂಡ್ ಟೀಮ್ ಸಿದ್ಧಲಿಂಗಪ್ಪ ಬರುವುದನ್ನೇ ಕಾಯುತ್ತಾ ಕುಳಿತಿತ್ತು.

ಕೆ.ಶೆಟ್ಟಹಳ್ಳಿಯಿಂದ ಬೈಕ್ ಏರಿ ಹೊರಟ ಸಿದ್ದಲಿಂಗಪ್ಪ ಸಿಡಿಎಸ್ ಕಾಲುವೆ ಬಳಿ ಬರುತ್ತಿದ್ದಂತೆಯೇ ನಿರ್ಜನ ಪ್ರದೇಶದಲ್ಲಿ ದೊಣ್ಣೆಗಳನ್ನು ಹಿಡಿದು ನಿಂತಿದ್ದ ಹರೀಶ್ ಅಂಡ್ ಟೀಮ್ ಅವನನ್ನು ಅಡ್ಡಗಟ್ಟಿ ಹಲ್ಲೆ ಮಾಡಿತ್ತು. ಈ ವೇಳೆ ನಡೆದ ಜಟಾಪಟಿಯಲ್ಲಿ ಆತನ ಕೊರಳಲ್ಲಿದ್ದ ರುದ್ರಾಕ್ಷಿ ಮತ್ತು ಸ್ಪಟಿಕ ಮಣಿಗಳು ತುಂಡಾಗಿ ರಸ್ತೆಯಲ್ಲಿ ಚೆಲ್ಲಾಡಿದ್ದರೆ, ಚಪ್ಪಲಿ ಕಿತ್ತು ಹೋಗಿ ರಸ್ತೆಯಲ್ಲಿ ಬಿದ್ದಿತ್ತು. ಆತನ ಮೇಲೆ ಮನಸ್ಸೋ ಇಚ್ಚೆ ಹಲ್ಲೆ ಮಾಡಿದ್ದರಿಂದ ರಕ್ತ ಚಿಮ್ಮಿದ್ದು ಅದು ಚಪ್ಪಲಿ ಮೇಲೆ ಬಿದ್ದಿತ್ತು. ಆತ ಸತ್ತ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಬೈಕ್ ಸಹಿತ ಆತನನ್ನು ನಾಲೆಗೆ ಎಸೆದು ಅಪಘಾತವಾಗಿ ನಾಲೆಗೆ ಬಿದ್ದಿರಬಹುದು ಎಂಬ ಸಂಶಯ ಬರುವಂತೆ ಮಾಡಿ ಅಲ್ಲಿಂದ ಪರಾರಿಯಾಗಿತ್ತಲ್ಲದೆ, ಶಾಲಿನಿಗೆ ಕಾಲ್ ಮಾಡಿ ಇನ್ನು ನಿನಗೆ ಯಾವುದೇ ಭಯವಿಲ್ಲ ನಿನ್ನ ಗಂಡನನ್ನು ಮುಗಿಸಿದ್ದೇವೆ. ನೆಮ್ಮದಿಯಾಗಿರು ಎಂದು ಹರೀಶ್ ಹೇಳಿದ್ದನು.


ಇತ್ತ ಪೂಜೆಗೆ ಹೋದ ಸಿದ್ದಲಿಂಗಪ್ಪ ರಾತ್ರಿಯಾದರೂ ಮನೆಗೆ ಬರಲಿಲ್ಲ. ಜತೆಗೆ ಮೊಬೈಲ್ ಕೂಡ


ಆರೋಪಿ ಶಾಲಿನಿ


ಆರೋಪಿ ಹರೀಶ

ಸ್ವಿಚ್ ಆಫ್ ಆಗಿತ್ತು. ಇದರಿಂದ ಗಾಬರಿಗೊಂಡ ಮನೆಯವರು ಹುಡುಕಾಟ ನಡೆಸಿದ್ದರು. ಮಕ್ಕಳು ಅಪ್ಪ ಏಕೆ ಬಂದಿಲ್ಲ ಎಂದು ಕೇಳಿದ್ದರು. ಆದರೆ ಗಂಡ ಬರಲ್ಲ ಆತನ ಕೊಲೆಯಾಗಿದೆ ಎಂಬುದು ಗೊತ್ತಿದ್ದರೂ ಶಾಲಿನಿ ಮಾತ್ರ ತನಗೇನು ಗೊತ್ತೇ ಇಲ್ಲ ಎಂಬಂತೆ ನಾಟಕವಾಡಿದ್ದಳು. ಅತ್ತು ಕರೆದು ಗೋಳಾಡಿದ್ದಳು. ದೇವಸ್ಥಾನದಿಂದ ಹೊರಡುವ ಮುನ್ನ ಸಿದ್ದಲಿಂಗಪ್ಪ ಸಹೋದರನೊಂದಿಗೆ ಮಾತನಾಡಿದ್ದ ಸ್ವಲ್ಪ ಹೊತ್ತಲ್ಲೇ ಬರುವುದಾಗಿ ಹೇಳಿದ್ದನು. ಆದರೆ ಬಂದಿಲ್ಲ ಎಂದಾಗ ಆತನಿಗಾಗಿ ಹುಡುಕಾಟ ನಡೆದಿತ್ತು. ರಾತ್ರಿ ಹುಡುಕಾಡಿದರೂ ಸುಳಿವು ಸಿಗಲಿಲ್ಲ.

ಆತ ಬರುವ ರಸ್ತೆಯಲ್ಲೇ ಹುಡುಕಿಕೊಂಡು ಹೋದಾಗ ಸಿಡಿಎಸ್ ಕಾಲುವೆಯ ತೂಬಿನ ಹತ್ತಿರ ರಸ್ತೆಯಲ್ಲಿ ಅರ್ಚಕ ಸಿದ್ದಲಿಂಗಪ್ಪನ ಚಪ್ಪಲಿ ಮತ್ತು ಪಕ್ಕದ ಹುಲ್ಲಿನ ಮೇಲೆ ರಕ್ತ ಚೆಲ್ಲಿದ್ದು, ಅಕ್ಕ ಪಕ್ಕದಲ್ಲಿ ಅರ್ಚಕ ಧರಿಸುತ್ತಿದ್ದ ರುದ್ರಾಕ್ಷಿಮಣಿ ಸ್ಪಟಿಕಮಣಿ ಸರಗಳು ಡಾಲರ್‌ಗಳು ಬಿದ್ದಿದ್ದು, ಅರ್ಚಕನ ಬೈಕ್ ಕಾಲುವೆ ಒಳಗೆ ಬಿದ್ದಿರುವುದು ಕಾಣಿಸಿತ್ತಾದರೂ ಶವ ಮಾತ್ರ ರಾತ್ರಿಯೆಲ್ಲ ಹುಡುಕಿದರೂ ಪತ್ತೆಯಾಗಿರಲಿಲ್ಲ. ಹೀಗಾಗಿ ಮಾರನೆಯ ದಿನ(ಮಾ.7) ಬೆಳಗ್ಗೆ 6ಗಂಟೆಗೆ ಮತ್ತೆ ನಾಲೆಯಲ್ಲಿ ಹುಡುಕಾಟ ನಡೆಸಿದಾಗ ಸಿಡಿಎಸ್ ನಾಲೆಯ ತೂಬಿನಲ್ಲಿ


ಶವವಿದ್ದ ಸ್ಥಳದಲ್ಲಿ ಪೊಲೀಸರ ಪರಿಶೀಲನೆ

ಸಿದ್ದಲಿಂಗಪ್ಪನ ಶವವು ಸಿಕ್ಕಿಕೊಂಡಿತ್ತು. ಮೈ ಮೇಲೆ ಅಂಡರ್ ವೇರ್ ಮಾತ್ರ ಇದ್ದು, ಮುಖಕ್ಕೆ, ತಲೆಗೆ ಗಾಯಗಳಾಗಿರುವುದು ಕಂಡು ಬಂದಿತ್ತು.

ಈ ಸಂಬಂಧ ಸಿದ್ದಲಿಂಗಪ್ಪನ ಅಣ್ಣ ಬಾಲಸುಂದರ್ ಯಾರೋ ಅಪರಿಚಿತ ವ್ಯಕ್ತಿಗಳು ಯಾವುದೋ ಉದ್ದೇಶಕ್ಕೆ ಹೊಡೆದು ಕೊಲೆ ಮಾಡಿರುವ ಬಗ್ಗೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ದೂರು ಸ್ವೀಕರಿಸಿದ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ: 103(1), 238 ಭಾರತೀಯ ನ್ಯಾಯಾ ಸಂಹಿತೆ 2023 ಬಿ.ಎನ್.ಎಸ್2023 ರೀತ್ಯ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಆರಂಭಿಸಿದ್ದರು.

ಮೇಲ್ಕಂಡ ಪ್ರಕರಣಗಳ ಆರೋಪಿಗಳ ಪತ್ತೆ ಬಗ್ಗೆ ಮಂಡ್ಯ ಜಿಲ್ಲಾ ಎಸ್ಪಿ ಡಾ. ಶೋಭಾರಾಣಿ ವಿ.ಜೆ. ರವರ ಮಾರ್ಗದರ್ಶನದಲ್ಲಿ ಎಎಸ್ಪಿಗಳಾದ ಸಿ.ಇ.ತಿಮ್ಮಯ್ಯ, ಎಸ್.ಇ. ಗಂಗಾಧರಸ್ವಾಮಿ, ಶ್ರೀರಂಗಪಟ್ಟಣ ಡಿವೈಎಸ್ಪಿ ಯು.ಡಿ.ಕೃಷ್ಣಕುಮಾರ್, ನೇತೃತ್ವದಲ್ಲಿ ಆನಂದಕುಮಾರ್ ಹೆಚ್, ಪಿ.ಐ. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ. ವಿವೇಕಾನಂದ, ಸಿಪಿಐ ಕೆ.ಆರ್.ಸಾಗರ ವೃತ್ತ, ಬಿ.ಜಿ.ಕುಮಾರ್ ಪಿಐ ಶ್ರೀರಂಗಪಟ್ಟಣ ಟೌನ್ ಠಾಣೆ, ಶರತ್ ಹೆಚ್.ಪಿ, ಪಿಐ ಪಾಂಡವಪುರ ಠಾಣೆ, ರಕ್ಷಿತ ಜಿ.ಎಸ್, ಪಿಎಸ್‌ಐ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ, ವಿನೋದ್ ಪಿಎಸ್‌ಐ, ಅರಕೆರೆ ಠಾಣೆ, ಶ್ರೀ ರಮೇಶ್ ಕರಕಿಕಟ್ಟೆ ಪಿಎಸ್‌ಐ, ಸಿಹೆಚ್‌ಸಿಯವರಾದ ಲೋಕೇಶ್, ಹಫೀಜ್ ಪಾಷ, ಚಂದ್ರಶೇಖರ್, ಶ್ರೀಧರ್, ರವಿಕಿರಣ್ ಹಾಗೂ ಲೋಕೇಶ್, ಸಿಪಿಸಿಯವರಾದ ಶಂಕರ್, ದಿನೇಶ್, ಮಂಜುನಾಥ, ಶರತ್, ಸಂತೋಷ್, ತೌಸಿಫ್ ರವರನ್ನೊಳಗೊಂಡ ತಂಡ ರಚನೆ ಮಾಡಲಾಗಿತ್ತು.

ತನಿಖೆ ಕಾಲದಲ್ಲಿ ಮೃತ ಅರ್ಚಕ ಸಿದ್ದಲಿಂಗಪ್ಪನು ಸ್ವಂತ ಅಕ್ಕನ ಮಗಳನ್ನೇ ಮದುವೆ ಮಾಡಿಕೊಂಡು ಎರಡು ಮಕ್ಕಳಿದ್ದು, ಅರ್ಚಕನ ಹೆಂಡತಿ ಶಾಲಿನಿ ಅದೇ ಊರಿನ ಟಿಪ್ಪರ್ ಡ್ರೈವರ್ ಹರೀಶ ಎಂ.ಸಿ ಎಂಬ ಅವಿವಾಹಿತನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಬಗ್ಗೆ ಮಾಹಿತಿ ತಿಳಿದು ಬಂದ ಮೇರೆಗೆ, ಹರೀಶ ಎಂ.ಸಿ ಎಂಬುವವನನ್ನು ದಿನಾಂಕ: 09/03/2026ರಂದು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಈತನು ಶಾಲಿನಿ ಜೊತೆಗೆ ಒಂದು ದಿನ ಆರ್ಚಕನ ಮನೆಯಲ್ಲಿ ಇಬ್ಬರೂ ಆಕಸ್ಮಿಕವಾಗಿ ಅರ್ಚಕನ ಕೈಗೆ ಸಿಕ್ಕಿಕೊಂಡಾಗ, ಅಂದಿನಿಂದ ಅರ್ಚಕ ತನ್ನ ಹೆಂಡತಿ ಮತ್ತು ಹರೀಶನಿಗೆ ಹಿಂಸೆ ಕೊಡುತಿದ್ದನೆಂದು, ಏನಾದಾರೂ ಮಾಡಿ ತನ್ನ ಗಂಡ ಆರ್ಚಕನನ್ನು ಮುಗಿಸು ಎಂದು ಪ್ರಿಯಕರ ಶಾಲಿನಿ ಹರೀಶನಿಗೆ ಹೇಳಿದ್ದು, ದಿನಾಂಕ:06/03/2026 ರಂದು ಅರ್ಚಕ ಕೆಲಸಕ್ಕೆ ಹೊರಟ ಬಗ್ಗೆ ಮತ್ತು ವಾಪಸ್ಸು ಹೊರಟ ಸಮಯದ ಬಗ್ಗೆ ಪ್ರಿಯಕರನಿಗೆ ಶಾಲಿನಿ ಮೆಸೇಜ್ ಮಾಡಿದ್ದು, ಹರೀಶನ ಸ್ನೇಹಿತ ಟಿಪ್ಪರ್ ಡ್ರೈವರ್ ಗಣೇಶ ಎಂ.ಆರ್ ನು ಕೊಲೆ ಮಾಡುವ ಸ್ಥಳದಿಂದ ಹಿಂದೆ 1 ಕಿ.ಮೀ ದೂರದಲ್ಲಿ ಅರ್ಚಕ ಊರಿಗೆ ಬೈಕಿನಲ್ಲಿ ಒಬ್ಬನೇ ಬರುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು, ಆಗ ಹರೀಶ ಮತ್ತು ಟಿಪ್ಪರ್ ಡ್ರೈವರ್ ಸಂತೋಷ್ ಕುಮಾರ್ ಎಂ.ಆರ್. ಜೊತೆಯಾಗಿ ಊರಿನ ಬಳಿಯ ಕಾಲುವೆ ಏರಿಯ ನಿರ್ಜನ ಸ್ಥಳದಲ್ಲಿ ಅರ್ಚಕ ಸಿದ್ದಲಿಂಗಪ್ಪನನ್ನು ಅಡ್ಡಗಟ್ಟಿ ದೊಣ್ಣೆಗಳಿಂದ ಹೊಡೆದು ಕೊಲೆ ಮಾಡಿ ಈ ಕೊಲೆಯನ್ನು ಮುಚ್ಚಿಹಾಕುವ ಉದ್ದೇಶದಿಂದ ಅಪಘಾತವಾಗಿ ಬಿದ್ದಿರಬಹುದೆಂದು ಬಿಂಬಿಸಲು ಹೆಣವನ್ನು ಮತ್ತು ಬೈಕನ್ನು ನಾಲಾ ಏರಿಮೇಲಿನ ರಸ್ತೆಯಿಂದ ನಾಲಾ ನೀರಿಗೆ ತಳ್ಳಿ ಊರಿನಲ್ಲಿ ಅನುಮಾನ ಬರದಂತೆ ಮೃತನ ಶವದ ಧಫನ್ ಕಾಲದಲ್ಲೂ ಇದ್ದರೆಂದು ತನಿಖೆಯಲ್ಲಿ ತಿಳಿದು ಬಂದಿರುತ್ತದೆ. ಆರೋಪಿ 1 ಹರೀಶನನ್ನು ಮಾನ್ಯ ಶ್ರೀರಂಗಪಟ್ಟಣ ಎಸಿಜೆ - ಎಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ತನಿಖೆಗೆ ಪೊಲೀಸ್ ವಶಕ್ಕೆ ಪಡೆದಿರುತ್ತದೆ.

**ಆರೋಪಿಗಳು**

1) ಹರೀಶ ಎಂ.ಸಿ.ಬಿನ್ ಚಂದ್ರಶೇಖರ 33 ವರ್ಷ ಟಿಪ್ಪರ್ ಡ್ರೈವರ್ ಮರಳಗಾಲ ಶ್ರೀರಂಗಪಟ್ಟಣ ತಾ. 2) ಸಂತೋಷ್ ಕುಮಾರ್ ಎಂ.ಆರ್ ಲೇಟ್ ರಾಮಸಿದ್ದು 29 ವರ್ಷ ಟಿಪ್ಪರ್ ಡ್ರೈವಿಂಗ್ ಮರಳಗಾಲ ಗ್ರಾಮ ಗಣೇಶ ಬಿ.ಆರ್. ಬಿನ್ ಲೇಟ್ ರಾಮಸಿದ್ದು 29 ವರ್ಷ ಟಿಪ್ಪರ್ ಡ್ರೈವಿಂಗ್ ಮರಳಗಾಲ ಗ್ರಾಮ. 3) ಗಣೇಶ ಬಿ.ಆರ್. ಬಿನ್ ಲೇಟ್ ರಾಮಸಿದ್ದು 29 ವರ್ಷ ಟಿಪ್ಪರ್ ಡ್ರೈವಿಂಗ್ ಮರಳಗಾಲ ಗ್ರಾಮ. 4) ಶಾಲಿನಿ ಕೊಂ ಸಿದ್ದಲಿಂಗಪ್ಪನ ಹೆಂಡತಿ 32 ವರ್ಷ ಗೃಹಿಣಿ ಮರಳಗಾಲ ಶ್ರೀರಂಗಪಟ್ಟಣ ತಾ. ಆರೋಪಿ 2,3, 4 ರವರನ್ನು ದಿನಾಂಕ:10.03.2026ರಂದು ದಸ್ತಗಿರಿ ಮಾಡಲಾಗಿರುತ್ತದೆ.

ಆರೋಪಿಗಳ ಪತ್ತೆ ತಂಡವು ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಆರೋಪಿಗಳು ಕೊಲೆ ಮಾಡಿರುವ ಮತ್ತು ಕೊಲೆ ಬಗ್ಗೆ ತನ್ನೊಪ್ಪಿಕೊಂಡಿರುವುದು ಕಂಡು ಬಂದಿದೆ. ಆರೋಪಿತರುಗಳಿಂದ ಕೃತ್ಯಕ್ಕೆ ಉಪಯೋಗಿಸಿದ್ದ ಮೊಬೈಲ್ ಪೋನುಗಳನ್ನು ಅಮಾನತ್ತುಕೊಂಡಿಸಿರುತ್ತದೆ. ತನಿಖೆ ಪ್ರಗತಿಯಲ್ಲಿರುತ್ತದೆ. ಶ್ರೀರಂಗಪಟ್ಟಣ ಉಪ ವಿಭಾಗದ ಪೊಲೀಸ್ ಠಾಣಾ ಅಧಿಕಾರಿ/ಸಿಬ್ಬಂದಿಯವರನ್ನು ಎಸ್ಪಿ ಡಾ.ಶೋಭಾರಾಣಿ ವಿ.ಜೆ.ರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.


ಆರೋಪಿಗಳಾದ ಸಂತೋಷ್‌ಕುಮಾರ್ ಹಾಗೂ ಗಣೇಶ

# ಆಸ್ತಿ ಹಕ್ಕಿಗಾಗಿ ಹೋರಾಡಿದ ಅಂಗವಿಕಲ ಮೊದಲ ಹೆಂಡತಿಗೆ ಕ್ರೂರ ಹಲ್ಲೆ!

**ಕುಟುಂಬದ ಆಸ್ತಿಯಲ್ಲಿ ತಮ್ಮ ನ್ಯಾಯಯುತ ಹಕ್ಕು ಕೇಳಿದ ಕಾರಣಕ್ಕೆ ಅಂಗವಿಕಲ ಮಹಿಳೆಯ ಮೇಲೆ ಪತಿ ಹಾಗೂ ಅವರ ಎರಡನೇ ಹೆಂಡತಿ ಮತ್ತು ಮಕ್ಕಳಿಂದ ಅಮಾನುಷವಾಗಿ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿರುವ ಹೃದಯ ಕಲುಕುವ ಘಟನೆ ಯಾದಗಿರಿ ಜಿಲ್ಲೆಯ ವಡಗೇರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ. ಹಲವು ವರ್ಷಗಳಿಂದ ಕುಟುಂಬದೊಳಗಿನ ದೌರ್ಜನ್ಯವನ್ನು ಸಹಿಸಿಕೊಂಡು ಬದುಕುತ್ತಿದ್ದ ಮಹಿಳೆ ಈಗ ನ್ಯಾಯಕ್ಕಾಗಿ ಅಲೆದಾಡುವ ಪರಿಸ್ಥಿತಿಗೆ ತಲುಪಿದ್ದು, ತಾಯಿ ಮಗಳು ಅನುಭವಿಸುತ್ತಿರುವ ನರಕಯಾತನೆ ಸ್ಥಳೀಯರಲ್ಲಿ ಆಕ್ರೋಶ ಮೂಡಿಸಿದೆ.**

ಯಾದಗಿರಿ
ವೀರನಗೌಡ

ಯಾದಗಿರಿ ಜಿಲ್ಲೆಯ ವಡಗೇರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಂಗವಿಕಲ ಮಹಿಳೆಯೊಬ್ಬರು ತಮ್ಮ ಆಸ್ತಿ ಹಕ್ಕಿಗಾಗಿ ಹೋರಾಡಿದ ಹಿನ್ನೆಲೆ ಪತಿ ಹಾಗೂ ಅವರ ಎರಡನೇ ಕುಟುಂಬದಿಂದ ಕ್ರೂರ ಹಲ್ಲೆಗೆ ಒಳಗಾದ ಘಟನೆ ಬೆಳಕಿಗೆ ಬಂದಿದೆ. ಭೀಮ್ ಬಾಯಿ ಎಂಬ ಈ ಪೀಡಿತ ಮಹಿಳೆ ಹಲವು ವರ್ಷಗಳಿಂದ ಕುಟುಂಬದೊಳಗಿನ ಕಿರುಕುಳವನ್ನು ಸಹಿಸಿಕೊಂಡು ಬದುಕುತ್ತಿದ್ದರೂ, ಇದೀಗ ಪರಿಸ್ಥಿತಿ ತೀವ್ರಗೊಂಡಿದ್ದು, ತಮ್ಮ ಮಗಳೊಂದಿಗೆ ನ್ಯಾಯಕ್ಕಾಗಿ ಅಲೆದಾಡುವ ದುಸ್ಥಿತಿಗೆ ತಲುಪಿದ್ದಾರೆ. ಕುಟುಂಬದವರಿಂದಲೇ ಆಗುತ್ತಿರುವ ದೌರ್ಜನ್ಯ ಸ್ಥಳೀಯರಲ್ಲಿ ಆಕ್ರೋಶಕ್ಕೆ ಕಾರಣವಾಗಿದ್ದು, ದುರ್ಬಲ ಮಹಿಳೆಯರ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ.



**ನ್ಯಾಯಕ್ಕಾಗಿ ಅಲೆದಾಡುತ್ತಿರುವ ತಾಯಿ ಮಗಳು!**

ಭೀಮ್ ಬಾಯಿ ಅವರು ಹನುಮಂತ್ ಬಿಳ್ವಾರ್ ಅವರ ಮೊದಲ ಹೆಂಡತಿಯಾಗಿದ್ದು, ಆರಂಭದಲ್ಲಿ ಸಾಮಾನ್ಯ ಕುಟುಂಬ ಜೀವನ ನಡೆಸುತ್ತಿದ್ದರು. ಆದರೆ ಪತಿಯ ಎರಡನೇ ಮದುವೆಯ ನಂತರ ಅವರ ಬದುಕಿನಲ್ಲಿ ಸಂಕಷ್ಟಗಳು ಆರಂಭವಾಗಿವೆ ಎಂದು ತಿಳಿದುಬಂದಿದೆ. ಎರಡನೇ ಹೆಂಡತಿ ಮತ್ತು ಅವರ ಮಕ್ಕಳಿಂದ ನಿರಂತರವಾಗಿ ನಿಂದನೆ, ಅವಮಾನ ಹಾಗೂ ಮಾನಸಿಕ ಕಿರುಕುಳ ಎದುರಿಸುತ್ತಿದ್ದರೂ, ಕುಟುಂಬದ ಹಿತದೃಷ್ಟಿಯಿಂದ ಭೀಮ್ ಬಾಯಿ ಮೌನವಾಗಿಯೇ ಬದುಕು ಸಾಗಿಸುತ್ತಿದ್ದರು. ಅಂಗವಿಕಲರಾಗಿರುವ ಅವರು ತಮ್ಮ ದೈಹಿಕ ಅಸಮರ್ಥತೆಯ ನಡುವೆಯೂ ಎಲ್ಲಾ ಸಮಸ್ಯೆಗಳನ್ನು ಸಹಿಸಿಕೊಂಡು ಬಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕುಟುಂಬದ ಆಸ್ತಿಯಲ್ಲಿ ತಮ್ಮ ಕಾನೂನುಬದ್ಧ ಪಾಲು ಕೇಳಿದ ನಂತರ ಪರಿಸ್ಥಿತಿ ಇನ್ನಷ್ಟು ಗಂಭೀರಗೊಂಡಿದೆ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ಬಳಿಕ ಪತಿ ಹಾಗೂ ಅವರ ಎರಡನೇ ಕುಟುಂಬದವರು 'ಕೇಸ್ ಹಿಂತೆಗೆದುಕೊಳ್ಳದಿದ್ದರೆ ಕೊಂದು ಹಾಕುತ್ತೇವೆ' ಎಂದು ಜೀವ ಬೆದರಿಕೆ ಹಾಕುತ್ತಿರುವುದಾಗಿ ಭೀಮ್ ಬಾಯಿ ಆರೋಪಿಸಿದ್ದಾರೆ.


ಈ ಬೆದರಿಕೆಗಳಿಂದ ತಾಯಿ ಮಗಳು ಭಯದ ವಾತಾವರಣದಲ್ಲಿ ಬದುಕುತ್ತಿದ್ದು, ಪ್ರತಿದಿನವೂ ಆತಂಕದ ನಡುವೆ ಜೀವನ ಸಾಗಿಸುತ್ತಿದ್ದಾರೆ. ಕಳೆದ ಶನಿವಾರ ಸಂಜೆ ವೇಳೆ ಪತಿ ಹಾಗೂ ಅವರ ಕುಟುಂಬದವರು ಸೇರಿಕೊಂಡು ಭೀಮ್ ಬಾಯಿ ಮೇಲೆ ಹಲ್ಲೆ ನಡೆಸಿದ್ದು, ಅವರು ಗಾಯಗೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಈ ಪ್ರಕರಣದಲ್ಲಿ ಮತ್ತೊಂದು ಗಂಭೀರ ಆರೋಪವೆಂದರೆ, ಪೀಡಿತೆ ಹಲವು ಬಾರಿ ವಡಗೇರಾ ಪೊಲೀಸ್ ಠಾಣೆಗೆ ದೂರು ನೀಡಿದರೂ ಸಹ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದು. ಕಳೆದ ಎರಡು ವರ್ಷಗಳಿಂದ ಇದೇ ರೀತಿಯ ದೌರ್ಜನ್ಯ ನಡೆಯುತ್ತಿದ್ದರೂ, ಸಮಯಕ್ಕೆ ಸರಿಯಾದ ಕ್ರಮ ಕೈಗೊಳ್ಳದಿರುವುದು ಪ್ರಶ್ನಾರ್ಹವಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ. ಆರಂಭದಲ್ಲೇ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೆ ಇಂತಹ ಘಟನೆಗಳು ಮರುಕಳಿಸದೇ ಇರಬಹುದಿತ್ತು ಎಂಬ ಮಾತುಗಳು ಕೇಳಿಬರುತ್ತಿವೆ.


ಎಸ್ಪಿ ಪೃಥ್ವಿಕ್ ಶಂಕರ್

ಭೀಮ್ ಬಾಯಿ ಅವರ ಜೀವನದ ದುಃಖದ ಸಂಗತಿ ಎಂದರೆ, ಅವರು ಬಾಲ್ಯದಲ್ಲೇ ತಂದೆ ತಾಯಿಯನ್ನು ಕಳೆದುಕೊಂಡಿದ್ದು, ಯಾವುದೇ ಕುಟುಂಬ ಬೆಂಬಲವಿಲ್ಲದೆ ಬದುಕು ಸಾಗಿಸುತ್ತಿದ್ದಾರೆ. ಈಗ ಪತಿ ಮತ್ತು ಅವರ ಎರಡನೇ ಕುಟುಂಬದಿಂದಲೇ ಕಿರುಕುಳ ಎದುರಿಸುತ್ತಿರುವುದು ಅವರ ಪರಿಸ್ಥಿತಿಯನ್ನು ಮತ್ತಷ್ಟು ಕಷ್ಟಕರಗೊಳಿಸಿದೆ. ಸುರಕ್ಷಿತ ವಾಸಸ್ಥಳವೂ ಇಲ್ಲದೆ, ಮಗಳೊಂದಿಗೆ ಭಯದ ನಡುವೆ ಬದುಕುತ್ತಿರುವುದು ಅವರ ದುಸ್ಥಿತಿಯನ್ನು ತೋರಿಸುತ್ತದೆ.

# ಯುಪಿಎಸ್‌ಸಿ ಪಾಸ್ ಮಾಡಿ 'ಐಪಿಎಸ್' ಕಿರೀಟ ಸಂಪಾದಿಸಿದ ಸಾಹಸಿ ಪಿಎಸ್‌ಐ ಸಾಗರ್!




**ಕೋ**ಲಾರದ ಬಡರೈತ ಅಶ್ವತ್ ಅವರ ಮಗನಾದ ಸಾಗರ್ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಪಿಎಸ್‌ಐ) ಆಗಿ ಕರ್ತವ್ಯ ನಿರ್ವಹಿಸುತ್ತಲೇ ಯುಪಿಎಸ್‌ಸಿಯಲ್ಲಿ 641ನೇ ರ್‍ಯಾಂಕ್ ಪಡೆದಿದ್ದಾರೆ. ಮೊಟ್ಟ ಮೊದಲು ವಿಧಾನಸೌಧದಲ್ಲಿ ಅಸಿಸ್ಟೆಂಟ್ ಸೂಪರ್ ವೈಸರ್ ಆಗಿ ವೃತ್ತಿ ಜೀವನ ಆರಂಭಿಸಿ, ಇದೀಗ ಐಪಿಎಸ್ / ಐಆರ್‌ಎಸ್ ಅಧಿಕಾರಿಯಾಗುವ ಮೂಲಕ ಕೋಟ್ಯಾಂತರ ಯುವಕರಿಗೆ ಸ್ಫೂರ್ತಿದಾಯಕವಾಗಿದ್ದಾರೆ. ಛಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಕೋಲಾರದ ಈ ಹಳ್ಳಿಯ ಪ್ರತಿಭೆ ಸಾಗರ್ ಅಶ್ವಥ್ ಅತ್ಯುತ್ತಮ ಉದಾಹರಣೆ.

ಒಂದೆಡೆ ಪೊಲೀಸ್ ಇಲಾಖೆಯ ಎಡೆಬಿಡದ ಕರ್ತವ್ಯ, ಮತ್ತೊಂದೆಡೆ ಯುಪಿಎಸ್‌ಸಿ ಎಂಬ ದೇಶದ ಅತ್ಯಂತ ಕಠಿಣ ಪರೀಕ್ಷೆಯ ಸಿದ್ಧತೆ. ಈ ಎರಡನ್ನೂ ಸರಿದೂಗಿಸಿ ಇಂದು ಸಾಗರ್ ಐಪಿಎಸ್ / ಐಆರ್‌ಎಸ್ ಅಧಿಕಾರಿ ಆಗುವ ಹಾದಿ ಯಲ್ಲಿದ್ದಾರೆ. ಸಾಗರ್ ಅವರ ವೃತ್ತಿಜೀವನದ ಪಯಣ ನಿಜಕ್ಕೂ ರೋಚಕವಾಗಿದೆ.




ಕೋಲಾರ ಜಿಲ್ಲೆಯ ಸಣ್ಣ ಹಳ್ಳಿಯೊಂದರ ರೈತನ ಮಗನಾಗಿರುವ ಸಾಗರ್ ಮೊದಲು ವಿಧಾನಸೌಧದಲ್ಲಿ ಅಸಿಸ್ಟೆಂಟ್ ಸೂಪರ್‌ವೈಸರ್ ಆಗಿ ಕೆಲಸಕ್ಕೆ ಸೇರಿದ್ದರು. ಸರ್ಕಾರಿ ಕೆಲಸ ಸಿಕ್ಕಿತಲ್ಲಾ ಎಂದು ಅಲ್ಲಿಗೇ ಸುಮ್ಮನಾಗದ ಅವರು, ಪಿಎಸ್‌ಐ ಪರೀಕ್ಷೆ ಬರೆದು ಪಾಸ್ ಆಗಿ ಕಳೆದ ವರ್ಷವಷ್ಟೇ ಅವರು ಪಿಎಸ್‌ಐ ಆಗಿ ನೇಮಕಗೊಂಡರು.



ಮಂಡ್ಯದಲ್ಲಿ ಪ್ರೊಬೇಷನರಿ ಮುಗಿಸಿ ಇತ್ತೀಚೆಗಷ್ಟೇ ಬೆಂಗಳೂರಿನ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ಪಿಎಸ್‌ಐ ಆಗಿ ವರದಿ ಮಾಡಿಕೊಂಡಿದ್ದರು. ಪೊಲೀಸ್ ಇಲಾಖೆಯ ಕೆಲಸವೆಂದರೆ ಸಮಯದ ಮಿತಿ ಇರುವುದಿಲ್ಲ. ಆದರೆ, ಸಿಕ್ಕ ಅಲ್ಪ ಸಮಯವನ್ನೇ ಸಾಗರ್ ಬಂಡವಾಳ ಮಾಡಿಕೊಂಡರು. ಠಾಣೆಯ ಕರ್ತವ್ಯದ ನಡುವೆಯೇ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದರು. ಸತತ ಪ್ರಯತ್ನದ ಫಲವಾಗಿ ಇದೀಗ 2023ರ ಯುಪಿಎಸ್‌ಸಿ ಫಲಿತಾಂಶದಲ್ಲಿ 641ನೇ ರ್‍ಯಾಂಕ್ ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.

ಪಿಎಸ್‌ಐ ಆಗಿದ್ದುಕೊಂಡು ಯುಪಿಎಸ್‌ಸಿ ಕ್ಲಿಯರ್ ಮಾಡಿದ ಸಾಗರ್ ಸಾಧನೆಗೆ ಉನ್ನತ ಪೊಲೀಸ್ ಅಧಿಕಾರಿಗಳು ಮನಸೋತಿದ್ದಾರೆ. ಹಿರಿಯ ಐಪಿಎಸ್ ಅಧಿಕಾರಿ ಹಾಗೂ ಬೆಂಗಳೂರು ಪೊಲೀಸ್ ಕಮಿಷನರ್ ಶ್ರೀ ಸೀಮಂತ್ ಕುಮಾರ್ ಸಿಂಗ್ ಅವರು ಪಿಎಸ್‌ಐ ಸಾಗರ್ ಅವರನ್ನು ಕಚೇರಿಗೆ ಆಹ್ವಾನಿಸಿ, ಸನ್ಮಾನಿಸಿ ಅಭಿನಂದಿಸಿದ್ದಾರೆ.

'ನಮ್ಮ ಇಲಾಖೆಯ ಅಧಿಕಾರಿಯೊಬ್ಬರು ಕರ್ತವ್ಯದ ನಡುವೆ ಇಂತಹ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ' ಎಂದು ಶ್ಲಾಘಿಸಿದ್ದಾರೆ. ಅದೇ ರೀತಿ ಮಾನ್ಯ ಡಿಜಿಪಿ ಸಲೀಮ್ ಸಾಹೇಬ್ ಅವರೂ ಸಹ ಸಾಗರ್‌ರನ್ನು ಶ್ಲಾಘಿಸಿ ಸನ್ಮಾನಿಸಿದ್ದಾರೆ

ಸಾಗರ್ ಅವರ ಈ ಸಾಧನೆ ಕೇವಲ ವೈಯಕ್ತಿಕ ಯಶಸ್ಸಲ್ಲ, ಬದಲಾಗಿ ಬಡತನ ಮತ್ತು ಸಮಯದ ಅಭಾವವನ್ನು ನೆಪವಾಗಿ ಹೇಳುವ ಸಾವಿರಾರು ಅಭ್ಯರ್ಥಿಗಳಿಗೆ ದೊಡ್ಡ ಪ್ರೇರಣೆ. ರೈತನ ಮಗನಾಗಿ, ಸಾಮಾನ್ಯ ಸರ್ಕಾರಿ ಸಿಬ್ಬಂದಿಯಾಗಿ ವೃತ್ತಿ ಜೀವನ ಆರಂಭಿಸಿ ಇಂದು ದೇಶದ ಉನ್ನತ ನಾಗರಿಕ ಸೇವೆಗೆ ಆಯ್ಕೆಯಾಗಿರುವ ಸಾಗರ್ ಸದ್ಯದಲ್ಲೇ ಐಪಿಎಸ್ ಅಥವಾ ಐಆರ್‌ಎಸ್ ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಸಾಗರ್ ಅವರ ಈ 'ವಿಜಯಗಾಥೆ' ವೈರಲ್ ಆಗಿದ್ದು, ನೆಟ್ಟಿಗರು 'ಖಾಕಿಪಡೆ'ಯ ಈ ಸಾಧಕನಿಗೆ 'ಸಲಾಂ' ಎನ್ನುತ್ತಿದ್ದಾರೆ. ಎನಿವೇ, ಆಲ್ ದ ಬೆಸ್ಟ್ ಸಾಗರ್ ಸರ್... ☯



# ಜಾಮೀನು ಅರ್ಜಿ ವಜಾ ಆಗೋಯ್ತಲ್ಲೋ ಮುತ್ಯಾ....

4 ☜

ಸಂಭ್ರಮದ ಅಂಗವಾಗಿ ದರ್ಶನ ಪಡೆಯಲು ಮಠಕ್ಕೆ ಹೋಗಿದ್ದಾಗಿ ಅವರು ಸ್ಪಷ್ಟಪಡಿಸಿದ್ದಾರೆ.


ಇಲ್ಲಿ 'ವೈಯಕ್ತಿಕ ಭಕ್ತಿ' ಮತ್ತು 'ಸಾಮಾಜಿಕ ಗ್ರಹಿಕೆ'ಯ ನಡುವಿನ ಸಂಘರ್ಷ ಎದ್ದು ಕಾಣುತ್ತಿದೆ. ಭಕ್ತರ ಪಾಲಿಗೆ ಯಾವುದು ಪವಿತ್ರವೋ, ಅದು ಕಾನೂನಿನ ಚೌಕಟ್ಟಿನಲ್ಲಿ ಅಥವಾ ಸಾರ್ವಜನಿಕ ನೈತಿಕತೆಯ ದೃಷ್ಟಿಯಲ್ಲಿ ಅಪರಾಧವಾಗಿ ಕಾಣಬಹುದು. ಆದರೆ, ಇಲ್ಲಿ ಗಮನಿಸಬೇಕಾದ ಕಾನೂನಾತ್ಮಕ ಜಟಿಲತೆಯೆಂದರೆ ಪೋಕ್ಸೋ ಕಾಯ್ದೆಯಡಿ ಒಮ್ಮೆ ದೂರು ದಾಖಲಾದರೆ, ಪೋಷಕರ 'ಒಪ್ಪಿಗೆ' ಅಥವಾ 'ಭಕ್ತಿ'ಗಿಂತ ಬಾಲಕಿಯ ಹಿತರಕ್ಷಣೆಯೇ ಮುಖ್ಯವಾಗುತ್ತದೆ. ಪೋಷಕರು ಮುತ್ಯಾ ಅವರನ್ನು ಸಮರ್ಥಿಸಿಕೊಳ್ಳುತ್ತಿರುವುದು ಪ್ರಾಸಿಕ್ಯೂಷನ್‌ಗೆ ದೊಡ್ಡ ಹಿನ್ನಡೆಯಾಗುವ ಸಾಧ್ಯತೆಯಿದೆ.

'ನಮ್ಮ ಮಗಳ ಹುಟ್ಟುಹಬ್ಬವಿದ್ದ ಕಾರಣ ದರ್ಶನ ಮತ್ತು ಆಶೀರ್ವಾದ ಪಡೆಯಲು ನಾವು ಅಪ್ಪಾಜಿ ಅವರ ಮಠಕ್ಕೆ ಹೋಗಿದ್ದೆವು.' ಸಂತ್ರಸ್ತ ಬಾಲಕಿಯ ಪೋಷಕರು.

**ಡಿಜಿಟಲ್ ಸಂಚು ಅಥವಾ ಅಸಲಿ ಸತ್ಯ?!**

ಪೋಷಕರು ಮಾಡಿರುವ ಅತ್ಯಂತ ಗಂಭೀರ ಆರೋಪವೆಂದರೆ 'ವಿಡಿಯೋ ಎಡಿಟಿಂಗ್'. ತಾವೇ ಹೆಮ್ಮೆಯಿಂದ ಮಗಳ ಹುಟ್ಟುಹಬ್ಬದ ಆಶೀರ್ವಾದದ ವಿಡಿಯೋವನ್ನು ವಾಟ್ಸಾಪ್ ಸ್ಟೇಟಸ್ ಹಾಗೂ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾಗಿ ಅವರು ಹೇಳಿದ್ದಾರೆ. ಆದರೆ ಕಿಡಿಗೇಡಿಗಳು ಆ ವಿಡಿಯೋವನ್ನು ದುರುದ್ದೇಶದಿಂದ ಕತ್ತರಿಸಿ ತಪ್ಪು ಅರ್ಥ ಬರುವಂತೆ ಬಿತ್ತರಿಸಿದ್ದಾರೆ ಎಂಬುದು ಅವರ ವಾದ...

ಡಿಜಿಟಲ್ ಕಂಟೆಂಟ್ ಸ್ಪೆಷಲಿಸ್ಟ್ ಆಗಿ ಈ ಪ್ರಕರಣವನ್ನು ಗಮನಿಸಿದರೆ, ಇಂದಿನ ಕಾಲದಲ್ಲಿ ಒಂದು ಖಾಸಗಿ



ಮಲ್ಲಿಕಾರ್ಜುನ ಮುತ್ಯಾ ಎಂಬಾತನು ಅಪ್ರಾಪ್ತ ಹೆಣ್ಣು ಮಗಳೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸಿ, ಲೈಂಗಿಕ ದೌರ್ಜನ್ಯವೆಸಗಿರುವ ಆರೋಪ ಸಾಮಾಜಿಕ ಜಾಲತಾಣಗಳಲ್ಲಿ ವರದಿಯಾಗುತ್ತಿದೆ. ಈ ಬಗ್ಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಪೋಕ್ಸೋ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿ, ಪ್ರಕರಣದ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿದೆ.

ಧಾರ್ಮಿಕ ವಿಧಿವಿಧಾನದ ವಿಡಿಯೋ ಸಾರ್ವಜನಿಕ ವಲಯಕ್ಕೆ ಬಂದಾಗ ಅದರ ಮೂಲ ಉದ್ದೇಶವೇ ಬದಲಾಗಿಬಿಡುತ್ತದೆ. ಮತ್ತೊಂದೆಡೆ, ಅಜ್ಞಾತ ಸ್ಥಳದಿಂದ ವಿಡಿಯೋ ಬಿಡುಗಡೆ ಮಾಡಿರುವ ಮಲ್ಲಿಕಾರ್ಜುನ ಮುತ್ಯಾ ಕೂಡ 'ನಾನು ಓಡಿ ಹೋಗಿಲ್ಲ, ಪೊಲೀಸರು ಕರೆದಾಗ ಬರುತ್ತೇನೆ' ಎಂದು ಹೇಳಿರುವುದು ಪ್ರಕರಣದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಡಿಜಿಟಲ್ ಪುರಾವೆಗಳನ್ನು ಹೇಗೆ ತಿರುಚಬಹುದು ಅಥವಾ ಬಳಸಿಕೊಳ್ಳಬಹುದು ಎಂಬುದಕ್ಕೆ ಈ ಪ್ರಕರಣ ಒಂದು ಜ್ವಲಂತ ಉದಾಹರಣೆ.

**ಕಾನೂನು ಮತ್ತು ಭಕ್ತಿಯ ನಡುವಿನ ಸಂಘರ್ಷ...**

ಸಾಮಾನ್ಯವಾಗಿ ಪೋಕ್ಸೋ ಪ್ರಕರಣಗಳಲ್ಲಿ ಸಂತ್ರಸ್ತ ಕುಟುಂಬವು ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಒತ್ತಾಯಿಸುತ್ತದೆ. ಆದರೆ ಇಲ್ಲಿ ಪೋಷಕರು ಕಣ್ಣೀರಿಡುತ್ತಾ 'ಅಪ್ಪಾಜಿ ನಮಗೆ ದೇವರ ಸಮಾನ' ಎನ್ನುತ್ತಿರುವುದು ಪ್ರಕರಣವನ್ನು ಕಾನೂನಾತ್ಮಕವಾಗಿ ಒಂದು 'ನೈಟ್ ಮೇರ್' ಆಗಿ ಪರಿವರ್ತಿಸಿದೆ. ಕಳೆದ 34 ವರ್ಷಗಳಿಂದ ಮಠದೊಂದಿಗೆ ಅವರಿಗಿರುವ ಅವಿನಾಭಾವ ಸಂಬಂಧ ಮತ್ತು ನಂಬಿಕೆ ಇಲ್ಲಿ ಎದ್ದು ಕಾಣುತ್ತಿದೆ.

ಪೋಷಕರು ಸೊಲ್ಲಾಪುರದಿಂದ ಈ ಹೇಳಿಕೆ ನೀಡಿರುವುದು ಗಮನಾರ್ಹ. ಯಾದಗಿರಿಯ ಸ್ಥಳೀಯ ಒತ್ತಡಗಳಿಂದ ದೂರವಿದ್ದು ಅವರು ಈ ನಿಲುವು ತಳೆದಿದ್ದಾರೆ ಎನ್ನಬಹುದಾದರೂ, ಕಾನೂನಿನ ಕಣ್ಣಿನಲ್ಲಿ ಬಾಲಕಿಯು 'ಸಂತ್ರಸ್ತೆ'ಯಾಗಿ ಉಳಿಯುತ್ತಾಳೆ. ಪೋಷಕರು 'ಹೊಸ್ಟೈಲ್' ಅಥವಾ ಸಾಕ್ಷ್ಯ ನುಡಿಯಲು ನಿರಾಕರಿಸಿದರೆ ಪ್ರಕರಣದ ಹಾದಿ ಬದಲಾಗಬಹುದು.

'ಅಪ್ಪಾಜಿ ಅವರದ್ದು ಯಾವುದೇ ತಪ್ಪಿಲ್ಲ, ಅವರು ನಮಗೆ ದೇವರ ಸಮಾನ. ಮುಗ್ಧ ಮಗುವಿನ ಹುಟ್ಟು ಹಬ್ಬದ ಸಂಭ್ರಮವನ್ನು ವಿವಾದ ಮಾಡಿದ್ದು ನೋವು ತಂದಿದೆ.' ಪೋಷಕರ ಭಾವನಾತ್ಮಕ ಅಳಲು.

ಪೋಷಕರ ಈ ಹೊಸ ಹೇಳಿಕೆ ತನಿಖಾಧಿಕಾರಿಗಳ ಮುಂದೆ ದೊಡ್ಡ ಸವಾಲುಗಳನ್ನು ಇಟ್ಟಿದೆ. ಸದ್ಯ ಪೊಲೀಸರು ವಿಡಿಯೋದ ನೈಜತೆಯನ್ನು ಪತ್ತೆಹಚ್ಚಲು ವಿಧಿವಿಜ್ಞಾನ ಪ್ರಯೋಗಾಲಯದ (FSL) ವರದಿಗಾಗಿ ಕಾಯುತ್ತಿದ್ದಾರೆ. ಒಂದು ವೇಳೆ ವಿಡಿಯೋ ಎಡಿಟ್ ಆಗಿರುವುದು ಸಾಬೀತಾದರೆ ಅದು ಪ್ರಕರಣಕ್ಕೆ ಹೊಸ ದಿಕ್ಕು ನೀಡಲಿದೆ.

ಆದರೆ ಇಲ್ಲಿ ಕಾಡುವ ಅಂತಿಮ ಪ್ರಶ್ನೆಯೆಂದರೆ: ವೈರಲ್ ವಿಡಿಯೋ ಮೂಲಕ ನಡೆಯುವ 'ಮಾಧ್ಯಮ ವಿಚಾರಣೆ' ಹೆಚ್ಚು ಪ್ರಬಲವೋ ಅಥವಾ ಪೋಷಕರ ಸಾಕ್ಷ್ಯ ಮತ್ತು ಎಫ್‌ಎಸ್‌ಎಲ್ ವರದಿ ಆಧಾರಿತ 'ನ್ಯಾಯಾಲಯದ ವಿಚಾರಣೆ' ಹೆಚ್ಚು 'ಮೌಲ್ಯಯುತವೋ?' ಕಾನೂನು ಭಕ್ತಿಯನ್ನೋ ಅಥವಾ ಸಾರ್ವಜನಿಕ ಆಕ್ರೋಶವನ್ನೋ ಪರಿಗಣಿಸದೆ, ಕೇವಲ ತಾಂತ್ರಿಕ ಸತ್ಯ ಮತ್ತು ಸಾಕ್ಷ್ಯಗಳ ಆಧಾರದ ಮೇಲೆ ತೀರ್ಪು ನೀಡಬೇಕಾಗುತ್ತದೆ. ಈ 'ಬಿಗ್ ಟ್ವಿಸ್ಟ್' ನಂತರ ನ್ಯಾಯಾಲಯ ಯಾವ ತೀರ್ಮಾನಕ್ಕೆ ಬರಲಿದೆ ಎಂಬುದನ್ನು ಇಡೀ ರಾಜ್ಯ ಕುತೂಹಲದಿಂದ ಗಮನಿಸುತ್ತಿದೆ. ☯




# ಕಷ್ಟದ ನೆಪದಲ್ಲಿ ಉದ್ಯಮಿಗೆ ಹನಿಟ್ರ್ಯಾಪ್: ನರ್ಸ್ ಸೇರಿ ನಾಲ್ವರು ಬಂಧನ

**ದಾವಣಗೆರೆ**

✍ ಹಿರಿಯೂರು ರಫೀಕ್

ದಾವಣಗೆರೆಯಲ್ಲಿ ಉದ್ಯಮಿಯೊಬ್ಬರನ್ನು ಹನಿಟ್ರ್ರಾಪ್ ಬಲೆಗೆ ಬೀಳಿಸಿ ಲಕ್ಷಾಂತರ ರೂಪಾಯಿ ವಸೂಲಿ ಮಾಡಲು ಯತ್ನಿಸಿದ ಘಟನೆ ಬೆಳಕಿಗೆ ಬಂದಿದೆ. ಕಷ್ಟದಲ್ಲಿದ್ದೇನೆ ಎಂದು ನಂಬಿಕೆ ಮೂಡಿಸಿ ಪರಿಚಯ ಬೆಳೆಸಿಕೊಂಡ ನರ್ಸ್ ಹಾಗೂ ಆಕೆಯ ತಂಡದವರು ಉದ್ಯಮಿಯನ್ನು ಖಾಸಗಿ ಅಪಾರ್ಟ್‌ಮೆಂಟ್‌ಗೆ ಕರೆಸಿ ವಿಡಿಯೋ ಚಿತ್ರೀಕರಿಸಿ ಹಣದ ಬೇಡಿಕೆ ಇಟ್ಟ ಘಟನೆ ನಗರದಲ್ಲಿ ಭಾರೀ ಸಂಚಲನ ಮೂಡಿಸಿದೆ. ಈ ಸಂಬಂಧ ದಾವಣಗೆರೆಯ ವಿದ್ಯಾನಗರ ಪೊಲೀಸ್ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ನರ್ಸ್ ಸೇರಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.


ಎಸ್ಪಿ ಡಾ. ಹೆಚ್.ಟಿ. ಶೇಖರ್

ಬಂಧಿತರನ್ನು ನರ್ಸ್ ಸುಷ್ಮಿತಾ (27), ಬೆಕ್ಕಿನ ಕಣ್ಣು ಕೃಷ್ಣ, ರಾಹುಲ್ ಹಾಗೂ ಚನ್ನಬಸಪ್ಪ ಎಂದು ಗುರುತಿಸಲಾಗಿದೆ. ಮತ್ತೊಬ್ಬ ಆರೋಪಿಯಾದ ಸಂಜನಾ ಎಂಬ ಮಹಿಳೆ ಪರಾರಿಯಾಗಿದ್ದು, ಆಕೆಯ ಬಂಧನಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ. ಬಂಧಿತರಿಂದ ಒಂದು ಲಕ್ಷ ರೂಪಾಯಿ ನಗದು ವಶಪಡಿಸಿಕೊಳ್ಳಲಾಗಿದೆ.

ಪೊಲೀಸರ ಮಾಹಿತಿ ಪ್ರಕಾರ, ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯಲ್ಲಿ ವಾಸವಾಗಿದ್ದ ಉದ್ಯಮಿ ಬಿ. ಪ್ರಭು ಅವರನ್ನು ಸುಷ್ಮಿತಾ ಎಂಬ ನರ್ಸ್ ಕೆಲ ಸಮಯದ ಹಿಂದೆ ಪರಿಚಯಿಸಿಕೊಂಡಿದ್ದಳು. ಪ್ರಭುವಿಗೆ ಪರಿಚಯವಿದ್ದ ಮಹಿಳೆಯೊಬ್ಬರ ಮೂಲಕ ಈ ಪರಿಚಯವಾಗಿದ್ದು, ನಂತರ ಇವರಿಬ್ಬರ ನಡುವೆ ಸ್ನೇಹ ಬೆಳೆದಿತ್ತು. ಆರಂಭದಲ್ಲಿ ಸಾಮಾನ್ಯವಾಗಿ ಮಾತನಾಡುತ್ತಿದ್ದ ಸುಷ್ಮಿತಾ, ನಂತರ ತನ್ನ ವೈಯಕ್ತಿಕ ಸಮಸ್ಯೆಗಳನ್ನು ಹೇಳಿಕೊಂಡು ಪ್ರಭುವಿನ ವಿಶ್ವಾಸ ಗಳಿಸಿದ್ದಳು.

ಸುಷ್ಮಿತಾ ತನ್ನ ಮಕ್ಕಳ ಶಾಲಾ ಶುಲ್ಕ ಕಟ್ಟಲು ಹಣದ ಅಗತ್ಯವಿದೆ ಎಂದು ಹೇಳಿ ಪ್ರಭುವಿನ ಬಳಿ ಸಹಾಯ ಕೇಳಿದ್ದಳು. ಈ ಮೂಲಕ ಪ್ರಭುವಿನ ಮನಸ್ಸಿನಲ್ಲಿ ಕರುಣೆ ಮೂಡಿಸಿ ಆತನನ್ನು ತನ್ನತ್ತ ಸೆಳೆದಿದ್ದಳು. ಇದೇ ವೇಳೆ ಸುಷ್ಮಿತಾ ತನ್ನ ತಂಡದವರೊಂದಿಗೆ ಸೇರಿ ಹನಿಟ್ರ್ಯಾಪ್ ಮೂಲಕ ಹಣ ವಸೂಲಿ ಮಾಡುವ ಸಂಚು ರೂಪಿಸಿದ್ದಳು.

ಪೂರ್ವಯೋಜನೆಯಂತೆ ಮಾರ್ಚ್ 1ರಂದು ಸುಷ್ಮಿತಾ ಪ್ರಭುವನ್ನು ಸಿದ್ದವೀರಪ್ಪ ಬಡಾವಣೆಯಲ್ಲಿರುವ ಸರ್ವಿಸ್ ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡಿದ್ದಳು. ಅಲ್ಲಿಗೆ ತನ್ನ ಸ್ನೇಹಿತೆ ಸಂಜನಾ ಎಂಬ ಮಹಿಳೆಯನ್ನೂ ಕರೆಸಿಕೊಂಡಿದ್ದಳು. ಬಳಿಕ ಪ್ರಭು ಮತ್ತು ಸಂಜನಾಳನ್ನು ಒಂದು ಕೊಠಡಿಯಲ್ಲಿ ಇರಿಸಿ ಏಕಾಂತದಲ್ಲಿರುವಂತೆ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಆರೋಪಿಗಳಾದ ಬೆಕ್ಕಿನ ಕಣ್ಣು ಕೃಷ್ಣ ಮತ್ತು ರಾಹುಲ್ ಮೊಬೈಲ್ ಫೋನ್ ಮೂಲಕ ಅವರ ಖಾಸಗಿ ಕ್ಷಣಗಳನ್ನು ಚಿತ್ರೀಕರಿಸಿದ್ದರು. ಬಳಿಕ ಕೊಠಡಿಗೆ ನುಗ್ಗಿ 'ನಿಮ್ಮ ವಿಡಿಯೋ ನಮ್ಮ ಬಳಿ ಇದೆ. ನಾವು ಕೇಳಿದಷ್ಟು ಹಣ ಕೊಡದಿದ್ದರೆ ಈ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತೇವೆ' ಎಂದು ಬೆದರಿಕೆ ಹಾಕಿದ್ದರು.

ಮೊದಲಿಗೆ ಆರೋಪಿಗಳು ಪ್ರಭುವಿನಿಂದ 25 ಲಕ್ಷ ರೂಪಾಯಿ ಬೇಡಿಕೆ ಇಟ್ಟಿದ್ದರು. ಈ ವೇಳೆ ಚನ್ನಬಸಪ್ಪ ಎಂಬಾತ ಮಧ್ಯ ಪ್ರವೇಶಿಸಿ ರಾಜಿ ಪಂಚಾಯಿತಿ ನಡೆಸಿ ಹಣದ ಮೊತ್ತವನ್ನು 12 ಲಕ್ಷ ರೂಪಾಯಿಗೆ ಇಳಿಸಿದ್ದಾನೆ. ಈ ಘಟನೆದಿಂದ ಬೆಚ್ಚಿಬಿದ್ದ ಪ್ರಭು ಆ ಸಮಯದಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದನು.

ನಂತರ ಎರಡು ದಿನಗಳ ಬಳಿಕ ಆರೋಪಿಗಳು ಪ್ರಭುವಿಗೆ ಮತ್ತೆ ಕರೆ ಮಾಡಿ ಹಣ ನೀಡುವಂತೆ ಒತ್ತಾಯ ಮಾಡತೊಡಗಿದರು. ಆಗ ಪ್ರಭು ತನ್ನ ಬಳಿ ಇರುವಷ್ಟು ಹಣವನ್ನು ಕೊಡುತ್ತೇನೆ ಎಂದು ಹೇಳಿ ಸಮಯ ಕೇಳಿಕೊಂಡಿದ್ದನು. ಈ ನಡುವೆ ಪ್ರಭು ವಿದ್ಯಾನಗರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದಾನೆ.

ಪ್ರಭುವಿನ ದೂರಿನ ಆಧಾರದ ಮೇಲೆ ಪೊಲೀಸರು ಕಾರ್ಯಾಚರಣೆ ರೂಪಿಸಿದ್ದರು. ಆರೋಪಿಗಳು ಹಣ ಪಡೆಯಲು ಬರುತ್ತಾರೆ ಎಂಬ ಮಾಹಿತಿ ಪಡೆದು ಪೊಲೀಸರು ಸೂಕ್ತ ಯೋಜನೆ ರೂಪಿಸಿದರು. ಪ್ರಭು ಆರೋಪಿಗಳಿಗೆ ಒಂದು ಲಕ್ಷ ರೂಪಾಯಿ ವ್ಯವಸ್ಥೆ ಮಾಡಿಕೊಂಡು ಕೊಡುತ್ತೇನೆ ಎಂದು ಹೇಳಿ ಕರೆಸಿಕೊಂಡಿದ್ದನು.

ಹಣ ಪಡೆಯಲು ಬಂದಾಗಲೇ ಪೊಲೀಸರು ದಾಳಿ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ ಒಂದು ಲಕ್ಷ ರೂಪಾಯಿ ನಗದು ವಶಪಡಿಸಿಕೊಂಡಿದ್ದಾರೆ. ಈ ವೇಳೆ ಸಂಜನಾ ಎಂಬ ಮಹಿಳೆ ಅಲ್ಲಿಂದ ಪರಾರಿಯಾಗಿದ್ದು, ಆಕೆಯನ್ನು ಬಂಧಿಸಲು ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಈ ಪ್ರಕರಣ ಸಂಬಂಧ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಮುಂದಿನ ತನಿಖೆಯನ್ನು ಪೊಲೀಸರು ಮುಂದುವರೆಸಿದ್ದಾರೆ.

ಪೊಲೀಸರ ಪ್ರಕಾರ, ಹನಿಟ್ರ್ರಾಪ್ ಮೂಲಕ ಹಣ ವಸೂಲಿ ಮಾಡುವ ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಸಾಮಾಜಿಕ ಜಾಲತಾಣಗಳು ಹಾಗೂ ಪರಿಚಯಗಳ ಮೂಲಕ ಶ್ರೀಮಂತರನ್ನು ಗುರಿಯಾಗಿಸಿಕೊಂಡು ಇಂತಹ ಜಾಲ ಬೀಸುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಪೊಲೀಸರು ಸಲಹೆ ನೀಡಿದ್ದಾರೆ.


ಆರೋಪಿ ನರ್ಸ್ ಸುಷ್ಮಿತಾ

ಈ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ ವಿದ್ಯಾನಗರ ಠಾಣೆ ಪೊಲೀಸರ ಕಾರ್ಯವನ್ನು ಜಿಲ್ಲಾ ಎಸ್ಪಿ ಡಾ. ಹೆಚ್.ಟಿ. ಶೇಖರ್ ಪ್ರಶಂಸಿಸಿದ್ದಾರೆ. ಪೊಲೀಸರ ತ್ವರಿತ ಕ್ರಮದಿಂದ ಮತ್ತಷ್ಟು ದೊಡ್ಡ ವಂಚನೆ ನಡೆಯುವುದನ್ನು ತಪ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಒಟ್ಟಿನಲ್ಲಿ, ಸುಲಭವಾಗಿ ಹಣ ಸಂಪಾದನೆ ಮಾಡುವ ಆಸೆಯಿಂದ ಕೆಲವರು ಅಪರಾಧದ ದಾರಿಗೆ ಇಳಿಯುತ್ತಿರುವುದು ಸಮಾಜಕ್ಕೆ ಎಚ್ಚರಿಕೆಯ ಸಂಕೇತವಾಗಿದೆ. ಪರಿಚಯದ ಹೆಸರಿನಲ್ಲಿ ವಿಶ್ವಾಸ ಗಳಿಸಿ ನಂತರ ಬಲೆ ಬೀಸುವ ಇಂತಹ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರು ಅಪರಿಚಿತರೊಂದಿಗೆ ಸಂಬಂಧ ಬೆಳೆಸುವಾಗ ಹೆಚ್ಚಿನ ಜಾಗ್ರತೆ ವಹಿಸುವ ಅಗತ್ಯವಿದೆ.


ಆರೋಪಿಗಳಾದ ಬೆಕ್ಕಿನಕಣ್ಣು ಕೃಷ್ಣ, ಚನ್ನಬಸಪ್ಪ ಹಾಗೂ ರಾಹುಲ್



ಸುಪಾರಿ ಕಿಲ್ಲರ್ಸ್

5 ☞

ಎರಡು ವರ್ಷದ ಹಿಂದೆಯೇ ಗೋಪಿಯನ್ನ ಕಿಡ್ನ್ಯಾಪ್ ಮಾಡಿಸಿ ಹಲ್ಲೆ ಮಾಡಿ ಬಿಟ್ಟಿದ್ನಂತೆ!! ಆವಾಗಲೇ ಪತ್ನಿ ಸ್ವಾತಿ ರಾಜಿ ಮಾಡಿಕೊಳ್ಳುವ ಬಗ್ಗೆ ಬುದ್ದಿ ಹೇಳಿದ್ದು, ಅದಕ್ಕೆ ಗೋಪಿಯೂ ಒಪ್ಪಿದ್ದಂತೆ!!! ಆದರೆ, ರಾಜಿಯಾಗಲು ದುರ್ವಿಧಿಯೇ ಬಿಡಲಿಲ್ಲವಲ್ಲ....

ಮೋಹ ಪೀಡಿತ ದ್ವೇಷ ಪೂರಿತ ಮೋಹನ ಗೋಪಿ ಕತೆ ಮುಗಿಸಲೇಬೇಕೆಂದು ನಿರ್ಧರಿಸಿ, ಮಾರ್ಚ್ 08 ರಂದು ಹಂತಕರಿಗೆ 25 ಲಕ್ಷ ರೂ ಸುಪಾರಿ ಕೊಟ್ಟು ಗೋಪಾಲನ ಪ್ರಾಣ ತೆಗೆಸಿಬಿಟ್ಟಿದ್ದಾನೆ.... ತತ್ಫಲವಾಗಿ ಇದೀಗ ಕಂಬಿ ಎಣಿಸುತ್ತಿದ್ದಾನೆ!! ಈ ಕೇಸ್ ಆದಾಗ ಆನೇಕಲ್ ಭಾಗದಲ್ಲಿ ರೌಡಿ ಹಂದಿ ಹರೀಶನ ಹೆಸರು ಓಡಾಡುತ್ತಿತ್ತು! ಪಣತ್ತೂರು ಜಗನ ಶಿಷ್ಯ ರೌಡಿ ಕಿರಣ್ ಹೆಸರು ಕೂಡ!!

ಎಸ್ಪಿ ಚಂದ್ರಕಾಂತ್ ಅವರುಈ ಕೊಲೆಯ ಭೀಕರತೆಯನ್ನು ಅರಿತು 9 ಪೊಲೀಸ್ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆಗೆ ಛೂ ಬಿಟ್ಟಿದ್ದರು. ಆದರೆ,ಇದರ ನಡುವೆಯೇ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಆನೇಕಲ್‌ಗೆ ಧಾವಿಸಿ ಬಂದು, ತಮ್ಮ ಜನಾಂಗದ ಒಳ್ಳೆ ವ್ಯಕ್ತಿ ಗೋಪಾಲ್ ಕೊಲೆಯಾಗಿರುವುದು ಖಂಡನೀಯ... ಈ ಪ್ರಕರಣದಲ್ಲಿ ಪೊಲೀಸರಿಂದ ಅನ್ಯಾಯ ಆಗಿದೆ....

ಇಲ್ಲಿ ಕಿಡ್ನಾಪ್, ಅಲ್ಲಿ ಕೊಲೆ, ಯಾರೋ ಕೊಲ್ತಾರೆ, ಇನ್ನಾರೋ ಬೇಲ್ ಅರ್ಜಿ ಹಾಕ್ತಾರೆ.... ಇಲ್ಲಿ ಕೊಲೆ, ಅಲ್ಲಿ ಸುರೇಂಡರ್ ಡ್ರಾಮಾ! ಇವೇ ಮುಂತಾದ ಆರೋಪ ಮಾಡಿ ಘೇರಾವ್ ಮೊಳಗಿಸಿದ್ರು! ನಂತರ ಇದು ವಿಧಾನ ಸಭೆಯಲ್ಲೂ ಚರ್ಚಿಸಲ್ಪಟ್ಟು, ತನಿಖೆ ಸಿಐಡಿಗೆ ಹೋಯ್ತು!! ಗಮನಿಯ ಸಂಗತಿ ಏನೆಂದರೆ, ಎಸ್ಪಿ ಚಂದ್ರಕಾಂತ್, ಡಿವೈಎಸ್ಪಿ ಮೋಹನ್ ಕುಮಾರ್ ನೇತೃತ್ವದ ಪೊಲೀಸ್ ತಂಡಗಳು ಅಷ್ಟೊತ್ತಿಗಾಗಲೇ ಡೆಂಕಣಿ ಕೋಟೆ, ಹೊಗೇನಕಲ್ ಕಾಡಿನಲ್ಲಿ ಅವಿತಿದ್ದ ಸುಪಾರಿ ಕಿಲ್ಲರ್‌ಗಳನ್ನು ಬಂಧಿಸಿ ಆಗಿತ್ತು!!


ರೌಡಿ ಹರೀಶ ಅ!! ಹಂದಿ ಹರೀಶ


ಗೋಪಿ ಪತ್ನಿ ಸ್ವಾತಿ ಟೀಚರ್

**ಹಂದಿ ಹರೀಶನ ಟೀಮ್?!**

ಆನೇಕಲ್ ಪೊಲೀಸ್ ಟೀಮ್ ಈ ಕೊಲೆಗೆ ಸಂಬಂಧಿಸಿದಂತೆ, ತೇಜಸ್, ದರ್ಶನ್, ಲಿಖಿತ್, ನಿಖಿಲ್, ಆನಂದ್, ಪ್ರಶಾಂತ್ ಹಾಗೂ ಓರ್ವ ಅಪ್ರಾಪ್ತನನ್ನು ಬಂಧಿಸಿದ್ದಾರೆ. ಬಂಧಿತ ಹಂತಕರೆಲ್ಲ ಆನೇಕಲ್ ಸುತ್ತ ಮುತ್ತಲಿನವರೆ... ಇವರೆಲ್ಲ ರೌಡಿ ಹರೀಶ್ ಅಲಿಯಾಸ್ ಹಂದಿ ಹರೀಶನ ಸಹಚರರೇ? ಎಂಬುದು ತನಿಖೆಯಿಂದ ತಿಳಿಯಬೇಕಿದೆ!! ಹಾಗೆಯೇ, ಪಣತ್ತೂರು ಜಗನ ಶಿಷ್ಯ ಆನೇಕಲ್ ಕಿರಣ್ ಪಾತ್ರವೇನು?! ಎಂಬುದು ಕೂಡ!!!

# ಸೌಜನ್ಯ ಫೈಲ್ಸ್



23

ನಿರೂಪಣೆ :


ಮೋಹನ್ ಬೋಳಂಗಡಿ

# ಸೌಜನ್ಯ ಶವ ಪರೀಕ್ಷೆ ಮಾಡಿದ್ದ ವೈದ್ಯಾಧಿಕಾರಿ ಹೇಳಿದ ಸತ್ಯಗಳು!!

ಸೌಜನ್ಯ ಪ್ರಕರಣದಲ್ಲಿ ಬಹು ಚರ್ಚಿತವಾದಂತಹ ವಿಷಯ ಅಂದರೆ ಆಕೆಯ ಶವ ಪರೀಕ್ಷೆಯ ಸಂದರ್ಭದಲ್ಲಿ ನಡೆದಿದ್ದಂತಹ ಎಡವಟ್ಟುಗಳು. ಇದರಿಂದಾಗಿಯೇ ಆರೋಪಿ ಸಂತೋಷ್‌ರಾವ್‌ಗೆ ನ್ಯಾಯಾಲಯದಲ್ಲಿ ಸಂಶಯದ ಲಾಭ ದೊರಕಿ ಆತ ನಿರ್ದೋಷಿ ಎಂದು ಬಿಡುಗಡೆಗೊಂಡ ಎಂಬ ವಾದವೂ ಇದೆ. ಸೌಜನ್ಯಳ ಶವ ಪರೀಕ್ಷೆ ನಡೆಸಿದ್ದು ಬೆಳ್ತಂಗಡಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಆದಂ. ಅವರಿಗೆ ಸಹಾಯಕರಾಗಿದ್ದದು ಉಜಿರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಡಾ. ರಶ್ಮಿ. ಡಾ. ಆದಂ ಸೌಜನ್ಯ ಪ್ರಕರಣದ ಎಂಟನೇ ಸಾಕ್ಷಿ. ಅವರು 2016 ನವೆಂಬರ್ 18ರಂದು ಬೆಂಗಳೂರಿನ 50ನೇ ಹೆಚ್ಚುವರಿ ನಗರ ಮತ್ತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶೆ ಬಿ.ಎಸ್. ರೇಖಾ ಅವರ ಮುಂದೆ ಸಾಕ್ಷ್ಯ ನುಡಿದಿದ್ದರು.

ಡಾ. ಆದಂ ಅವರ ಹೇಳಿಕೆಯ ಪ್ರಕಾರ 2006 ಸೆಪ್ಟೆಂಬರ್‌ನಿಂದ 2016ರವರೆಗೆ ಅಂದರೆ ಈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲೂ ಸಹ ಬೆಳ್ತಂಗಡಿ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ 10.10.2012 ರಂದು ಸಂಜೆ 6.00 ಗಂಟೆಯಿಂದ 7.30ರವರೆಗೆ 17 ವರ್ಷ ಪ್ರಾಯದ ಸಾಧಾರಣ ಮೈಕಟ್ಟಿನ ಕುಮಾರಿ ಸೌಜನ್ಯಳ ಮರಣೋತ್ತರ ಪರೀಕ್ಷೆಯನ್ನು ನಡೆಸಿದ್ದರು. ಆ ಮೃತದೇಹವನ್ನು ಗಮನಿಸಿದಾಗ ಕೆಲವು ಗಾಯಗಳು ಕಂಡು ಬಂದಿದ್ದವು. ಆಕೆಯ ದೇಹದ ಮೇಲೆ ತರಚು ಗಾಯಗಳು ಇತ್ತು. ಕುತ್ತಿಗೆಯ ಭಾಗದಲ್ಲಿ ಆಳವಾದ ಗಾಯ ಇತ್ತು. ಆ ಗಾಯದಿಂದಲೇ ಆಕೆಯ ಸಾವು ಸಂಭವಿಸಿದೆ. ಆಕೆಯ ಮೇಲೆ ಲೈಂಗಿಕ ಹಲ್ಲೆ ನಡೆದಿದೆ. ಆಕೆಯ ಗುಪ್ತಾಂಗಕ್ಕೆ ಮಣ್ಣು ತುಂಬಿಸಲಾಗಿತ್ತು. ಆಕೆಯ ಮೇಲೆ ಮರಣೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಗುಪ್ತಾಂಗದಲ್ಲಿದ್ದಂತಹ ಮಣ್ಣನ್ನು ತೆಗೆದಿರಿಸಲಾಗಿತ್ತು. ಮತ್ತು ಆ ಸ್ಥಳದ ಮಣ್ಣನ್ನು ಸಹ ಸಂಗ್ರಹಿಸಲಾಗಿತ್ತು. ಆಕೆಯನ್ನು ಆಕೆಯ ಕುತ್ತಿಗೆಯಲ್ಲಿದ್ದಂತಹ ಗುರುತಿನ ಚೀಟಿಯ ಟ್ಯಾಗ್ ಹಿಡಿದುಕೊಂಡು ಎಳೆದೊಯ್ದ ಪರಿಣಾಮವಾಗಿ ಆಕೆಗೆ ಉಸಿರುಗಟ್ಟಿ ಸಾವು ಸಂಭವಿಸಿದೆ. ಲೈಂಗಿಕ ದೌರ್ಜನ್ಯದ ಸಂದರ್ಭದಲ್ಲಿ ಆಕೆ ಪ್ರತಿಭಟಿಸಿದ್ದರಿಂದ ಆಕೆಯ ಮೈಮೇಲೆ ಗಾಯಗಳು ಉಂಟಾಗಿದೆ. ವಿಧಿವಿಜ್ಞಾನ ವರದಿಯ ಪ್ರಕಾರ ಆಕೆಯ ಗುಪ್ತಾಂಗದಿಂದ ಸಂಗ್ರಹಿಸಿದ ಮಣ್ಣು ಮತ್ತು ಮಾದರಿ ಮಣ್ಣು ಹೊಂದಾಣಿಕೆ ಆಗಿದೆ ಆದ್ದರಿಂದ ಆಕೆಯನ್ನು ಅದೇ ಜಾಗದಲ್ಲಿ ಅಂದರೆ ಶವ ಸಿಕ್ಕ ಜಾಗದಲ್ಲಿಯೇ ಅತ್ಯಾಚಾರಕ್ಕೆ ಯತ್ನಿಸಿ ಕೊಲೆಗೈಯಲಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಆಕೆಯ ಶವ ಪರೀಕ್ಷೆಯ ಸಮಯಕ್ಕೆ ಕೃತ್ಯ ನಡೆದ 24ರಿಂದ 36 ಗಂಟೆಗಳು ಆಗಿದ್ದವು. ಶವದ ಸ್ನಾಯು ಸೆಟೆತ ಉಂಟಾಗಿದ್ದು, ಆಕೆಯ ಕುತ್ತಿಗೆಯನ್ನು ಒತ್ತಿ ಉಸಿರುಗಟ್ಟಿಸಿದ್ದರಿಂದ ಆ ಕೃತ್ಯವನ್ನು ಒಬ್ಬ ವ್ಯಕ್ತಿ ಮಾಡಲು ಸಾಧ್ಯವಾಗುತ್ತದೆ. ಶವದ ಕುತ್ತಿಗೆಯಲ್ಲಿ ಸಿಲುಕಿಕೊಂಡಿದ್ದ ಗುರುತು ಚೀಟಿಯ ಟ್ಯಾಗ್‌ನಿಂದ ಸಾವು ಸಂಭವಿಸಿರುವ ಸಾಧ್ಯತೆಗಳಿವೆ. ಸಿಒಡಿ ಪೊಲೀಸರು ಈ ಟ್ಯಾಗನ್ನು ಕಳುಹಿಸಿ ಅಭಿಪ್ರಾಯ ಕೇಳಿದ್ದರು. ಆ ಟ್ಯಾಗ್‌ನಿಂದಲೇ ಸೌಜನ್ಯಳ ಕುತ್ತಿಗೆಯಲ್ಲಿ ಕಂಡ ಗಾಯ ಆಗಿರಬಹುದು ಎಂದು ಅಭಿಪ್ರಾಯ ಹೇಳಿದ್ದೇನೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಉಜಿರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಶ್ಮಿ ಅವರು ಶವ ತನಿಖೆಯಲ್ಲಿ ಸಹಕರಿಸಿದ್ದರು. ಸಿಒಡಿ ಅಧಿಕಾರಿಗಳು ಕೋರಿದ್ದಂತಹ ಮಾಹಿತಿಗಳನ್ನು ನೀಡಿದ್ದೆ ಎಂದು ಡಾ. ಆದಂ ನ್ಯಾಯಾಲಯದಲ್ಲಿ ವಿವರಿಸಿದರು. ಶವ ಪರೀಕ್ಷೆಯ ಸಂದರ್ಭದಲ್ಲಿ ಶವದಿಂದ ವಿಸೇರವನ್ನು ಸಂಗ್ರಹಿಸಲಾಗಿಲ್ಲ. ಶವದ ಹೊಟ್ಟೆಯಲ್ಲಿ ಜೀರ್ಣವಾಗದೆ ಇದ್ದ ಆಹಾರ ಇತ್ತು. ಆ ರೀತಿ ಜೀರ್ಣ ಆಗದೆ ಇದ್ದ ಆಹಾರ ಇದ್ದುದರಿಂದ ಆಕೆ ಸಂಜೆ 6.00 ಗಂಟೆಯ ಸುಮಾರಿಗೆ ಆಹಾರ ಸೇವಿಸಿರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಕ್ಟೋಬರ್ 12 ರಂದು ನ್ಯಾಯಾಲಯದಲ್ಲಿ ಹಾಜರಿರುವಂತಹ ಆರೋಪಿ ಸಂತೋಷ್‌ರಾವ್‌ನನ್ನು ಪೊಲೀಸರು ತನ್ನ ಮುಂದೆ ಹಾಜರು ಪಡಿಸಿದ್ದು, ಆತನನ್ನು ಪರೀಕ್ಷೆಗೆ ಒಳಪಡಿಸಿದ ಸಂದರ್ಭದಲ್ಲಿ ಆತನ ಮೈಮೇಲೆ ಕೆಲವೊಂದು ಗಾಯಗಳು ಇದ್ದವು. ಅವು ಆತನನ್ನು ಪರೀಕ್ಷೆಗೆ ಒಳಪಡಿಸಿದ ಸಮಯಕ್ಕಿಂತ 48 ಗಂಟೆಗಳ ಹಿಂದೆ ಸಂಭವಿಸಿದ ಗಾಯಗಳೂ ಇದ್ದವು. 24 ಗಂಟೆಗಳ ಮೊದಲು ಆದ ಗಾಯಗಳು



ಇದ್ದವು ಎಂದು ಡಾ. ಆದಂ ನ್ಯಾಯಾಲಯಕ್ಕೆ ವಿವರಿಸಿ ಸಿಒಡಿ ಅಧಿಕಾರಿಗಳು ನಾಲ್ಕು ಬಾರಿ ತನ್ನನ್ನು ವಿಚಾರಿಸಿ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ ಎಂದು ವಿವರಿಸಿದರು. ಅದೇ ದಿನ ಅವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಗುರಿಪಡಿಸದೆ ಮರುದಿನ ಅಂದರೆ 19.11.2016ರಂದು ಪಾಟೀ ಸವಾಲಿಗೆ ಗುರುಪಡಿಸಿದರು.

ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರ ಪಾಟೀ ಸವಾಲಿಗೆ ಉತ್ತರಿಸಿದ ಡಾ. ಆದಂ ಅವರು ತಾನು 25 ವರ್ಷಗಳಿಂದ ಸರ್ಕಾರಿ ವೈದ್ಯನಾಗಿದ್ದೇನೆ. ಸೌಜನ್ಯ ಪ್ರಕರಣದ ಶವ ಪರೀಕ್ಷೆ ನಡೆಸುವುದಕ್ಕಿಂತ ಮೊದಲು ಸಾಕಷ್ಟು ಶವಗಳನ್ನು ಪರೀಕ್ಷೆ ಮಾಡಿರುತ್ತೇನೆ. ಪೊಲೀಸರು ಶವ ಪರೀಕ್ಷೆಗೆ ಕೋರಿಕೆ ಸಲ್ಲಿಸಿದ ಬಳಿಕ ಶವ ಪರೀಕ್ಷೆ ಮಾಡುತ್ತೇನೆ. ಶವ ಪಂಚನಾಮೆಯನ್ನು ಪೊಲೀಸರು ಮಣ್ಣಸಂಕದಲ್ಲಿ ಮಾಡಿದ್ದು, ನಾನು ನೋಡಿಲ್ಲ, ಶವ ಪಂಚನಾಮೆಯನ್ನು ಓದಿ ಅರ್ಥ ಮಾಡಿಕೊಂಡಿಲ್ಲ, ಶವ ತನಿಖೆ ಮುಗಿದದ್ದು ಸಂಜೆ 6.00 ಗಂಟೆಗೆ. ಆದರೆ 6.00 ಗಂಟೆಗೆ ಶವ ಬಂದಿದೆ ಎಂದು ಮರಣೋತ್ತರ ಪರೀಕ್ಷಾ ವರದಿಯಲ್ಲಿ ಬರೆದಿರುವುದು ಸುಳ್ಳು ಅಂದರೆ ಶವವನ್ನು 6.00 ಗಂಟೆಗೆ ಸ್ವೀಕರಿಸಿದ್ದೇನೆ ಎಂದು ಆರೋಪಿ ಪರ ವಕೀಲರ ಪ್ರಶ್ನೆಗೆ ಉತ್ತರಿಸಿದರು. ಶವ ಪಂಚನಾಮೆ ನಡೆದ ಸ್ಥಳ ಆಸ್ಪತ್ರೆಯಿಂದ 12 ಕಿ.ಮಿ. ದೂರದಲ್ಲಿದೆ. ಶವ ಪಂಚನಾಮೆ ಮುಗಿದ ಬಳಿಕ ಬೆಳ್ತಂಗಡಿ ಪಿಎಸ್‌ಐ ಯೋಗೀಶ್ ಕುಮಾರ್ ಅವರು ಶವವನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ತಂದಿದ್ದರು ಎಂದು ಅವರು ನ್ಯಾಯಾಲಯಕ್ಕೆ ವಿವರಿಸಿದರು.



ಸಂತೋಷ್ ರಾವ್

ನಾರಾಯಣ ರೆಡ್ಡಿ ಮತ್ತು ಮೋದಿ ಅವರ ಮೆಡಿಕಲ್ ಜ್ಯೂರಿಸ್ ಪ್ರೂಡೆನ್ಸ್ ಪ್ರಕಾರ ಸೂರ್ಯನ ಬೆಳಕಿನಲ್ಲಿ ಶವ ಪರೀಕ್ಷೆ ಮಾಡಬೇಕು ಎಂದು ಇತ್ತು. ಆದರೆ 2012ರಲ್ಲಿ ಬಂದ ಸರಕಾರಿ ಆದೇಶದಲ್ಲಿ ದೀಪದ ಬೆಳಕಿನಲ್ಲಿ ಶವ ಪರೀಕ್ಷೆ ಮಾಡಬಹುದು ಎನ್ನುವ ಸೂಚನೆ ಇರುವ ಹಿನ್ನೆಲೆಯಲ್ಲಿ ಲಭ್ಯ ಬೆಳಕಿನ ಆಧಾರದಲ್ಲಿ ಶವ ಪರೀಕ್ಷೆ ಮಾಡಲಾಗುತ್ತಿದೆ. ಶವದ ಉದ್ದ ಮತ್ತು ತೂಕವನ್ನು ನಮೂದು ಮಾಡಲಾಗಿಲ್ಲ. ಕತ್ತಲೆಯಲ್ಲಿ ಶವ ತನಿಖೆ ಮಾಡಿದ್ದು ಈ ವಿಷಯವನ್ನು ಮರೆಮಾಚಲು 6.00 ಗಂಟೆಗೆ ಶವ ಸ್ವೀಕರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ತಿಳಿಸಿದ ಡಾ. ಆದಂ ಹೇಳಿಕೆಯಲ್ಲಿ ಶವ ಪರೀಕ್ಷೆಯನ್ನು ಸೂಕ್ತ ಬೆಳಕಿನಲ್ಲಿ ಮಾಡಿಲ್ಲ ಮತ್ತು ಆಗ ಕತ್ತಲೆ ಇದ್ದುದರಿಂದ ಶವದ ಕೈಯಲ್ಲಿ ಇದ್ದ ಗಾಯವನ್ನು ಗಮನಿಸಿಲ್ಲ ಎಂದು ಪ್ರಕರಣದ ತನಿಖಾಧಿಕಾರಿಗಳಿಗೆ 30.07.2015 ರಂದು ಕೊಟ್ಟಿರುವ ಹೇಳಿಕೆಯಲ್ಲಿ ಹೇಳಿದ್ದೇನೋ ಇಲ್ಲವೋ ಎಂದು ನೆನಪಿಲ್ಲ, ಆ ಶವದ ಕೈಯಲ್ಲಿದ್ದ ಗಾಯ ನನಗೆ ಯವ ರೀತಿ ಕಾಣಲಿಲ್ಲ ಎಂದು ಗೊತ್ತಾಗುತ್ತಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದರು. ಸೌಜನ್ಯಳ ಶವ ಘೋರ ಹತ್ಯೆಗೆ ಒಳಗಾಗಿದ್ದು, ಗೊತ್ತಾದ ನಂತರವೇ ಶವ ತನಿಖೆ ಮಾಡಲಾಗಿದೆ ಅಂತಹ ಕೃತ್ಯಗಳಲ್ಲಿ ಶವ ತನಿಖೆ ಮಾಡುವುದು ಅತ್ಯಂತ ಮುಖ್ಯವಾಗಿದ್ದು, ಆ ಸಮಯದಲ್ಲಿ ಬೇಕಾದಂತಹ ಸಾಕ್ಷ್ಯಗಳನ್ನು ನಾವೇ ಸಂಗ್ರಹಿಸಬೇಕಾಗಿತ್ತು. ಆ ನಂತರ ಆ ಶವ ಮತ್ತೇ ಸಿಗುವ ಸಾಧ್ಯತೆ ಇರದೇ ಇರುವುದರಿಂದ ನಮ್ಮ ಕೆಲಸ ಬಹಳ ಮುಖ್ಯ ಎಂದು ಅಭಿಪ್ರಾಯಪಟ್ಟ ಡಾ. ಆದಂ ಅವರು ಒಂದು ಹುಡುಗಿಯನ್ನು ಅತ್ಯಾಚಾರ ಮಾಡುವ ಮೊದಲು ಆಕೆ ಸೇವಿಸಿರುವ ಆಹಾರವು ವಿಷ ಅಥವಾ ಅಮಲು ಪದಾರ್ಥ ಇರುವ ಸಾಧ್ಯತೆಗಳು ಇರಬಹುದು. ಆದರೆ ಶವದ ಹೊಟ್ಟೆಯಲ್ಲಿದ್ದ ವಸ್ತುಗಳನ್ನು ಸಂಗ್ರಹಿಸಿಲ್ಲ ಎಂದು ಒಪ್ಪಿಕೊಂಡರು.

ಶವದ ಹೊಟ್ಟೆಯಲ್ಲಿದ್ದ ಆಹಾರವನ್ನು ಸಂಗ್ರಹಿಸಿದ್ದರೆ ಆ ವ್ಯಕ್ತಿ ಎಲ್ಲಿ ಮತ್ತು ಯಾವ ರೀತಿಯ ಆಹಾರವನ್ನು ಸೇವಿಸಿದ್ದರು ಎಂಬ ಬಗ್ಗೆ ಮಾಹಿತಿ ಸಿಗುತ್ತದೆ. ನನ್ನ ಈ ಕೆಲಸದ ಅವಧಿಯಲ್ಲಿ ಆಹಾರದ ಮುಖಾಂತರವೇ ಕೆಲವೊಂದು ಕೇಸುಗಳ ತನಿಖೆ ಆಗಿದೆ. ಪೊಲೀಸರು ಏನು ಮಾಹಿತಿ ಕೇಳುತ್ತಾರೋ ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ನಾವು ಶವದಿಂದ ವಸ್ತುಗಳನ್ನು ಸಂಗ್ರಹಿಸಿ ತನಿಖೆಯನ್ನು ಮಾಡುತ್ತೇವೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಶವದ ಹೊಟ್ಟೆಯಲ್ಲಿ ಜೀರ್ಣವಾಗದೆ ಇದ್ದ ಆಹಾರ ಇದ್ದುದರಿಂದ ಆಹಾರ ಸೇವಿಸಿದ 6 ಗಂಟೆಯ ಒಳಗೆ ಆಕೆಯ ಮೃತ್ಯು ಆಗಿದೆ ಅಂದರೆ ಇರಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಡಾ. ಆದಂ ಅವರು ವ್ಯಕ್ತಿ ಸತ್ತ ತಕ್ಷಣ ಜೀರ್ಣಕ್ರಿಯೆ ನಿಂತು ಹೋಗುತ್ತದೆ. 6.00 ಗಂಟೆಯ ಮೊದಲು ಆಕೆಯ ಹೊಟ್ಟೆ ಖಾಲಿ ಇತ್ತು ಎಂದರೆ ಸರಿ. ಯಾವುದೋ ಒತ್ತಡಕ್ಕೆ ಮಣಿದು ಸರಿಯಾಗಿ ಶವ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಅವರು ಉತ್ತರಿಸಿದರು.

ಸೌಜನ್ಯಳಂತಹ ಸದೃಢ ಮೈಕಟ್ಟಿನ ಹುಡುಗಿಯನ್ನು ಆರೋಪಿಯಂತಹ ಒಬ್ಬನೇ ವ್ಯಕ್ತಿ ಎಳೆದುಕೊಂಡು ಹೋಗಲು ಸಾಧ್ಯವಿಲ್ಲ ಎಂಬ ಪ್ರಶ್ನೆಗೆ ನಕಾರಾತ್ಮಕವಾಗಿ ಪ್ರತಿಕ್ರಿಯಿಸುವ ಡಾ. ಆದಂ ಅವರು ಈ ರೀತಿಯ ಕೃತ್ಯವನ್ನು ಗಮನಿಸಿದಾಗ ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಗಮನಿಸಿದಾಗ ಇಂತಹ ಮೈಕಟ್ಟಿನ ಹುಡುಗಿಯ ಮೇಲೆ ಬಲವಂತವಾಗಿ ಅತ್ಯಾಚಾರ ಮಾಡಲು ಒಬ್ಬ ವ್ಯಕ್ತಿಗೆ ಸಾಧ್ಯವಿಲ್ಲ ಮತ್ತು ಒಬ್ಬರಿಗಿಂತ ಹೆಚ್ಚು ಜನರು ಇರುವ ಸಾಧ್ಯತೆಗಳು ಇರಬಹುದು ಎಂದರೆ ಸರಿ ಎಂದು ಪಾಟೀ ಸವಾಲಿಗೆ ಉತ್ತರಿಸಿದರು. ಆರೋಪಿ ಪರ ವಕೀಲರು ತೋರಿಸಿದ 3 ಭಾವ ಚಿತ್ರಗಳು ಆ ದಿನ ಶವಪರೀಕ್ಷೆ ಮಾಡಿದ ಶವದ ಭಾವಚಿತ್ರಗಳಾಗಿದೆ ಎಂದು ಗುರುತಿಸಿದ ಅವರು 3 ಫೋಟೋಗಳಲ್ಲಿ ಶವದ ಎಡಗೈಯನ್ನು ವೇಲ್‌ನಿಂದ ಕಟ್ಟಿರುವುದು ಕಂಡು ಬರುತ್ತಿದೆ ಎಂದು ವಿವರಿಸಿದರು. ಆ ಫೋಟೋಗಳ ಆಧಾರದಲ್ಲಿ ಅದೇ ಸ್ಥಳದಲ್ಲಿ ಅತ್ಯಾಚಾರ ನಡೆದಿದೆಯೋ ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ. ಪೊಲೀಸರ ಪ್ರಕಾರ ಅತ್ಯಾಚಾರ ನಡೆದ ಸ್ಥಳ ಕಾಡು ಪ್ರದೇಶ ಎಂದರೆ ಸರಿ. ಆ ಶವದ ಬೆನ್ನಿನಲ್ಲಿ ಇದ್ದ ಗಾಯದ ಅಳತೆ ಮತ್ತು ಯಾವ ಜಾಗದಲ್ಲಿ ಆಗಿದೆ ಎಂದು ನಮೂದಿಸಿಲ್ಲ. ಶವ ತನಿಖೆಯನ್ನು ಸೂಕ್ತವಾಗಿ ಮಾಡಿಲ್ಲ ಮತ್ತು ನಿರ್ಲಕ್ಷ್ಯ ವಹಿಸಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದರು.

ಆರೋಪಿ ಸಂತೋಷ್‌ರಾವ್‌ನನ್ನು ತನ್ನ ಎದುರು ಹಾಜರುಪಡಿಸಿದ ಸಂದರ್ಭದಲ್ಲಿ ಆತನ ವೀರ್ಯವನ್ನು ಸಂಗ್ರಹಿಸಿಲ್ಲ. ಆತ ಪಿಮೋಸಿಸ್ ಖಾಯಿಲೆಯಿಂದ ಬಳಲುತ್ತಿದ್ದ. ಆ ಖಾಯಿಲೆ ಇದ್ದಲ್ಲಿ ಲೈಂಗಿಕ ಕ್ರಿಯೆ ನಡೆಸಲು ಸುಲಭವಾಗಿ ಆಗುವುದಿಲ್ಲ ಮತ್ತು ತುಂಬಾ ನೋವು ಉಂಟಾಗುತ್ತದೆ. ಸೌಜನ್ಯಳನ್ನು ಬೇರೆಲ್ಲೋ ಮಾನಭಂಗ ಮಾಡಿ ಕೊಲೆಗೈದು ಶವವನ್ನು ಆ ಪ್ರದೇಶದಲ್ಲಿ ತಂದು ಹಾಕಲಾಗಿದೆಯೇ ಎಂಬ ಪ್ರಶ್ನೆಗೆ ನಕಾರಾತ್ಮಕ ಉತ್ತರ ನೀಡಿದರು.

ಡಾ. ಆದಂ ಅವರ ಸಾಕ್ಷ್ಯದ ಪ್ರಕಾರ ಸೌಜನ್ಯಳನ್ನು ಅದೇ ಜಾಗದಲ್ಲಿ ಅತ್ಯಾಚಾರಕ್ಕೆಯತ್ನಿಸಿ ಹತ್ಯೆ ಮಾಡಲಾಗಿದೆ ಮತ್ತು ನ್ಯಾಯಾಲಯದಲ್ಲಿ ಹಾಜರಿದ್ದಂತಹ ಆರೋಪಿಯೇ ಆ ಕೃತ್ಯ ನಡೆಸಿರಬಹುದು ಎಂಬುದಕ್ಕೆ ಪುಷ್ಟಿ ಸಿಕ್ಕಿತ್ತು. ಆದರೆ ಇತರ ಸಾಕ್ಷ್ಯಗಳು ಪೂರಕವಾಗಿ ಇಲ್ಲದೇ ಇದ್ದುದರಿಂದ ಆತ ಸಾಕ್ಷ್ಯಗಳ ಕೊರತೆಯಿಂದ ಬಿಡುಗಡೆಗೊಂಡ ಎನ್ನುವುದು ಸ್ಪಷ್ಟವಾಗುತ್ತದೆ.

ಮುಂದುವರಿಯುವುದು.....

# ಅಮೇರಿಕಾ-ಇರಾನ್ ದ್ವೇಷ ಪ್ರತೀಕಾರ... ಮಿತ್ರ ರಾಷ್ಟ್ರ ಭಾರತ ಹರೋಹರ!!




**ಅಮೆರಿಕ ಹಾಗೂ ಇರಾನ್ ನಡುವಿನ ಯುದ್ಧ 17ನೇ ದಿನವಾದ ಸೋಮವಾರ ಮಹತ್ವದ ತಿರುವು ಪಡೆದುಕೊಂಡಿದೆ. ಇಸ್ರೇಲ್ ಒಂದು ನೆಪ ಅಷ್ಟೇ. ಇರಾನ್ ಬಗ್ಗು ಬಡಿದು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಬೇಕೆಂಬುದೇ ಅಮೇರಿಕ ಹುನ್ನಾರ. ಈ ನಡುವೆ ಇರಾನ್‌ನ ತೈಲ ರಫ್ತಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದ್ದ ಅರ್ಥಾತ್ ಶೇ.90ರಷ್ಟು ಇರಾನ್‌ನ ತೈಲ ರಫ್ತನ್ನು ನಿರ್ವಹಿಸುವ ಖಾರ್ಗ್ ದ್ವೀಪದ ಮೇಲೆ ಅಮೆರಿಕ ಭೀಕರ ವಾಯುದಾಳಿ ನಡೆಸಿ, ಅಲ್ಲಿನ ಎಲ್ಲಾ ಸೈನಿಕ ನೆಲೆಗಳನ್ನು ನಾಶಗೊಳಿಸಿದೆ. ತನ್ನ ತೈಲ ವ್ಯಾಪಾರಕ್ಕೆ ಹೆದ್ದಾರಿ ಆಗಿರೋ ಹೋರ್ಮುಜ್ ಜಲಸಂದಿಯನ್ನು ಮುಚ್ಚಿದ್ರೆ, ಅಲ್ಲಿರೋ ಎಲ್ಲಾ ತೈಲಾಗಾರಕ್ಕೂ ಬಾಂಬ್ ಹಾಕುವುದಾಗಿ ಇರಾನ್‌ಗೆ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಹಾಗೇನಾದ್ರೂ ಬಾಂಬ್ ಹಾಕಿದ್ರೆ ಇಡೀ ಮಧ್ಯಪ್ರಾಚ್ಯ ಧಗ ಧಗ ಉರಿಯೋದು ಗ್ಯಾರೆಂಟಿ... ಹುಷಾರ್ ಎಂದು ಅಮೇರಿಕಕ್ಕೆ ಇರಾನ್ ಕೂಡ ತಿರುಗೇಟು ನೀಡಿದೆ. ಈ ಯುದ್ಧ ತೀವ್ರಗೊಂಡರೆ ಜಗತ್ತಿನಲ್ಲಿ ತೈಲ ಬಿಕ್ಕಟ್ಟು ತೀವ್ರಗೊಳ್ಳುತ್ತದೆ. ಮುಖ್ಯವಾಗಿ, ಭಾರತ ಭಾರಿ ಬಿಕ್ಕಟ್ಟು ಎದುರಿಸಬೇಕಾಗುತ್ತದೆ...**

ಕೊಲ್ಲಿ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧ 17 ನೇ ಪೂರೈಸಿದ ಹೊತ್ತಿನಲ್ಲೇ ಹೊಸ ತಿರುವು ಪಡೆದಿದೆ. ಒಂದೆಡೆ ಇರಾನ್‌ನ ಆರ್ಥಿಕತೆಯ ಕೇಂದ್ರ ಬಿಂದುವಾದ ಖಾರ್ಗ್ ದ್ವೀಪದ ಮೇಲೆ ದಾಳಿ ಮಾಡಿರುವ ಅಮೆರಿಕ, ಮತ್ತೊಂದೆಡೆ ಹೋರ್ಮುಜ್ ಜಲಸಂಧಿ ಗೆ ಹೆಚ್ಚುವರಿ 5000 ಯೋಧರ ಕಳುಹಿಸಿದೆ. ಈ ಮೂಲಕ ಇರಾನ್ ಅನ್ನು ಆರ್ಥಿಕವಾಗಿ, ಭೌಗೋಳಿಕವಾಗಿ ಕಟ್ಟಿಹಾಕುವ




ಯತ್ನ ಮಾಡಿದೆ. ಮತ್ತೊಂದೆಡೆ ಖಾರ್ಗ್‌ನ ತೈಲ ಘಟಕಗಳ ಮೇಲೇನಾದರೂ ದಾಳಿ ನಡೆಸಿದರೆ ಇಡೀ ಮಧ್ಯಪ್ರಾಚ್ಯದ ತೈಲ ಮೂಲಸೌಕರ್ಯ ಧ್ವಂಸ ಮಾಡುವುದಾಗಿ ಇರಾನ್ ಬೆದರಿಕೆ ಒಡ್ಡಿದೆ. ಪರಸ್ಪರರನ್ನು ತೈಲದ ಮೂಲಕ ಕಟ್ಟಿಹಾಕುವ ಈ ವ್ಯೂಹ ಜಗತ್ತಿನ ಮೇಲೆ ಗಂಭೀರ ಪರಿಣಾಮಗಳ ಭೀತಿ ಹುಟ್ಟುಹಾಕಿದೆ. ಇದು ಜಾಗತಿಕ ತೈಲ ಪೂರೈಕೆ ವ್ಯವಸ್ಥೆಯನ್ನೇ ಬುಡಮೇಲು ಮಾಡಿ, ಕಚ್ಚಾ ತೈಲದ ಬೆಲೆ 200 ಡಾಲರ್‌ಗೆ ಏರುವ ಆತಂಕ ಹುಟ್ಟುಹಾಕಿದೆ.



ಈ ನಡುವೆ ಇರಾನ್‌ನ ತೈಲ ರಫ್ತಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದ್ದ ಅರ್ಥಾತ್ ಶೇ.90ರಷ್ಟು ಇರಾನ್‌ನ ತೈಲ ರಫ್ತನ್ನು ನಿರ್ವಹಿಸುವ ಖಾರ್ಗ್ ದ್ವೀಪದ ಮೇಲೆ ಅಮೆರಿಕ ಭೀಕರ ವಾಯುದಾಳಿ ನಡೆಸಿ, ಎಲ್ಲಾ ಸೈನಿಕ ನೆಲೆಗಳನ್ನು ನಾಶಗೊಳಿಸಿದೆ. ಆದರೆ, ಖಾರ್ಗ್ ದ್ವೀಪದಲ್ಲಿನ ತೈಲಾಗಾರಗಳ ಮೇಲೆ ಅಮೆರಿಕ ದಾಳಿ ಮಾಡಿಲ್ಲ. ಇದರ ಬದಲಾಗಿ, 'ಹೋರ್ಮುಜ್ ಜಲಸಂಧಿಯ ಮೂಲಕ ಸಾಗುವ ಹಡಗುಗಳ ಸಂಚಾರಕ್ಕೆ ಅಡ್ಡಿಯೇನಾದರೂ ಮಾಡಿದರೆ, ದ್ವೀಪದ ತೈಲ ಮೂಲಸೌಕರ್ಯಗಳ ಮೇಲೂ ದಾಳಿ ಮಾಡುತ್ತೇವೆ' ಎಂದು ಎಚ್ಚರಿಕೆ ನೀಡಿದೆ. ಈ ಮೂಲಕ ತೈಲ ದ್ವೀಪದ ನಿಯಂತ್ರಣಕ್ಕೆ ಅಮೆರಿಕ ಯತ್ನಿಸುತ್ತಿದೆಯೇ ಎಂಬ ಶಂಕೆ ಮೂಡಿದೆ.



ಆದರೆ ಇದಕ್ಕೆ ಇರಾನ್ ಎದಿರೇಟು ನೀಡುವ ಎಚ್ಚರಿಕೆ ನೀಡಿದೆ. ತಮ್ಮ ದ್ವೀಪದ ಮೇಲೆ ಅಮೆರಿಕದ ದಾಳಿಯನ್ನು ಖಂಡಿಸಿರುವ ಇರಾನ್‌ನ ಸಂಯುಕ್ತ ಸೈನ್ಯಾಧಿ ಕಾರಿ ಇಬ್ರಾಹಿಂ ರೆಝೂಲ್ಫಘಾರಿ, 'ಇರಾನ್‌ನ ತೈಲ ಮತ್ತು ಆರ್ಥಿಕ ಮೂಲಸೌಕರ್ಯಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಅಮೆರಿಕ ಷೇರುಗಳನ್ನು ಹೊಂದಿರುವ ಅಥವಾ ಅಮೆರಿಕದೊಂದಿಗೆ ಸಹಕರಿಸುವ ತೈಲ ಕಂಪನಿಗಳ ಎಲ್ಲಾ ತೈಲ, ಆರ್ಥಿಕ ಮತ್ತು ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ 'ಟ್ರುತ್' ಸೋಷಿಯಲ್‌ನಲ್ಲಿ ಮಾಹಿತಿ ನೀಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ನನ್ನ ನಿರ್ದೇಶನದಂತೆ, ಅಮೆರಿಕದ ಸೆಂಟ್ರಲ್ ಕಮಾಂಡ್, ಮಧ್ಯಪ್ರಾಚ್ಯದ ಇತಿಹಾಸದಲ್ಲೇ ಅತ್ಯಂತ ಶಕ್ತಿಶಾಲಿ ಬಾಂಬ್ ದಾಳಿಯನ್ನು ನಡೆಸಿದೆ. ಇರಾನ್‌ನ ಮುಕುಟ ಮಣಿಯಂತಿರುವ ಖಾರ್ಗ್ ದ್ವೀಪದ ಪ್ರತಿಯೊಂದು ಸೈನಿಕ ನೆಲೆಯನ್ನೂ ಸಂಪೂರ್ಣವಾಗಿ ನಾಶಗೊಳಿಸಲಾಗಿದೆ' ಎಂದು ತಿಳಿಸಿದ್ದಾರೆ.

ಇದೇ ವೇಳೆ, 'ಸಭ್ಯತೆಯ ಕಾರಣದಿಂದ, ದ್ವೀಪದ ತೈಲ ಮೂಲಸೌಕರ್ಯಗಳನ್ನು ನಾಶ ಮಾಡದಂತೆ ನಿರ್ಧರಿಸಿದ್ದೇನೆ. ಆದರೆ ಇರಾನ್ ಅಥವಾ ಬೇರೆ ಯಾರಾದರೂ ಹೋರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಮುಕ್ತ ಮತ್ತು ಸುರಕ್ಷಿತ ಸಂಚಾರವನ್ನು ಭಂಗಗೊಳಿಸಿದರೆ, ಈ ನಿರ್ಧಾರವನ್ನು ತಕ್ಷಣ ಪುನರ್ವಿಚಾರಣೆ ಮಾಡುತ್ತೇನೆ' ಎಂದು ಎಚ್ಚರಿಸಿದ್ದಾರೆ. ಇರಾನ್ ವರ್ಸಸ್ ಅಮೇರಿಕ ಯುದ್ಧೋನ್ಮಾದವನ್ನು,ದಾಳಿ ಪ್ರತಿದಾಳಿಯನ್ನು



☞ 14

## ಇರಾನ್ ಇಸ್ರೇಲ್ ಯುದ್ಧ.... ಭಾರತ ಕಲಿಯಬೇಕಿರುವ ಪಾಠವೇನು?

ಇರಾನ್ ಜೊತೆಗಿನ ಯುದ್ಧ ತೀವ್ರಗೊಳ್ಳುತ್ತಿರುವ ಸಮಯದಲ್ಲೇ, ಇರಾಕ್ ವಾಯು ಪ್ರದೇಶದಲ್ಲಿ ಅಮೆರಿಕ ವಾಯುಪಡೆಯ 'KC-135' ಟ್ಯಾಂಕರ್ ವಿಮಾನ ಪತನಗೊಂಡಿದೆ. ಕೊಲ್ಲಿ ರಾಷ್ಟ್ರಗಳ ವಾಯುಪ್ರದೇಶದಲ್ಲಿ ಯುದ್ಧದ ಬೆಂಬಲಕ್ಕಾಗಿ ಯುದ್ಧ ವಿಮಾನಗಳಿಗೆ 'ಆಕಾಶದಲ್ಲೇ ಇಂಧನ ತುಂಬಿಸುವ' ಮಿಷನ್‌ಗಳ ಸಂದರ್ಭದಲ್ಲಿ ಸಂಭವಿಸಿದ ವಿಮಾನಗಳ ಡಿಕ್ಕಿಯಿಂದಾಗಿ ಟ್ಯಾಂಕರ್ ವಿಮಾನ ಪತನಗೊಂಡಿದೆ. ಇದನ್ನು ಅಮೆರಿಕದ ಪಾಲಿಗೆ ಕರಾಳ ಮೈಲಿಗಲ್ಲು ಎಂದೇ ಹೇಳಲಾಗುತ್ತಿದೆ.

ಯಾಕೆಂದರೆ, ಇದು ಶತ್ರುಗಳ ದಾಳಿಯಿಂದ ಅಥವಾ ಅಚಾತುರ್ಯದ ಗುಂಡಿನ ದಾಳಿಯಿಂದ ಸಂಭವಿಸಿದ್ದಲ್ಲ. ಬದಲಾಗಿ, ತಮ್ಮದೇ ವಿಮಾನಗಳಿಗೆ ಇಂಧನ ತುಂಬಿಸುವಾಗ ನಡೆದಿರುವ ಘಟನೆ ಎಂದು ಪೆಂಟಗನ್ ಸ್ಪಷ್ಟಪಡಿಸಿದೆ. ಆದರೂ, ಈ ಘಟನೆಯು ಆಕಾಶದಲ್ಲಿ ಇಂಧನ ತುಂಬಿಸುವ ಪ್ರಕ್ರಿಯೆಯಲ್ಲಿರುವ ಅಪಾಯಗಳನ್ನು ಎತ್ತಿ ತೋರಿಸಿದೆ. ಆದರೆ, ಈ ಅಪಘಾತದಿಂದ ಭಾರತ ಕಲಿಯಬೇಕಾದ ಒಂದು ಪಾಠವಿದೆ. ಈ ತಿಂಗಳ ಆರಂಭದಲ್ಲಿ ಕುವೈತ್ ಮೇಲೆ ನಡೆದ 'ಫ್ರೆಂಡ್ಲಿ ಫೈರ್' ಘಟನೆಯಲ್ಲಿ ಅಮೆರಿಕದ ಮೂರು 'F15 ಸ್ಟ್ರೈಕ್ ಈಗಲ್' ಜೆಟ್‌ಗಳು ಪತನಗೊಂಡುವ. ಅದನ್ನು ಅಮೆರಿಕ ತಕ್ಷಣವೇ ಒಪ್ಪಿಕೊಂಡಿತ್ತು. ಈಗ, 'ಕೆಸಿ135' ವಿಮಾನದ ನಷ್ಟವನ್ನೂ ಅಮೆರಿಕ ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಿದೆ.

ಅಮೆರಿಕದ ಮಿಲಿಟರಿ ಪರಂಪರಾಗತವಾಗಿ ಪಾರದರ್ಶಕವಾಗೇನೂ ಇಲ್ಲ; 'ಮಾಹಿತಿ ಯುದ್ಧ' ಮತ್ತು 'ಮೈಂಡ್ ಗೇಮ್'ಗಳನ್ನು ಕಂಡುಹಿಡಿದಿದ್ದೇ ಈ ಅಮೆರಿಕ. ನಷ್ಟದ ಅಂಕಿಅಂಶಗಳ ಬಗ್ಗೆ ಅತಿಯಾಗಿ ತಲೆಕೆಡಿಸಿಕೊಳ್ಳುವ ಅಧ್ಯಕ್ಷರು ಅಧಿಕಾರದಲ್ಲಿದ್ದರೂ ಸಹ, ಯುದ್ಧಭೂಮಿಯ ನಷ್ಟಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದು ಅಮೆರಿಕದ ಧೋರಣೆ. ಈ ಧೋರಣೆಯು ತನ್ನ ಆತ್ಮವಿಶ್ವಾಸವನ್ನು ತೋರುತ್ತದೆ ಎಂಬುದು ಅಮೆರಿಕ ನಿಲುವು. ದೊಡ್ಡ ಮಟ್ಟದ ಕಾರ್ಯಾಚರಣೆಗಳಲ್ಲಿ ಸಾವುನೋವು ಮತ್ತು ಯಂತ್ರಗಳ ನಷ್ಟ ಸಹಜವೆಂದು ಅಮೆರಿಕ ಹೇಳುತ್ತದೆ. ತಾವು ಅದಕ್ಕೆ ಸಿದ್ಧರಿರುವುದಾಗಿಯೂ ಮುಜುಗರವಿಲ್ಲದೆ ಹೇಳಿಕೊಳ್ಳುತ್ತದೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಭಾರತದ ಧೋರಣೆ ಇದೆ. 'ಆಪರೇಷನ್ ಸಿಂಧೂರ್' ನಂತರದ ಭಾರತದ ಮೌನವು ಅದನ್ನು ಎತ್ತಿತೋರಿಸಿದೆ. ತಿಂಗಳುಗಳು ಕಳೆದರೂ, ಉಭಯ ಕಡೆಯ ವಿಮಾನಗಳ ನಷ್ಟದ ಬಗ್ಗೆ ಕೇವಲ ವದಂತಿಗಳು ಮಾತ್ರ ಕೇಳಿಬರುತ್ತಿವೆ. ಭಾಷಣಗಳಲ್ಲಿನ ಚುಟುಕು ಮಾತುಗಳನ್ನು ಹೊರತುಪಡಿಸಿದರೆ, ವಿಮಾನ ನಷ್ಟದ ಯಾವುದೇ ಅಧಿಕೃತ ಹೇಳಿಕೆಗಳಿಲ್ಲ. ಈ ವಿಷಯದಲ್ಲಿ ಸ್ಪಷ್ಟತೆ ಇಲ್ಲದಿರುವುದು ಆತಂಕಕಾರಿ.

80 ವರ್ಷಗಳಿಂದ ಯುದ್ಧಗಳನ್ನು ಮಾಡಿರುವ ಭಾರತದಂತಹ ರಾಷ್ಟ್ರಕ್ಕೆ ಪಾರದರ್ಶಕತೆ ಎಂಬುದು ಕೇವಲ ಪ್ರಾಮಾಣಿಕತೆಯಲ್ಲ; ಅದು ಶತ್ರು ರಾಷ್ಟ್ರಗಳಿಗೆ ಸುಳ್ಳು ಪ್ರಚಾರ ಮಾಡಲು ಅವಕಾಶ ನೀಡದಂತೆ ತಡೆಯುವ ಅಸ್ತ್ರವೂ ಹೌದು. ಪಾಕಿಸ್ತಾನ ಅಥವಾ ಚೀನಾದಂತಹ ದೇಶಗಳು ಭಾರತದ ನಷ್ಟದ ಬಗ್ಗೆ ಸುಳ್ಳು ಅಂಕಿಅಂಶಗಳನ್ನು ನೀಡಿ ಜನರ ದಿಕ್ಕು ತಪ್ಪಿಸುವುದನ್ನು ತಡೆಯಲು ಈ ಪಾರದರ್ಶಕತೆ ಸಹಕಾರಿ. ಆದರೆ, ಭಾರತವು ಪಾರದರ್ಶಕತೆಯನ್ನು ಪ್ರದರ್ಶಿಸಲು ಹಿಂಜರಿಯುತ್ತಿದೆ.

ಅಮೆರಿಕ ತನ್ನ ವಿಮಾನಗಳ ನಷ್ಟವನ್ನು ಮುಕ್ತವಾಗಿ ಒಪ್ಪಿಕೊಳ್ಳುವ ಮೂಲಕ ಇರಾನ್ ಸುಳ್ಳು ಅಂಕಿಅಂಶಗಳನ್ನು ಸೃಷ್ಟಿಸದಂತೆ ಮಾಡಿದೆ. ಈಗ ಇರಾನ್ ಕೇವಲ 'ವಿಮಾನಗಳನ್ನು ಹೇಗೆ ಹೊಡೆದುರುಳಿಸಲಾಯಿತು' ಎಂಬ ಬಗ್ಗೆ ಮಾತ್ರ ಚರ್ಚಿಸಬಹುದಷ್ಟೇ. ಆದರೆ, ನಷ್ಟದ ಸಂಖ್ಯೆಯ ಬಗ್ಗೆ ಮತ್ತೊಂದು ರೀತಿಯ ಅಂಕಿಅಂಶಗಳನ್ನು ನೀಡಲಾಗುವುದಿಲ್ಲ.

ಪ್ರಸ್ತುತ ನಡೆಯುತ್ತಿರುವ ಯುದ್ಧದಲ್ಲಿ ಎರಡು ವಾರ ಕಳೆದರೂ ಅಮೆರಿಕ ತನ್ನ ಗುರಿಗಳನ್ನು ತಲುಪಲು ಸಾಧ್ಯವಾಗಿಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ, ಭಾರತವು 'ಆಪರೇಷನ್ ಸಿಂಧೂರ್'ನಲ್ಲಿ ಕೇವಲ 88 ಗಂಟೆಗಳಲ್ಲಿ ತನ್ನ ನಿರ್ದಿಷ್ಟ ಗುರಿಗಳನ್ನು ಸಾಧಿಸಿತ್ತು. ಆ ಸಮಯದಲ್ಲಿ, ಒಂದು ವೇಳೆ ಭಾರತದ ವಿಮಾನ ಅಥವಾ ಉಪಕರಣಗಳ ನಷ್ಟವಾಗಿದ್ದರೆ, ಅದನ್ನು ಹಿಂಜರಿಕೆ ಬಿಟ್ಟು ಒಪ್ಪಿಕೊಳ್ಳಬಹುದಿತ್ತು. ಭಾರತದ ಯುದ್ಧತಂತ್ರದ ಪಕ್ವತೆಯನ್ನು ಜಗತ್ತಿಗೆ ತೋರಿಸಲು ಅದು ಸರಿಯಾದ ಸಮಯವೂ ಆಗಿತ್ತು. ಆದರೆ, ಮೋದಿ ಸರ್ಕಾರ ಹಾಗೆ ಮಾಡಲಿಲ್ಲ.

ಇರಾನ್‌ಅನ್ನು ಯಕಶ್ಚಿತವೆಂಬಂತೆ ಭಾವಿಸಿ, ಕಳಪೆ ಯೋಜನೆಯೊಂದಿಗೆ ದಾಳಿ ಮಾಡಿದ ಅಮೆರಿಕ ಅನೇಕ ತಪ್ಪುಗಳನ್ನು ಮಾಡಿರಬಹುದು. ಆದರೆ, ಮಿಲಿಟರಿ ಸಂದೇಶ ರವಾನಿಸುವ ಮತ್ತು ಪಾರದರ್ಶಕತೆ ಕಾಪಾಡುವ ವಿಷಯದಲ್ಲಿ ಭಾರತವು ಅಮೆರಿಕದಿಂದ ಪಾಠ ಕಲಿಯಬೇಕಾಗುತ್ತದೆ. ☯

13 ☞
ಗಮನಿಸುತ್ತಿರೋ ನೆರೆ ಹೊರೆ ರಾಷ್ಟ್ರಗಳು ಮುಂದೇನೋ... ಎಂಬ ಆತಂಕದಲ್ಲಿದೆ.

**ಅಮೆರಿಕಗೆ ಕಿಮ್ ಕೊಟ್ಟ ನೋಡಿ ಕ್ಷಿಪಣಿ ಶಾಕ್!**

ಜಾಗತಿಕವಾಗಿ ಪಶ್ಚಿಮ ಏಷ್ಯಾದಲ್ಲಿ ಇರಾನ್ ಮತ್ತು ಅಮೇರಿಕ ನಡುವಿನ ಯುದ್ಧದ ಕಾರ್ಮೋಡ ಕವಿದಿರುವ ಬೆನ್ನಲ್ಲೇ, ಅತ್ತ ಪೂರ್ವ ಏಷ್ಯಾದಲ್ಲಿ ಉತ್ತರ ಕೊರಿಯಾ ತನ್ನ ಮಿಲಿಟರಿ ಶಕ್ತಿಯ ಪ್ರದರ್ಶನ ಮಾಡುವ ಮೂಲಕ ವಿಶ್ವದ ಆತಂಕವನ್ನು ಹೆಚ್ಚಿಸಿದೆ! ಶನಿವಾರ ಬೆಳಿಗ್ಗೆ ಉತ್ತರ ಕೊರಿಯಾವು ಜಪಾನ್ ಸಮುದ್ರದ ದಿಕ್ಕಿನಲ್ಲಿ ಶಂಕಿತ ಬ್ಯಾಲಿಸ್ಟಿಕ್ ಕ್ಷಿಪಣಿಯೊಂದನ್ನು ಉಡಾವಣೆ ಮಾಡಿದ್ದು, ಈ ಪ್ರದೇಶದಲ್ಲಿ ತೀವ್ರ ಉದ್ವಿಗ್ನತೆ ಸೃಷ್ಟಿಯಾಗಿದೆ.

ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರ (JCS) ವರದಿಯ ಪ್ರಕಾರ, ಉತ್ತರ ಕೊರಿಯಾದ ಭೂಭಾಗದಿಂದ



ಹಾರಿದ ಈ ಕ್ಷಿಪಣಿಯು ಪೂರ್ವ ಸಮುದ್ರದತ್ತ ಧಾವಿಸಿದೆ. ಆರಂಭದಲ್ಲಿ ಇದನ್ನು ಅಪರಿಚಿತ ಪ್ರಕ್ಷೇಪಕ ಎಂದು ಗುರುತಿಸಲಾಗಿದ್ದರೂ, ಅದರ ವೇಗ ಮತ್ತು ಪಥವನ್ನು ಗಮನಿಸಿದಾಗ ಅದು ಬ್ಯಾಲಿಸ್ಟಿಕ್ ಕ್ಷಿಪಣಿಯೇ ಎಂಬುದು ದೃಢಪಟ್ಟಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾದ ರಕ್ಷಣಾ ಪಡೆಗಳು ಈಗ ಈ ಕ್ಷಿಪಣಿಯ ವ್ಯಾಪ್ತಿ ಮತ್ತು ಸಾಮರ್ಥ್ಯದ ಬಗ್ಗೆ ಹೆಚ್ಚಿನ ದತ್ತಾಂಶಗಳನ್ನು ವಿಶ್ಲೇಷಿಸುತ್ತಿವೆ.



**ಟ್ರಂಪ್ ದುರಾಡಳಿತಕ್ಕೆ ನಾರ್ತ್ ಕೊರಿಯಾ ಸೆಡ್ಡು...**

ಈ ಕ್ಷಿಪಣಿ ಉಡಾವಣೆಯು ಅತ್ಯಂತ ನಿರ್ಣಾಯಕ ಸಮಯದಲ್ಲಿ ನಡೆದಿದೆ. ಅಮೆರಿಕಾದಲ್ಲಿ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು ಇರಾನ್ ವಿರುದ್ಧ ತೀವ್ರ ಸಂಘರ್ಷದಲ್ಲಿ ತೊಡಗಿರುವಾಗಲೇ ಕಿಮ್ ಜಾಂಗ್ ಉನ್ ಈ ಸಾಹಸಕ್ಕೆ ಕೈಹಾಕಿದ್ದಾರೆ. ಅಮೆರಿಕದ ಗಮನವು ಸಂಪೂರ್ಣವಾಗಿ ಮಧ್ಯಪ್ರಾಚ್ಯದ ಮೇಲೆ ಕೇಂದ್ರೀಕೃತವಾಗಿರುವಾಗ, ಏಷ್ಯಾ ಪೆಸಿಫಿಕ್ ವಲಯದಲ್ಲಿ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸಲು ಉತ್ತರ ಕೊರಿಯಾ ಈ ಮಾರ್ಗವನ್ನು ಆರಿಸಿಕೊಂಡಿದೆ ಎಂದು ರಾಜತಾಂತ್ರಿಕ ತಜ್ಞರು ವಿಶ್ಲೇಷಿಸುತ್ತಿದ್ದಾರೆ.



ಪ್ರಸ್ತುತ ಅಮೇರಿಕ ಮತ್ತು ದಕ್ಷಿಣ ಕೊರಿಯಾ ಜಂಟಿಯಾಗಿ ಫ್ರೀಡಂ ಶೀಲ್ಡ್ ಎಂಬ ಬೃಹತ್ ವಾರ್ಷಿಕ ಸಮರಾಭ್ಯಾಸವನ್ನು ನಡೆಸುತ್ತಿವೆ. ಮಾರ್ಚ್ 19 ರವರೆಗೆ ನಡೆಯಲಿರುವ ಈ 11 ದಿನಗಳ ತರಬೇತಿಯಲ್ಲಿ ಸಾವಿರಾರು ಸೈನಿಕರು ಭಾಗವಹಿಸುತ್ತಿದ್ದಾರೆ. ಇದರೊಂದಿಗೆ ವಾರಿಯರ್ ಶೀಲ್ಡ್ ಎಂಬ ಫೀಲ್ಡ್ ಟ್ರೈನಿಂಗ್ ಕೂಡ ನಡೆಯುತ್ತಿದೆ.

ಉತ್ತರ ಕೊರಿಯಾ ಈ ಸಮರಾಭ್ಯಾಸಗಳನ್ನು ಮೊದಲಿನಿಂದಲೂ ಆಕ್ರಮಣದ ಪೂರ್ವಾಭ್ಯಾಸ ಎಂದು ಕರೆದಿದೆ. ಈ ವಾರದ ಆರಂಭದಲ್ಲೇ ಕಿಮ್ ಜಾಂಗ್ ಉನ್ ಅವರ ಪ್ರಭಾವಿ ಸಹೋದರಿ ಕಿಮ್ ಯೋ ಜಾಂಗ್ ಅವರು ಅಮೇರಿಕ ಮತ್ತು ಸೋಲ್ ಅನ್ನು ತೀವ್ರವಾಗಿ ಟೀಕಿಸಿದ್ದರು. ಜಾಗತಿಕ ಭದ್ರತೆಯು ಅಪಾಯದಲ್ಲಿರುವ ಈ ಸಂದರ್ಭದಲ್ಲಿ ನಡೆಸುತ್ತಿರುವ ಸಮರಾಭ್ಯಾಸವು ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. ಅವರ ಎಚ್ಚರಿಕೆಯ ಬೆನ್ನಲ್ಲೇ ಈ ಕ್ಷಿಪಣಿ ಉಡಾವಣೆ ನಡೆದಿರುವುದು ಗಮನಾರ್ಹವಾಗಿದೆ.

**ರಷ್ಯಾ,ಉತ್ತರ ಕೊರಿಯಾ ನಂಟಿನ ಹೊಸ ಆಯಾಮ...**

ಇತ್ತೀಚಿನ ವರ್ಷಗಳಲ್ಲಿ ಉತ್ತರ ಕೊರಿಯಾವು ಅಮೆರಿಕದೊಂದಿಗಿನ ಮಾತುಕತೆಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. 2019 ರಲ್ಲಿ ಟ್ರಂಪ್ ಮತ್ತು ಕಿಮ್ ನಡುವಿನ ಎರಡನೇ ಶೃಂಗಸಭೆ ವಿಫಲವಾದ ನಂತರ, ಪ್ಯೊಂಗ್ಯಾಂಗ್ ತನ್ನ ಪರಮಾಣು ಕಾರ್ಯಕ್ರಮವನ್ನು ಮತ್ತಷ್ಟು ವೇಗಗೊಳಿಸಿದೆ. ಈಗ ಕಿಮ್ ಜಾಂಗ್ ಉನ್ ಅವರು ರಷ್ಯಾವನ್ನು ತನ್ನ ಪ್ರಮುಖ ಮಿತ್ರ ರಾಷ್ಟ್ರವಾಗಿ ಮಾಡಿಕೊಂಡಿದ್ದಾರೆ. ಯುಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾಕ್ಕೆ ಸಾವಿರಾರು ಸೈನಿಕರು ಮತ್ತು ಅಪಾರ ಪ್ರಮಾಣದ ಯುದ್ಧ ಸಾಮಗ್ರಿಗಳನ್ನು ಪೂರೈಸುತ್ತಿರುವ ಉತ್ತರ ಕೊರಿಯಾ, ಬದಲಿಗೆ ರಷ್ಯಾದಿಂದ ಸುಧಾರಿತ ಮಿಲಿಟರಿ ತಂತ್ರಜ್ಞಾನ ಮತ್ತು ಆರ್ಥಿಕ ನೆರವನ್ನು ಪಡೆಯುತ್ತಿದೆ ಎಂದು ವರದಿಯಾಗಿದೆ.



**ಜಾಗತಿಕ ಆತಂಕ**

ಒಂದೆಡೆ ಯುಕ್ರೇನ್‌ರಷ್ಯಾ ಯುದ್ಧ, ಇನ್ನೊಂದೆಡೆ ಅಮೆರಿಕಇರಾನ್ ಸಂಘರ್ಷ, ಈಗ ಉತ್ತರ ಕೊರಿಯಾದ ಈ ಉದ್ಧಟತನದ ನಡೆ ಜಗತ್ತನ್ನು ಮೂರನೇ ಮಹಾಯುದ್ಧದ ಭೀತಿಯತ್ತ ತಳ್ಳುತ್ತಿದೆ. ವಿಶ್ವಸಂಸ್ಥೆಯ ನಿರ್ಬಂಧಗಳ ಹೊರತಾಗಿಯೂ ಉತ್ತರ ಕೊರಿಯಾ ಸತತವಾಗಿ ಕ್ಷಿಪಣಿ ಪ್ರಯೋಗಗಳನ್ನು ಮಾಡುತ್ತಿರುವುದು ಅಂತಾರಾಷ್ಟ್ರೀಯ ಸಮುದಾಯಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ದಕ್ಷಿಣ ಕೊರಿಯಾ ಮತ್ತು ಅಮೇರಿಕದ ರಕ್ಷಣಾ ಪಡೆಗಳು ಯಾವುದೇ ರೀತಿಯ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗಿದ್ದು, ಉತ್ತರ ಕೊರಿಯಾದ ಮುಂದಿನ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇರಿಸಿವೆ.....



**FORM IV**

Statement about ownership and other particulars about News Paper

**'POLICE NEWS'**

| | | | |
|---|---|---|---|
| 1. | Place of publication | : | Bangalore |
| 2. | Periodicity of its publication | : | WEEKLY |
| 3. | Printer | : | SHRI OMKAR PRINTERS<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 4. | Publisher | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 5. | Editor | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 6. | Names and addresses of individuals who own the news paper and partners or share | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |

I, M. Rahul hereby declare that the particulars given above are true to the best of my knowledge and belief.

Sd/-
**M. Rahul**
Publisher

Date 15-3-2026

# ಪ್ರಿಯಕರನೊಂದಿಗೆ ಸೇರಿ ಮಾಜಿ ಪ್ರಿಯಕರನ ಕೊಲೆ!

7 ☞
ಗಲಾಟೆಗೆ ತಿರುಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಲಾಟೆಯ ವೇಳೆ ಕೋಪಗೊಂಡ ವಿನಯ್ ತನ್ನ ಬಳಿ ಇದ್ದ ಚಾಕುವಿನಿಂದ ಮೋಹನ್ ಕೃಷ್ಣರಾವ್ ಅವರಿಗೆ ಇರಿದಿದ್ದಾನೆ. ಗಾಯಗೊಂಡ ಮೋಹನ್ ಕೃಷ್ಣ ಜೋರಾಗಿ ಕಿರುಚಲು ಆರಂಭಿಸಿದಾಗ ವಿಷಯ ಹೊರಗೆ ಹೋಗಬಹುದು ಎಂಬ ಭಯದಿಂದ ಮೂವರೂ ಸೇರಿ ಅವರ ಮುಖ ಮತ್ತು ಮೂಗಿಗೆ ಟೇಪ್ ಸುತ್ತಿ ಉಸಿರು ಗಟ್ಟಿಸಿ ಕೊಲೆ ಮಾಡಿದ್ದಾರೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಬಳಿಕ ಮೃತದೇಹವನ್ನು ಮನೆಯೊಳಗೇ ಬಿಟ್ಟು ಬಾಗಿಲು ಹಾಕಿಕೊಂಡು ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದಾರೆ.

ಕೊಲೆ ನಡೆದ ಬಳಿಕ ಆರೋಪಿಗಳು ಪೊಲೀಸರಿಂದ ತಪ್ಪಿಸಿಕೊಳ್ಳಲು ವಿವಿಧ ಸ್ಥಳಗಳಿಗೆ ತೆರಳಿ ಸುತ್ತಾಟ ನಡೆಸಿದ್ದರು. ಬಿಂದು ಮತ್ತು ವಿನಯ್ ಪ್ರವಾಸಕ್ಕೆ ಹೋಗುತ್ತಿರುವಂತೆ ನಟಿಸಿ ಹಲವು ನಗರಗಳಿಗೆ ತೆರಳಿದ್ದರು. ಅಲ್ಲದೆ ಕೆಲವು ಧಾರ್ಮಿಕ ಸ್ಥಳಗಳಿಗೂ ಭೇಟಿ ನೀಡಿರುವುದಾಗಿ ತನಿಖೆಯಲ್ಲಿ ತಿಳಿದುಬಂದಿದೆ. ಸ್ಥಳದಿಂದ ಸ್ಥಳಕ್ಕೆ ಹೋಗುವುದರಿಂದ ಪೊಲೀಸರಿಗೆ ಸಿಕ್ಕದಂತೆ ತಪ್ಪಿಸಿಕೊಳ್ಳಬಹುದು ಎಂದು ಅವರು ಭಾವಿಸಿದ್ದರು ಎನ್ನಲಾಗಿದೆ.

ಆದರೆ ಪೊಲೀಸರ ತಾಂತ್ರಿಕ ತನಿಖೆ ಹಾಗೂ ಮೊಬೈಲ್ ಲೊಕೇಶನ್ ಪರಿಶೀಲನೆ ಅವರ ಯೋಜನೆಯನ್ನು ವಿಫಲಗೊಳಿಸಿತು. ಬಿಂದು ಅವರ ಮೊಬೈಲ್ ಚಲನವಲನಗಳನ್ನು ಆಧರಿಸಿ ಪೊಲೀಸರು ವಿಶೇಷ ತಂಡವನ್ನು ರಚಿಸಿ ಅವರಿರುವ ಸ್ಥಳವನ್ನು ಪತ್ತೆಹಚ್ಚಿದರು. ನಂತರ ಆ ಸ್ಥಳಕ್ಕೆ ತೆರಳಿದ ಪೊಲೀಸರು ಬಿಂದು, ವಿನಯ್ ಹಾಗೂ ಧನುಷ್ ಅವರನ್ನು ಬಂಧಿಸಿದರು. ವಿಚಾರಣೆ ವೇಳೆ ಆರಂಭದಲ್ಲಿ ಆರೋಪಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ, ತೀವ್ರ ವಿಚಾರಣೆ ನಂತರ ಕೊಲೆಯ ಸಂಪೂರ್ಣ ಕಥೆಯನ್ನು ಬಿಚ್ಚಿಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ಮೃತನ ಸಂಬಂಧಿಕರು

ಬೆಂಗಳೂರು ಉತ್ತರ ಪಶ್ಚಿಮ ವಿಭಾಗದ ಡಿಸಿಪಿ ಡಿ.ಎಲ್. ನಾಗೇಶ್ ಅವರು ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದು, ಬಿಂದು ಮತ್ತು ವಿನಯ್ ನಡುವೆ ಆಪ್ತ ಸಂಬಂಧ ಬೆಳೆದಿದ್ದು ಇಬ್ಬರೂ ಮದುವೆಯಾಗಲು ನಿರ್ಧರಿಸಿದ್ದರು ಎಂದು ಹೇಳಿದ್ದಾರೆ. ಆದರೆ ಮೋಹನ್ ರಾವ್ ಈ ಸಂಬಂಧಕ್ಕೆ ಅಡ್ಡಿಯಾಗುತ್ತಿದ್ದ ಕಾರಣ ಅವನನ್ನು ಕೊಲೆ ಮಾಡಲು ಸಂಚು ರೂಪಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಪೊಲೀಸ್ ತನಿಖೆಯಲ್ಲಿ ಮತ್ತೊಂದು ಆಘಾತಕಾರಿ ಸಂಗತಿ ಬಹಿರಂಗವಾಗಿದೆ. ಆರೋಪಿಗಳು ಮೋಹನ್ ರಾವ್ ಅವರಿಗೆ ಬಲವಂತವಾಗಿ ವೈಯಾಗ್ರಾ ಮಾತ್ರೆ ತಿನ್ನಿಸಲು ಯತ್ನಿಸಿದ್ದಾರೆ. ಅದಕ್ಕೆ ಅವರು ವಿರೋಧ ವ್ಯಕ್ತಪಡಿಸಿದಾಗ ಕೋಪಗೊಂಡ ಆರೋಪಿಗಳು ಚಾಕುವಿನಿಂದ ಇರಿದು ಹಾಗೂ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಈ ಘಟನೆ ವೈಯಕ್ತಿಕ ಸಂಬಂಧಗಳ ಗೊಂದಲ, ಪ್ರೀತಿ ದ್ವೇಷಗಳ ಸಂಘರ್ಷ ಹಾಗೂ ಅತಿಯಾದ ಭಾವನಾತ್ಮಕ ನಿರ್ಧಾರಗಳ ಪರಿಣಾಮ ಎಷ್ಟು ಭೀಕರವಾಗಬಹುದು ಎಂಬುದಕ್ಕೆ ಉದಾಹರಣೆಯಾಗಿದೆ. ಸಹಜೀವನದ ಸಂಬಂಧದಿಂದ ಆರಂಭವಾದ ಕಥೆ ಕೊನೆಗೆ ಕೊಲೆ ಪ್ರಕರಣವಾಗಿ ಅಂತ್ಯ ಕಂಡಿರುವುದು ಸಮಾಜದಲ್ಲಿ ಆತಂಕ ಮೂಡಿಸಿದೆ. ಪ್ರಸ್ತುತ ಮೂವರನ್ನೂ ಪೊಲೀಸ್ ಕಸ್ಟಡಿಗೆ ತೆಗೆದುಕೊಂಡಿದ್ದು, ಪ್ರಕರಣದ ಮುಂದಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಅನುಮಾನಕ್ಕೆ ಬಲಿಯಾಯ್ತು ರಶ್ಮಿಕಾ ರಕ್ಷಿತ್ ಪ್ರೀತಿ?! ರಶ್ಮಿಕಾ ತಾಯಿಯ ಆಡಿಯೋ ಬಾಂಬ್ ಬ್ಲಾಸ್ಟ್!!




**ರಶ್ಮಿಕಾ ಮಂದಣ್ಣ ಬ್ರೇಕಪ್‌ಗೆ ರಕ್ಷಿತ್ ಶೆಟ್ಟಿಯೇ ಕಾರಣವೆಂದು ಈ ಹಿಂದೆ ದೂಷಿಸಲಾಗಿತ್ತು. ಆದರೆ, ಇದೀಗ ರಶ್ಮಿಕಾ ತಾಯಿಯದ್ದು ಎನ್ನಲಾದ ಆಡಿಯೋವೊಂದು ವೈರಲ್ ಆಗಿದ್ದು ರಕ್ಷಿತ್ ಅನುಮಾನ ಮತ್ತು ಸರ್ವಾಧಿಕಾರಿ ಮನಸ್ಥಿತಿಯೇ ಅವರ ಸಂಬಂಧ ಮುರಿಯಲು ಕಾರಣ ಎಂಬುದನ್ನು ಬಹಿರಂಗಪಡಿಸಿದೆ!**



ಸ್ಯಾಂಡಲ್‌ವುಡ್‌ನ ಅತೀ ದೊಡ್ಡ ಸುದ್ದಿಯೊಂದು ಇದೀಗ ಸ್ಫೋಟಗೊಂಡಿದೆ. ಸುಮಾರು ಎಂಟು ವರ್ಷಗಳ ಹಿಂದೆ ಇಡೀ ಕರ್ನಾಟಕವೇ ಮೆಚ್ಚಿಕೊಂಡಿದ್ದ 'ಕರುನಾಡ ಕ್ರಶ್' ರಶ್ಮಿಕಾ ಮಂದಣ್ಣ ಮತ್ತು ಖ್ಯಾತ ನಟ ರಕ್ಷಿತ್ ಶೆಟ್ಟಿ ಅವರ ಪ್ರೇಮಕಥೆ ಮುರಿದುಬಿದ್ದಾಗ, ಎಲ್ಲರೂ ಬೆರಳು ತೋರಿಸಿದ್ದು ರಶ್ಮಿಕಾ ಕಡೆಗೆ! ರಶ್ಮಿಕಾ ಮಂದಣ್ಣ ನಂಬಿಕೆ ದ್ರೋಹಿ, ಆಕೆ ಮೋಸಗಾತಿ ಎಂಬ ಹಣೆಪಟ್ಟಿ ಹಚ್ಚಿ ಸಾಮಾಜಿಕ ಜಾಲತಾಣಗಳಲ್ಲಿ ಭೀಕರವಾಗಿ



ಟ್ರೋಲ್ ಮಾಡಲಾಗಿತ್ತು! ಆದರೆ, ಈ ಬ್ರೇಕಪ್‌ಗೆ ಅಸಲಿ ಕಾರಣ ರಶ್ಮಿಕಾ ಅಲ್ಲ, ಬದಲಾಗಿ ಚಾರ್ಲಿಯ ಅತಿಯಾದ ಅನುಮಾನ, ಅಸೂಯೆ ಮತ್ತು 'ಹಿಟ್ಲರ್' ಮನಸ್ಥಿತಿ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ! ರಶ್ಮಿಕಾ ಅವರ ತಾಯಿಯದ್ದು ಎನ್ನಲಾದ ಆಡಿಯೋ... ಇದೀಗ ವೈರಲ್ ಆಗಿ ಇಂಥ ಸತ್ಯವನ್ನು ಸ್ಫೋಟಿಸಿದೆ...

ಹಿರಿಯ ಸಿನಿಮಾ ಪತ್ರಕರ್ತ ಮಹೇಶ್ ದೇವಶೆಟ್ಟಿ ತಮ್ಮ ಯೂಟ್ಯೂಬ್ ಚಾನೆಲ್ 'ಕೊನೆ ಆಟ ಯಾರನ್ನು ಬಿಡಲ್ಲ'ದಲ್ಲಿ ರಶ್ಮಿಕಾ ರಕ್ಷಿತ್ ಬ್ರೇಕಪ್ ಘಟನೆಯ ಬಗ್ಗೆ ಮಾತನಾಡಿದ್ದಾರೆ. ಅದರೊಂದಿಗೆ ರಶ್ಮಿಕಾ ಮಂದಣ್ಣ ಅವರ ತಾಯಿ ಸುಮನ್ ಮಂದಣ್ಣ ಅವರದ್ದು



ಮಹೇಶ್ ದೇವಶೆಟ್ಟಿ

ಎನ್ನಲಾದ ಆಡಿಯೋವನ್ನು ರಿಲೀಸ್ ಮಾಡಿದ್ದಾರೆ. ಇದರಲ್ಲಿ ನಟನ ಅವರ ಸರ್ವಾಧಿ ಕಾರಿ ವರ್ತನೆಯನ್ನು ಎಳೆಎಳೆಯಾಗಿ ಅವರು ಬಿಚ್ಚಿಟ್ಟಿದ್ದಾರೆ.

ರಶ್ಮಿಕಾ ಮಾಡೆಲಿಂಗ್ ಲೋಕದಲ್ಲಿದ್ದಾಗ ಆಕೆಯನ್ನು ಚಿತ್ರರಂಗಕ್ಕೆ ಕರೆತಂದಿದ್ದು ಇದೇ ನಟ. ಆದರೆ ಪ್ರೀತಿ ಬೆಳೆದಂತೆ ನಟನಲ್ಲಿ ಪೊಸೆಸ್ಸಿವ್ ನೆಸ್ ಅತಿಯಾಯಿತು. ಆಕೆ ಎಲ್ಲಿ ಹೋಗಬೇಕು, ಯಾರ ಜೊತೆ ಇರಬೇಕು ಎಂಬುದನ್ನು ಆತನೇ ನಿರ್ಧರಿಸುತ್ತಿದ್ದ. ಆಕೆ ಕುಳಿತರೂ ತಪ್ಪು, ನಿಂತರೂ ತಪ್ಪು ಎನ್ನುವಂತಹ ಡಿಕ್ಟೇಟರ್‌ಶಿಪ್ ನಡೆಸುತ್ತಿದ್ದ ಎಂದು ಆರೋಪಿಸಲಾಗಿದೆ.

35 ವರ್ಷದ ವ್ಯಕ್ತಿಗೆ 21 ವರ್ಷದ ನನ್ನ ಮಗಳನ್ನು ಕೊಡಲು ಒಪ್ಪಿದ್ದೇ ನನ್ನ ದೊಡ್ಡತನ... ಬ್ರೇಕಪ್ ಸಮಯದಲ್ಲಿ ರಶ್ಮಿಕಾಗೆ ಕೇವಲ 21 ವರ್ಷ, ಆದರೆ ನಟನಿಗೆ 35 ವರ್ಷ ವಯಸ್ಸು. '21 ವರ್ಷದ ಹುಡುಗಿಯನ್ನು 35 ವರ್ಷದ ಹುಡುಗನಿಗೆ ಕೊಟ್ಟಿದ್ದೇ ನನ್ನ ದೊಡ್ಡತನ' ಎಂದು ರಶ್ಮಿಕಾ ತಾಯಿ ನೋವಿನಿಂದ ಹೇಳಿಕೊಂಡಿದ್ದಾರೆ! ಇಷ್ಟಿದ್ದರೂ ಮಿಸ್ಟರ್ ಚಾರ್ಲಿ ಸಣ್ಣಪುಟ್ಟ ವಿಷಯಕ್ಕೂ ರಶ್ಮಿಕಾ ಮನೆಗೆ ಬಂದು ಗಲಾಟೆ ಮಾಡುತ್ತಿದ್ದ. ಆಕೆಯ ಮೇಲೆ ಸವಾರಿ ಮಾಡಲು ನೋಡುತ್ತಿದ್ದ ಎಂದು ಆಡಿಯೋದಲ್ಲಿ ದೂರಲಾಗಿದೆ.

ರಶ್ಮಿಕಾ ಸಿನಿಮಾ ರಂಗದಲ್ಲಿ ಸ್ಟಾರ್ ನಟರಾದ ದರ್ಶನ್, ಧ್ರುವ ಸರ್ಜಾ, ಗಣೇಶ್ ಅವರೊಂದಿಗೆ ನಟಿಸಿ ಬೆಳೆಯುತ್ತಿರುವುದು ನಟನಿಗೆ



ಸಹಿಸಲು ಸಾಧ್ಯವಾಗಲಿಲ್ಲ. ಅದರಲ್ಲೂ ರಶ್ಮಿಕಾಗೆ ತೆಲುಗಿನ 'ಗೀತಾ ಗೋವಿಂದಂ' ಸಿನಿಮಾದಲ್ಲಿ ಅವಕಾಶ ಸಿಕ್ಕಾಗ ನಟ ಹಾಗೂ ಆತನ ಗ್ಯಾಂಗ್ ಆಕೆಯ ಮೇಲೆ ಸಿನಿಮಾ ಬಿಟ್ಟುಬಿಡುವಂತೆ ಅತಿಯಾದ ಒತ್ತಡ ಹೇರಿತು ಎಂದಿದ್ದಾರೆ.

'ನಾನು ಇನ್ನು ಮುಂದೆ ಸಿನಿಮಾ ಮಾಡುವುದಿಲ್ಲ ಎಂದು ಟ್ವೀಟ್ ಮಾಡಿ ವೃತ್ತಿಜೀವನ ಅಂತ್ಯಗೊಳಿಸು' ಎಂದು ಆಕೆಗೆ ಹೇಳಲಾಗಿತ್ತು ಎಂದು ರಶ್ಮಿಕಾ ಅವರ ತಾಯಿ ಆಡಿಯೋದಲ್ಲಿ ಹೇಳಿದ್ದಾರೆ.

ಇನ್ನು ಗೀತಾ ಗೋವಿಂದಂ ಸಿನಿಮಾದಲ್ಲಿ ಕಥೆಯ ಅಗತ್ಯಕ್ಕೆ ತಕ್ಕಂತೆ ಕಿಸ್ಸಿಂಗ್ ಸೀನ್ ಒಂದರಲ್ಲಿ ರಶ್ಮಿಕಾ ನಟಿಸಿದ್ದರು. ಇದಕ್ಕೆ ಮೊದಲೇ ಆಕೆಯ ತಾಯಿ ಅನುಮತಿ ನೀಡಿದ್ದರು. ಆದರೆ ಈ ದೃಶ್ಯ ವೈರಲ್ ಆದ ತಕ್ಷಣ ನಟ ಸಂಪೂರ್ಣವಾಗಿ ಬದಲಾಗಿಬಿಟ್ಟ. ರಶ್ಮಿಕಾಳನ್ನು ಸಿನಿಮಾದಿಂದ ಬಿಡಿಸಿ, ಮದುವೆ ಮಾಡಿಕೊಂಡು ಮನೆಯೊಳಗೆ ಕೂಡಿಹಾಕಬೇಕು ಎಂಬುದು ಆತನ ಗ್ಯಾಂಗ್‌ನ ಪ್ಲ್ಯಾನ್ ಆಗಿತ್ತು ಎಂದು ಅವರ ತಾಯಿ ಆಡಿಯೋದಲ್ಲಿ ಹೇಳಿದ್ದಾರೆ

ರಶ್ಮಿಕಾ ತಾಯಿ ವಿವರಿಸಿದ ಮತ್ತೊಂದು ಘಟನೆ ನಟನ ವರ್ತನೆಗೆ ಸಾಕ್ಷಿ ಎನ್ನುವಂತಿದೆ. 'ಗೀತಾ ಗೋವಿಂದಂ' ಸಿನಿಮಾ ಬಿಡುಗಡೆಯ ಮುನ್ನಾದಿನ ರಾತ್ರಿ ಎರಡು ಗಂಟೆಗೆ ನಟ ಮತ್ತು ಆತನ ಮ್ಯಾನೇಜರ್ ರಶ್ಮಿಕಾಗೆ ಫೋನ್ ಮಾಡಿ, 'ಈ ಕೂಡಲೇ ಇನ್ನೋವಾ ಕಾರ್ ಹತ್ತಿ ಬೆಂಗಳೂರಿಗೆ ಬಾ, ನಟನನ್ನು ನೋಡಿ ಬೆಳಿಗ್ಗೆ 8 ಗಂಟೆಗೆ ವಾಪಸ್ ಹೋಗು' ಎಂದು ಹಠ ಹಿಡಿದಿದ್ದರಂತೆ. ಪ್ರೆಸ್ ಮೀಟ್ ಮತ್ತು ಸಿನಿಮಾ ಬಿಡುಗಡೆಯ ಒತ್ತಡದಲ್ಲಿದ್ದ ರಶ್ಮಿಕಾಳ ಸುರಕ್ಷತೆಯ ಬಗ್ಗೆ ಕಿಂಚಿತ್ತೂ ಯೋಚಿಸದೆ ಆತ ವರ್ತಿಸಿದ್ದ ಎಂದು ತಾಯಿ ಕಿಡಿಕಾರಿದ್ದಾರೆ.

ಇನ್ನು ನಟ, ತನ್ನ ತಾಯಿ ಮತ್ತು ಅಣ್ಣನ ಹೆಂಡತಿಯ ಮೂಲಕ ರಶ್ಮಿಕಾ ತಾಯಿಗೆ ಫೋನ್ ಮಾಡಿಸಿ ಕಿರುಕುಳ ನೀಡುತ್ತಿದ್ದ ಎನ್ನಲಾಗಿದೆ. ಯಾವುದೇ ತಪ್ಪು ಮಾಡದಿದ್ದರೂ ರಶ್ಮಿಕಾ ತಾಯಿ ಬಂದು ನಟನ ತಾಯಿಗೆ 'ಸಾರಿ' ಕೇಳಬೇಕು ಎಂಬ ವಿಚಿತ್ರ ಡಿಮ್ಯಾಂಡ್ ಇಡಲಾಗಿತ್ತು. 'ನಾನು ಹತ್ತು ಜನರಿಗೆ ಸಹಾಯ ಮಾಡಿದವಳು, ತಪ್ಪು ಮಾಡದೆ ಸಾರಿ ಕೇಳುವ ಅವಶ್ಯಕತೆ ಇಲ್ಲ' ಎಂದು ರಶ್ಮಿಕಾ ಅವರ ತಾಯಿ ಆಡಿಯೋದಲ್ಲಿ ಹೇಳಿದ್ದಾರೆ.

ಇಷ್ಟು ದಿನ ರಶ್ಮಿಕಾ ಬಗ್ಗೆ ಕೆಟ್ಟದಾಗಿ ಮಾತಾಡಿದ್ದ ಜನರು, ಆಕೆಯನ್ನು ಪ್ರಾಣಿಗಳಿಗೆ ಹೋಲಿಸಿ ಟ್ರೋಲ್ ಮಾಡಿದ್ದವರು ಈಗ ಆಕೆಯ ಮೌನದ ಹಿಂದಿನ ನೋವನ್ನು ಅರ್ಥಮಾಡಿಕೊಳ್ಳಬೇಕಿದೆ. ಸ್ಕ್ರೀನ್ ಮೇಲೆ 'ಲವರ್ ಬಾಯ್' ಆಗಿ, ಎಮೋಷನಲ್ ವ್ಯಕ್ತಿಯಾಗಿ ಕಾಣಿಸಿಕೊಳ್ಳುವ ಹೀರೋಗಳ ನಿಜ ಜೀವನದ ಮುಖವಾಡ ಇಷ್ಟು ಭಯಾನಕವಾಗಿರುತ್ತದೆಯೇ?!

# ಅಣ್ಣಾ ಯೂನಿವರ್ಸಿಟಿಯ ಟಾಪರ್ ವಿನೋದ್ ರಾಜ್ ಪುತ್ರ ಯುವರಾಜ್!



ಹಿರಿಯ ನಟಿ ಲೀಲಾವತಿ ಅವರ ಮೊಮ್ಮಗ ಹಾಗೂ ಸ್ಯಾಂಡಲ್‌ವುಡ್ ನಟ ವಿನೋದ್ ರಾಜ್ ಅವರ ಪುತ್ರ ಯುವರಾಜ್ ಚೆನ್ನೈನ ಅಣ್ಣಾ ಯೂನಿವರ್ಸಿಟಿಯಲ್ಲಿ ಇಂಜಿನಿಯರಿಂಗ್ ಪದವಿ ಪೂರೈಸಿದ್ದು, ಇತ್ತೀಚೆಗೆ ನಡೆದ ಪದವಿ ಪ್ರಧಾನ ಸಮಾರಂಭದಲ್ಲಿ ತಂದೆ ತಾಯಿ ಜೊತೆ ಪದವಿ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ. ಯುವರಾಜ್ ಇಡೀ ಕಾಲೇಜಿಗೆ ಟಾಪ್ ರ್‍ಯಾಂಕ್ ಪಡೆದಿದ್ದಾರೆ ಎನ್ನಲಾಗಿದೆ.

ಅನೇಕ ಸಿನಿಮಾ ತಾರೆಯರ ಮಕ್ಕಳು ಸಹಜವಾಗಿಯೇ ಬಣ್ಣದ ಲೋಕದ ಕಡೆ ಮುಖ ಮಾಡುವುದು ವಾಡಿಕೆ. ಆದರೆ, ನಟ ವಿನೋದ್ ರಾಜ್ ಅವರು ತಮ್ಮ ಮಗನ ಶಿಕ್ಷಣದ ವಿಚಾರದಲ್ಲಿ ಮೊದಲಿನಿಂದಲೂ ವಿಶೇಷ ಕಾಳಜಿ ವಹಿಸಿದ್ದರು. ಅಜ್ಜಿಯ ಹಾಗೂ ತಂದೆಯ ಆಸೆಯಂತೆ ಶ್ರದ್ಧೆಯಿಂದ ಓದಿದ ಪುತ್ರ ಯುವರಾಜ್, ಎಂಜಿನಿಯರಿಂಗ್‌ನಲ್ಲಿ ಅಸಾಧಾರಣ ಸಾಧನೆ ಮಾಡಿದ್ದಾರೆ. ಚೆನ್ನೈನ ಅಣ್ಣಾ ಯೂನಿವರ್ಸಿಟಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಸಾವಿರಾರು ವಿದ್ಯಾರ್ಥಿಗಳ ನಡುವೆ ಯುವರಾಜ್ ವೇದಿಕೆಯ ಮೇಲೆ ಗೌರವ ಸ್ವೀಕರಿಸಿದ್ದಾರೆ. ಚೆನ್ನೈನಲ್ಲಿ ನಡೆದ ಈ ಕಾನ್ವೋಕೇಷನ್ ಸಮಾರಂಭದಲ್ಲಿ ವಿನೋದ್ ರಾಜ್ ಮತ್ತು ಅವರ ಪತ್ನಿ ಅನು ಅವರು ಪಾಲ್ಗೊಂಡು ತಮ್ಮ ಮಗನ ಸಾಧನೆಯನ್ನ ಕಣ್ಣಾರೆ ಕಂಡು ಸಂಭ್ರಮಿಸಿದ್ದಾರೆ.

ಹಿರಿಯ ನಟಿ ಲೀಲಾವತಿಯವರು ಬದುಕಿದ್ದಾಗ, ತಮ್ಮ ಮೊಮ್ಮಗನ ವಿದ್ಯಾಭ್ಯಾಸದ ಬಗ್ಗೆ ಸದಾ ಪ್ರೋತ್ಸಾಹ ನೀಡುತ್ತಿದ್ದರು. ಮೊಮ್ಮಗ ಎಂಜಿನಿಯರ್ ಆಗಬೇಕು, ಸಮಾಜದಲ್ಲಿ ಉತ್ತಮ ಹೆಸರು ಮಾಡಬೇಕು ಅನ್ನೋದು ಅವರ ಕನಸಾಗಿತ್ತು. ಈ ಬಗ್ಗೆ ಈ ಹಿಂದೆ ಸಂದರ್ಶನವೊಂದರಲ್ಲಿ ವಿನೋದ್ ರಾಜ್ ಅವರ ಪತ್ನಿ ಅನು ಮಾತನಾಡಿದ್ದರು. ಮಗನನ್ನ ಚಿತ್ರರಂಗಕ್ಕೆ ಕಳಿಸೋ ಪ್ಲ್ಯಾನ್ ಇದೆಯಾ? ಅನ್ನೋ ಪ್ರಶ್ನೆಗೆ,



'ನಮ್ಮ ಅತ್ತೆಯವರಿಗೆ ನನ್ನ ಮಗನನ್ನ ಒಬ್ಬ ಒಳ್ಳೆಯ ಉನ್ನತ ಅಧಿಕಾರಿಯಾಗಿ ಮಾಡೋ ಆಸೆಯಿತ್ತು. ಒಳ್ಳೆಯ ಎಜುಕೇಷನ್ ಲೈನ್‌ನಲ್ಲಿ ಹೋಗಬೇಕು ಅಂತ ಹೇಳ್ತಿದ್ರು. ಯಾಕೆಂದರೆ, ಬಹುಶಃ ಅವರು ತುಂಬಾ ಕಷ್ಟಪಟ್ಟಿದ್ದಾರೆ. ಹಾಗಾಗಿ, ಆ ಜೀವನ ಬೇಡಪ್ಪ. ನೀನು ಒಳ್ಳೆಯ ದಾರಿಯಲ್ಲಿ ನಡಿ. ಒಳ್ಳೆ ಉದ್ಯೋಗ ಸಿಗಬೇಕು, ಚೆನ್ನಾಗಿ ಬಾಳಬೇಕು ನೀನು ಅಂತ ಹೇಳ್ತಿದ್ರು' ಎಂದು ಅನು ಅವರು ಹೇಳಿಕೊಂಡಿದ್ದರು. ಇದೆಲ್ಲಾ ಈಗ ರಿವೀಲ್ ಆಗುತ್ತಿದೆ...

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 15.3.2026



# ಮಹಿಳೆಯರ ಉಡುಗೆ ಬಗ್ಗೆ ಪ್ರಶ್ನೆ ಬೇಡ: ರಾಶಿ ಖನ್ನಾ

ನಟಿಯರ ವಸ್ತ್ರಧಾರಣೆ ಬಗ್ಗೆ ತೆಲುಗು ನಟ ಶಿವಾಜಿ ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾದ ಹಿನ್ನೆಲೆ ನಟಿ ರಾಶಿ ಖನ್ನಾ ಪ್ರತಿಕ್ರಿಯಿಸಿದ್ದಾರೆ. ಮಹಿಳೆಯರು ಯಾವ ರೀತಿಯ ಬಟ್ಟೆ ಧರಿಸಬೇಕು ಎನ್ನುವುದು ಅವರ ವೈಯಕ್ತಿಕ ಆಯ್ಕೆ ಎಂದು ಅವರು ಹೇಳಿದ್ದಾರೆ. ಸಿನಿಮಾ ಪ್ರಚಾರದ ವೇಳೆ ಮಾತನಾಡಿದ ಅವರು, ಮಹಿಳೆಗೆ ಕಂಫರ್ಟ್ ಆಗಿದ್ದರೆ ಸಾಕು, ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ ಎಂದರು. ಇಂಡಿಯನ್ ಆಗಿರಲಿ ಅಥವಾ ವೆಸ್ಟರ್ನ್ ಆಗಿರಲಿ, ಯಾವ ಬಟ್ಟೆ ತೊಡಬೇಕು ಎನ್ನುವುದು ಮಹಿಳೆಯರ ಇಷ್ಟ ಎಂದು ರಾಶಿ ಖನ್ನಾ ಸ್ಪಷ್ಟಪಡಿಸಿದರು. ಅವರ ಈ ಹೇಳಿಕೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

# ವಿಷ್ಣು ದಾದ ಮಾತು ನೆನಪಿಸಿದ ಉಪೇಂದ್ರ

ಸಾಹಸ ಸಿಂಹ ವಿಷ್ಣುವರ್ಧನ್ ಅಭಿನಯದ 'ಕೋಟಿಗೊಬ್ಬ' ಸಿನಿಮಾ ಬಿಡುಗಡೆಯಾಗಿ 25 ವರ್ಷ ಪೂರೈಸಿದ ಹಿನ್ನೆಲೆ ವಿಶೇಷ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲಾಯಿತು. ವಿಷ್ಣುವರ್ಧನ್ ಅವರ ವೃತ್ತಿ ಜೀವನದಲ್ಲಿ ದೊಡ್ಡ ಯಶಸ್ಸು ಕಂಡ ಸಿನಿಮಾಗಳಲ್ಲಿ 'ಕೋಟಿಗೊಬ್ಬ' ಕೂಡ ಒಂದು. ಚಿತ್ರವನ್ನು ನಾಗಣ್ಣ ನಿರ್ದೇಶಿಸಿದ್ದು, ನಿರ್ಮಾಪಕ ಸೂರಪ್ಪ ಬಾಬು ನಿರ್ಮಿಸಿದ್ದರು.

ಈ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಲವು ಗಣ್ಯರು ಭಾಗವಹಿಸಿದ್ದರು. ಉಪೇಂದ್ರ, ಪ್ರಿಯಾಂಕಾ ಉಪೇಂದ್ರ, ಗಣೇಶ್, ದೇವರಾಜ್ ಸೇರಿದಂತೆ ಹಲವರು ವೇದಿಕೆಗೆ ಆಗಮಿಸಿ 'ಕೋಟಿಗೊಬ್ಬ' ಚಿತ್ರದ ಯಶಸ್ಸನ್ನು ನೆನಪಿಸಿಕೊಂಡರು. ಚಿತ್ರದ ಜೊತೆಗಿನ ತಮ್ಮ ಅನುಭವಗಳನ್ನು ಹಂಚಿಕೊಂಡು ವಿಷ್ಣುವರ್ಧನ್ ಅವರನ್ನು ಸ್ಮರಿಸಿದರು.






ಕಾರ್ಯಕ್ರಮದಲ್ಲಿ ಮಾತನಾಡಿದ ಉಪೇಂದ್ರ, ವಿಷ್ಣುವರ್ಧನ್ ಅವರ ವ್ಯಕ್ತಿತ್ವ ಮತ್ತು ಅವರ ಮಾತುಗಳನ್ನು ನೆನಪಿಸಿಕೊಂಡರು. 'ಒಬ್ಬ ಮನುಷ್ಯನಿಗೆ ಯೋಗ ಬರುತ್ತದೆ. ಆದರೆ ಅದನ್ನು ಉಳಿಸಿಕೊಳ್ಳುವ ಯೋಗ್ಯತೆ ಇರಬೇಕು. ಯೋಗ ಮತ್ತು ಯೋಗ್ಯತೆ ಇದ್ದರೆ ಮಾತ್ರ ಸಿನಿಮಾರಂಗದಲ್ಲಿ ಚಪ್ಪಾಳೆ ತಟ್ಟುತ್ತಾರೆ ಎಂದು ವಿಷ್ಣು ಸರ್ ಹೇಳುತ್ತಿದ್ದರು' ಎಂದು ಹೇಳಿದರು.

ವಿಷ್ಣುವರ್ಧನ್ ಉತ್ತಮ ಮಿಮಿಕ್ರಿ ಕಲಾವಿದರಾಗಿದ್ದು, ಹಲವರನ್ನು ಅದ್ಭುತವಾಗಿ ಅನುಕರಿಸುತ್ತಿದ್ದರು ಎಂದು ಉಪೇಂದ್ರ ಹೇಳಿದರು. ಅವರಂತಹ ಮಹಾನ್ ಕಲಾವಿದರ ಸಿನಿಮಾಗಳು ಮತ್ತೆ ಮತ್ತೆ ರೀರಿಲೀಸ್ ಆಗುತ್ತಾ ಇರಬೇಕು ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟರು.

# ಹಿರಿಯ ಪತ್ರಕರ್ತ ಕೆ.ಜೆ. ಕುಮಾರ್ ಇನ್ನಿಲ್ಲ...



ಮೈಸೂರಿನ ಹಿರಿಯ ಪತ್ರಕರ್ತ ಕೆ.ಜೆ. ಕುಮಾರ್ ಮಾರ್ಚ್ 10 ರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿತ್ತು. ಉಡುಪಿ ಜಿಲ್ಲೆಯ ಕೊರಂದರ ಪಾಳ್ಯದಲ್ಲಿ ರಘು ರಾಮ್ ಶೆಟ್ಟಿ ಮತ್ತು ಶಾರದಾ ಅವರ ಜೇಷ್ಠ ಪುತ್ರರಾಗಿ 1952ರ ನವಂಬರ್ 6 ರಂದು ಜನಿಸಿದರು. ಅಖಂಡ 56 ವರ್ಷಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿ ಹಾಗೂ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದರು.

1969ರಲ್ಲಿ ಸೋದರ ಮಾವ ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಸ್ವತಂತ್ರ ಹೋರಾಟಗಾರ ಎ. ರಾಮಣ್ಣ ಸಂಪಾದಕತ್ವದ 'ವಿಜಯ' ದಿನ ಪತ್ರಿಕೆಯಲ್ಲಿ ಪತ್ರಕರ್ತರಾಗಿ ವೃತ್ತಿ




ಬದುಕು ಆರಂಭಿಸಿದರು. ನಂತರ ವಿಜಯ ದಿನಪತ್ರಿಕೆಯ ಪ್ರಕಾಶಕ ಮುದ್ರಕರಾಗಿದ್ದರು. ನಂತರ ಅವರು ಸಿನಿಮಾ ಪತ್ರಕರ್ತರಾಗಿ ಸುಧಾ ವಾರ ಪತ್ರಿಕೆ, ವಿಜಯಚಿತ್ರ ಸಿನಿಮಾ ಮಾಸ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದರು. ನಂತರ 1978 ರಿಂದ ರೂಪಾತಾರ ಸಿನಿಮಾ ಮಾಸ ಪತ್ರಿಕೆಗೆ ಮೂರೂ ದಶಕಗಳ ಕಾಲ ಪತ್ರಕರ್ತರಾಗಿ ಸೇವೆ ಸಲ್ಲಿಸಿದರು. 1993ರಲ್ಲಿ ಉದಯವಾಣಿ ದಿನಪತ್ರಿಕೆ ಬೆಂಗಳೂರು ಆವೃತ್ತಿ ಆರಂಭವಾದಾಗ ಮೈಸೂರಿನ ಪ್ರತಿನಿಧಿಯಾಗಿ ಸುಮಾರು ಮೂರುವರೆ ದಶಕಗಳ ಕಾಲ ಸೇವೆ ಸಲ್ಲಿಸಿದರು. ಕಳೆದ ಒಂದೂವರೆ ದಶಕಗಳಿಂದ 'ಹೊಸ ದಿಗಂತ' ದಿನ ಪತ್ರಿಕೆ ಸಿನಿಮಾ ವಿಭಾಗ ನೋಡಿಕೊಳ್ಳುತ್ತಿದ್ದರು.

ಪತ್ರಿಕಾ ಕ್ಷೇತ್ರವಲ್ಲದೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಅವರು ಮೈಸೂರಿನ ಸರಸ್ವತಿ ಪುರಂನಲ್ಲಿ 'ಕುಟೀರ' ಎಂಬ ಹೋಟೆಲ್ ಸ್ಥಾಪಿಸಿದ್ದರು. ಅದರಲ್ಲಿ ನಷ್ಟ ಅನುಭವಿಸಿ ಹೋಟೆಲ್ ಬಂದ್ ಮಾಡಿ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡರು. ಕನ್ನಡ ಚಿತ್ರೋದ್ಯಮದಲ್ಲಿ ಸಿನಿ ಪತ್ರಕರ್ತರಾಗಿ ದೊಡ್ಡ ಹೆಸರಾಗಿದ್ದ ಕೆ.ಜೆ. ಕುಮಾರ್, ಕನ್ನಡ ಚಿತ್ರ ರಂಗದ ದಿಗ್ಗಜರಾದ ಡಾ. ರಾಜ್ ಕುಮಾರ್, ವಿಷ್ಣುವರ್ಧನ್, ಅಂಬರೀಷ್,ಶ್ರೀನಿವಾಸ ಮೂರ್ತಿ, ರಜನಿಕಾಂತ್, ಶಿವಣ್ಣ, ರವಿಚಂದ್ರನ್, ಜಗ್ಗೇಶ್, ಶಶಿಕುಮಾರ್, ಆರತಿ, ಭಾರತಿ, ಲೀಲಾವತಿ, ಫಂಡರಿಬಾಯಿ, ಮಾಲಾಶ್ರೀ, ನಿರ್ಮಾಪಕರಾದ ದ್ವಾರಕೀಶ್, ವೀರಸ್ವಾಮಿ, ನಿರ್ದೇಶಕರಾದ ಎಸ್.ಆರ್. ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಮುಂತಾದವರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು.



ಶ್ರೀಯುತರು ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ ಮಾಜಿ ನಗರ ಪಾಲಿಕೆ ಸದಸ್ಯೆ ಶ್ರೀಮತಿ ಪ್ರಮೀಳಾ ಪ್ರಕಾಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಯಾದವಗಿರಿ ನಿವಾಸದಲ್ಲಿಡಲಾಗಿದ್ದ ಕುಮಾರ್ ಅಣ್ಣನ ಪಾರ್ಥಿವ ಶರೀರಕ್ಕೆ ಕನ್ನಡ ಚಿತ್ರರಂಗದ ಹಲವಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.



ಹಿರಿಯ ನಟಿ ಭಾರತಿ ವಿಷ್ಣುವರ್ಧನ್, ಹಿರಿಯ ನಟ ಜೈ ಜಗದೀಶ್, ಇವರ ಪತ್ನಿ ನಟಿ ನಿರ್ಮಾಪಕಿ ಶ್ರೀಮತಿ ವಿಜಯಲಕ್ಷ್ಮಿ ಸಿಂಗ್, ನಟ ಕೋಮಲ್ ಮತ್ತಿತರ ಚಲನಚಿತ್ರ ಕಲಾವಿದರು, ತಂತ್ರಜ್ಞರು ಹಾಜರಿದ್ದು ಅಂತಿಮ ನಮನ ಸಲ್ಲಿಸಿದರು. ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ರಜನಿ ಕಾಂತ್ ಅವರು ತಮ್ಮ ಟ್ವಿಟ್ಟರ್ ನಲ್ಲಿ ಕೆ.ಜೆ. ಕುಮಾರ್ ಅವರೊಂದಿಗಿನ 50 ವರ್ಷಗಳ ತಮ್ಮ ಒಡನಾಟವನ್ನು ನೆನೆದು ಸಂತಾಪ ಸೂಚಿಸಿದ್ದಾರೆ! ತಮ್ಮ ಟ್ವಿಟ್ಟರ್ ನಲ್ಲಿ 'ದಿವಂಗತ ಕೆ.ಜೆ. ಕುಮಾರ್‌ರವರು ನನ್ನ ಆತ್ಮೀಯ ಸ್ನೇಹಿತರು. ಆರಂಭಕಾಲದಿಂದಲೂ ನನ್ನ ನಟನೆಯನ್ನು ಮೆಚ್ಚಿ ಪ್ರೋತ್ಸಾಹಿಸಿದವರು. ಬಹಳ ಸರಳವಾಗಿ ಯಾವಾಗಲೂ ಹಸನ್ಮುಖಿಯಾಗಿ ಎಲ್ಲರ ಜೊತೆಯಲ್ಲಿದ್ದರು. ಅವರ ಅಗಲಿಕೆ ನನ್ನ ಮನಸ್ಸಿಗೆ ತುಂಬಾ ನೋವು ಉಂಟುಮಾಡಿದೆ. ಅವರ ಕುಟುಂಬಸ್ಥರಿಗೆ ನನ್ನ ಸಂತಾಪಗಳು' ಎಂದು ಟ್ವೀಟ್ ಮಾಡಿದ್ದಾರೆ.

ಗುರುವಾರ ಸಂಜೆ 5 ಗಂಟೆಗೆ ಮಾಜಿ ಶಾಸಕ ಶಂಕರ ಲಿಂಗೇ ಗೌಡರ ಪುತ್ರ, ಮಾಜಿ ನಗರ ಪಾಲಿಕೆ ಸದಸ್ಯ ನಂದೀಶ್ ಪ್ರೀತಮ್ ನೇತೃತ್ವದಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರೋ 'ಹರಿಶ್ಚಂದ್ರ ಘಾಟ್'ನಲ್ಲಿ ಕೆ.ಜೆ. ಕುಮಾರ್ ಅವರ ಏಕಮಾತ್ರ ಪುತ್ರಿ ಶ್ರೀಮತಿ ಸುನಯಾ ಶೆಟ್ಟಿ ಅಂತಿಮ ವಿಧಿ ವಿಧಾನ ನೆರವೇರಿಸಿದರು...

Vol. 41 No. 41 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news